ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

'ನೂರು ಅಡಿಗಳ ಬಣ್ಣದ ನಡೆ'ಯ

ಪ್ರೊ. ಟಿ.ಬಿ.ಸೊಲಬಕ್ಕನವರ್ ಅವರಿಗೆ ಗೌರವ ಡಾಕ್ಟರೇಟ್



ಸಂಪುಟ 12 | ಸಂಚಿಕೆ 46 | ನವೆಂಬರ್ 12–18, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com




ನನ್ನ ಉದ್ಯೋಗ ಎಲ್ಲಿ?

ಯುವ ಜನರ ಕೂಗು

ಅನರ್ಥಕಾರಿ ನೋಟು ನಿಷೇಧಕ್ಕೆ 2 ವರ್ಷ





ಉಪ ಚುನಾವಣೆ:


ಬಿಜೆಪಿ–ಬ್ರಾಂಡ್ ರಾಜಕೀಯಕ್ಕೆ ತಿರಸ್ಕಾರ



ಇರಾನ್ 'ವಿನಾಯ್ತಿ' ಅಲ್ಲ ಶರಣಾಗತಿ



ಕೊಪ್ಪಳದಲ್ಲಿ



ಅಯೋಧ್ಯಾ ವಿವಾದದ ನ್ಯಾಯಾಂಗ ಪ್ರಕ್ರಿಯೆಯನ್ನು ಬುಡಮೇಲು ಮಾಡಬೇಡಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

"ದೇಶದ ಐಕ್ಯತೆಯನ್ನು ನಾಶ ಮಾಡಲು ಹೊರಟಿರುವ ಶಕ್ತಿಗಳನ್ನು ಪೋಷಿಸುವುದನ್ನು ನಿಲ್ಲಿಸಬೇಕು"

ಅಯೋಧ್ಯಾ ವಿವಾದದ ಮೊಕದ್ದಮೆಯನ್ನು ಮುಂದೆ ಜನವರಿಯಲ್ಲಿ ಕೈಗೆತ್ತಿಕೊಳ್ಳುವ ಸುಪ್ರಿಂ ಕೋರ್ಟ್ ನಿರ್ಧಾರದ ಸುತ್ತ ಬೆಳೆಯುತ್ತಿರುವ ಸನ್ನಿವೇಶ ಬಹಳ ಆತಂಕಕಾರಿಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಬಿಜೆಪಿ–ಆರೆಸ್ಸೆಸ್ ಮುಖಂಡರು ಮತ್ತು ಬಿಜೆಪಿ ಸರಕಾರದ ಕೇಂದ್ರ ಮಂತ್ರಿಗಳು 1992ರ ಪರಿಸ್ಥಿತಿಯನ್ನು ಸೃಷ್ಟಿಸುವ ಬೆದರಿಕೆ ಹಾಕುತ್ತಾರೆ. ಬಾಬ್ರಿ ಮಸೀದಿಯ ಧ್ವಂಸ ಮತ್ತು ಅದನ್ನನುಸರಿಸಿ ದೇಶಾದ್ಯಂತ ರಕ್ತಪಾತದ ಜಾಡು ಮತ್ತು ಕೋಮುಗಲಭೆಗಳಿಗೆ ಕಾರಣವಾದ ಪರಿಸ್ಥಿತಿಯದು.

1994ರ ಸುಪ್ರಿಂ ಕೋರ್ಟ್ ತೀರ್ಪು ಬಾಬ್ರಿ ಮಸೀದಿ ಧ್ವಂಸವನ್ನು ಒಂದು 'ರಾಷ್ಟ್ರೀಯ ನಾಚಿಕೆಗೇಡಿನ' ಸಂಗತಿ ಎಂದು ವರ್ಣಿಸಿತ್ತು, "ಧ್ವಂಸ ಮಾಡಿರುವುದು ಕೇವಲ ಒಂದು ಪ್ರಾಚೀನ ಕಟ್ಟಡವನ್ನಲ್ಲ, ಬದಲಿಗೆ ಬಹುಸಂಖ್ಯಾತರು ನ್ಯಾಯಯುತವಾಗಿ, ವರ್ತಿಸುವ ಸಮಭಾವ ಹೊಂದಿರುವವರು ಎಂದು ಅಲ್ಪಸಂಖ್ಯಾತರಲ್ಲಿದ್ದ ವಿಶ್ವಾಸವನ್ನು ಧ್ವಂಸ ಮಾಡಿದೆ. ಅದು ಕಾನೂನಿನ ಆಳ್ವಿಕೆ ಮತ್ತು ಸಂವಿಧಾನಿಕ ಪ್ರಕ್ರಿಯೆಯಲ್ಲಿ ಅವರ ವಿಶ್ವಾಸವನ್ನು ಅಲುಗಾಡಿಸಿದೆ" ಎಂದು ಅದು ಹೇಳಿತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ತಾನು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರುತ್ತೇನೆ ಎಂದು ಬಿಜೆಪಿ ಅಧಿಕೃತವಾಗಿ ಹೇಳಿತ್ತು. ಆದರೆ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವಂತೆ ಅದೀಗ ತಿಪ್ಪರಲಾಗದಲ್ಲಿ ತೊಡಗಿಕೊಂಡಿದೆ. ಆರೆಸ್ಸೆಸ್ ನೇತೃತ್ವದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಒಂದು ಹೊಸ ಕಾನೂನನ್ನು ತರಬೇಕು ಎಂಬ ಆಗ್ರಹದೊಂದಿಗೆ ಗದ್ದಲ ಎಬ್ಬಿಸಲಾಗುತ್ತಿದೆ. ಇದು ನ್ಯಾಯಾಂಗ ಪ್ರಕ್ರಿಯೆಯನ್ನು ಬುಡಮೇಲು ಮಾಡುವ ಪ್ರಯತ್ನ ಎಂದೇ ಹೇಳಬೇಕಾಗುತ್ತದೆ, ಇದು ಸಂವಿಧಾನಬಾಹಿರ, ಅದರಿಂದಾಗಿ ಕಾನೂನುಬಾಹಿರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಹೇಳಿದೆ.

ಅಯೋಧ್ಯಾ ವಿವಾದದ ಮೇಲೆ ಭಾವೋನ್ಮಾದವನ್ನು ಬಡಿದೆಬ್ಬಿಸಿ ಮತ್ತು ದೇವಸ್ಥಾನದ ನಿರ್ಮಾಣದ ಬೇಡಿಕೆಯನ್ನು ಎತ್ತುವ ಮೂಲಕ ಆರೆಸ್ಸೆಸ್/ಬಿಜೆಪಿ ದೇಶದಲ್ಲಿ ಕೋಮುಧ್ರುವೀಕರಣವನ್ನು ಇನ್ನಷ್ಟು ತೀಕ್ಷ್ಣಗೊಳಿಸಲು ಪ್ರಯತ್ನಿಸುತ್ತಿವೆ, ಇದು ಭೀಕರ ಪರಿಣಾಮಗಳನ್ನು ಉಂಟುಮಾಡಲಿದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಚುನಾವಣೆಗಳಿಗೆ ಸಿದ್ಧತೆಯಾಗಿ ಹಿಂದುತ್ವವ ಕೋಮುವಾದಿ ಮತಬ್ಯಾಂಕನ್ನು ಕ್ರೋಡೀಕರಿಸುವ ಪ್ರಯತ್ನವು ಮೋದಿ ಸರಕಾರದ ಸರ್ವತೋಮುಖ ವಿಫಲತೆಯಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆಯುತ್ತದಲ್ಲದೆ, ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಭೀರ ಅಪಾಯವನ್ನು ಒಡ್ಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.

ಬಿಜೆಪಿ ಕೇಂದ್ರ ಸರಕಾರ ನಮ್ಮ ದೇಶದ ಸಾಮಾಜಿಕ ಹಂದರದ ಐಕ್ಯತೆಯನ್ನು ನಾಶ ಮಾಡಲು ಹೊರಟಿರುವ ಇಂತಹ ಶಕ್ತಿಗಳನ್ನು ಪೋಷಿಸುವುದನ್ನು ನಿಲ್ಲಿಸಬೇಕು ಮತ್ತು ಉತ್ತರಪ್ರದೇಶದಲ್ಲಿ ಬಿಜೆಪಿ ರಾಜ್ಯ ಸರಕಾರ ಕಾನೂನು ಮತ್ತು ವ್ಯವಸ್ಥೆಯನ್ನು ಕಾಯ್ದುಕೊಳ್ಳುವ ತನ್ನ ಜವಾಬ್ದಾರಿಗಳನ್ನು ವಿಧೇಯವಾಗಿ ನಿಭಾಯಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಅಸ್ಸಾಂನಲ್ಲಿ ದ್ವೇಷದ ವಾತಾವರಣ ಸೃಷ್ಟಿ: ಈ ಕೊಲೆಗಳನ್ನು ನಿಲ್ಲಿಸಿ- ಸಿಪಿಐ(ಎಂ)

ನವಂಬರ್ 1 ರಂದು ಅಸ್ಸಾಂನ ತಿನ್‌ಸುಖಿಯಾ ಜಿಲ್ಲೆಯಲ್ಲಿ ಐದು ಮಂದಿಯನ್ನು ಸಾಲಾಗಿ ನಿಲ್ಲಿಸಿ ಗುಂಡು ಹಾರಿಸಿ ಕೊಂದಿರುವ ಘಟನೆ ವರದಿಯಾಗಿದೆ. ಇದರ ಮೂಲದಲ್ಲಿರುವುದು ಈ ರಾಜ್ಯದಲ್ಲಿ ಆರೆಸ್ಸೆಸ್/ಬಿಜೆಪಿ ಸೃಷ್ಟಿಸಿರುವ ದ್ವೇಷದ ವಾತಾವರಣ ಎಂದು ಈ ಅಮಾನುಷ ಘಟನೆಯನ್ನು ಬಲವಾಗಿ ಖಂಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ರಾಜ್ಯ ಸರಕಾರ ಕಾನೂನು ವ್ಯವಸ್ಥೆಯ ರಕ್ಷಣೆ ಒದಗಿಸುವಲ್ಲಿ ವಿಫಲವಾಗಿದೆ. ಈ ಕೊಲೆಗಳು ರಾಜ್ಯದಲ್ಲಿ ಮಾಡುತ್ತಿರುವು ದ್ವೇಷ ಮತ್ತು ಹಿಂಸಾಚಾರದ ಪ್ರಚಾರದ ಭಾಗ . ಇದನ್ನು ತಡೆದು ನಿಲ್ಲಿಸಬೇಕು. ರಾಜ್ಯ ಸರಕಾರ ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರ ಜೀವ–ಜೀವನವನ್ನು ರಕ್ಷಿಸ ಬೇಕಾಗಿರುವ ತನ್ನ ಸಂವಿಧಾನಿ ಕರ್ತವ್ಯವನ್ನು ನಿಭಾಯಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

"ಸಂವಿಧಾನ ರಕ್ಷಿಸಿ : ದಲಿತ ಹಕ್ಕುಗಳ ಸಂರಕ್ಷಿಸಿ"; ಡಿಸೆಂಬರ್ 20 ಸಂಸದ್ ಚಲೋಗೆ ದಲಿತ್ ಶೋಷಣ್ ಮುಕ್ತಿ ಮಂಚ್ ಕರೆ

ಆಂಧ್ರಪ್ರದೇಶ ರಾಜ್ಯದ ವಿಜಯವಾಡದಲ್ಲಿ, ಅಕ್ಟೋಬರ್ 27–28 ರಂದು, ದಲಿತ್ ಶೋಷಣ್ ಮುಕ್ತಿ ಮಂಚ್ (ಡಿ.ಎಸ್.ಎಂ.ಎಂ)ನ, ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಕಳೆದ 2014 ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಪಕ್ಷ, ಸಂವಿಧಾನ ಬದ್ಧವಾದ ದಲಿತರ ಹಕ್ಕುಗಳನ್ನು ನಾಶಗೊಳಿಸುತ್ತಿರುವ ಬಗ್ಗೆ ತೀವ್ರ ಆತಂಕ ವ್ಯಕಪಡಿಸಿ, ದಲಿತರ ಹಕ್ಕಗಳನ್ನು ಸಂರಕ್ಷಣೆ ಮಾಡಲು ಒತ್ತಾಯಿಸಿ "ಸಂವಿಧಾನ ರಕ್ಷಿಸಿ ; ದಲಿತ ಹಕ್ಕುಗಳ ಸಂರಕ್ಷಿಸಿ" ಎಂಬ ಘೋಷಣೆಯಡಿಯಲ್ಲಿ, ಸಂಸತ್ ಚಲೋ ನಡೆಸಲು ತೀರ್ಮಾನ ಕೈಗೊಂಡಿತು.

ದೇಶದಾದ್ಯಂತ ಸುಮಾರು 23 ರಾಜ್ಯಗಳಲ್ಲಿ ಡಿ.ಎಸ್.ಎಂ.ಎಂ ನ ವೇದಿಕೆಯಡಿಯಲ್ಲಿ, ಸಂಯೋಜನೆ ಹೊಂದಿರುವ, ಎಲ್ಲಾ ದಲಿತ ಸಂಘನೆಗಳು, ಪ್ರಗತಿಪರ ಚಿಂತಕರು, ಲೇಖಕರು, ವಕೀಲರುಗಳು, ಉಪಾಧ್ಯಾಯರುಗಳು, ದಲಿತ ನೌಕರರು ಒಟ್ಟಾರೆಯಾಗಿ ಸುಮಾರು 10 ಸಾವಿರ ಜನರನ್ನು ಅಣಿನೆರೆಸಲು ಡಿಎಸ್ಎಂಎಂ ಕರೆ ನೀಡಿದೆ.

ಬಿಜೆಪಿ 2019 ರ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಪುನಃ ಸರ್ಕಾರ ರಚಿಸುವುದೇ ಅಲ್ಲದೆ ಮುಂದಿನ 50 ವರ್ಷಗಳ ಕಾಲ ಅಧಿಕಾರ ನಡೆಸುವುದಾಗಿ ಹೇಳಿರುವ ಅದರ ಅಧ್ಯಕ್ಷ ಅಮಿತ್ ಶಾ, ಇದನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ, ಸಂವಿಧಾನದ ಎಲ್ಲಾ ಪ್ರಜಾಸತ್ತಾತ್ಮಕ ಆಶಯಗಳನ್ನು ಗಾಳಿಗೆ ತೂರಲು ತನ್ನ ಸಂಘ ಪರಿವಾರದ ಭಕ್ತರಿಗೆ ಕರೆ ನೀಡಿ, ಸಂವಿಧಾನಿಕ ಸಂಸ್ಥೆಗಳಾದ, ಸುಪ್ರೀಂ ಕೋರ್ಟ್, ಸಿ.ಬಿ.ಐ. ಹಾಗೂ ಆರ್.ಬಿ.ಐ ಗಳನ್ನು ತಮ್ಮ ಸರಕಾರದ ಅಧೀನದಲ್ಲಿ ಅಥವಾ ಹಿಡಿತದಲ್ಲಿ ಇಟ್ಟುಕೊಳ್ಳುವ ಎಲ್ಲಾ, ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಬಾಹಿರ ಕ್ರಮಗಳನ್ನು ಅನುಸರಿಸುತ್ತಿದ್ದಾರೆ ಎಂದು ಡಿಎಸ್ಎಂಎಂ ನ ಈ ಸಭೆಯಲ್ಲಿ ತೀವ್ರ ಆತಂಕವನ್ನು ವ್ಯಕ್ತಪಡಿಸಲಾಯಿತು.

ಕಳೆದ ನಾಲ್ಕುವರೆ ವರ್ಷಗಳಲ್ಲಿ ರಾಮ ಮಂದಿರದ ನಿರ್ಮಾಣಕ್ಕೆ ಯಾವುದೇ ರೀತಿಯ ಸುದ್ದಿ ಇರಲಿಲ್ಲ, ಚುನಾವಣೆಗಳು ಹತ್ತಿರ ಬರುತ್ತಿದಂತೆ ಮಂದಿರ ನಿರ್ಮಿಸುವುದಕ್ಕಾಗಿ, ಸುಗ್ರಿವಾಜ್ಞೆಯ ಮೂಲಕ ವಿಶೇಷ ಕಾನೂನು ತರಬೇಕೆಂಬ ಕೂಗಿನ ಹಿಂದೆ ಒಂದು ಸಂಚು ಇರುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು, ಅಭಿವೃದ್ಧಿಯೇ ನಮ್ಮ ಕಾರ್ಯಸೂಚಿ, ಅದರ ಬಲದಿಂದಲೇ ಚುನಾವಣೆಯ ಲ್ಲಿ ಗೆದ್ದುಬರುತ್ತೇವೆ ಎಂದು ಬೀಗುತ್ತಿದ್ದ ಬಿಜೆಪಿಯು ಇದೀಗ ಮಂದಿರ ವಿಷಯವನ್ನು ಮುನ್ನೆಲೆಗೆ ತಂದು ಕೋಮು ಗಲಬೆಗಳನ್ನು ಸೃಷ್ಟಿಸುವುದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ, ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯಸ್ಸಿನ ಮಹಿಳೆಯರಿಗೆ ಪ್ರವೇಶವನ್ನು ಖಾತ್ರಿಗೊಳಿಸಿದ ಸುಪ್ರೀಂ ಕೋರ್ಟ್ ತೀರ್ಪನ್ನು ಶತಾಯಗತಾಯ ವಿರೋಧಿಸಲು ಬಿಜೆಪಿ ಮತ್ತು ಸಂಘ ಪರಿವಾರ ತೀರ್ಮಾನಿಸಿರುವುದನ್ನು ಸಭೆಯು ಖಂಡಿಸಿತು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದೌರ್ಜನ್ಯ ತಡೆ ಕಾಯಿದೆಯನ್ನು ಬಲ ಪಡಿಸಲು, ಎಸ್.ಸಿ.ಎಸ್.ಪಿ ಉಪ ಯೋಜನೆಯ ಮೂಲಕ ಬಜೆಟ್‌ನಲ್ಲಿ ಹಂಚಿಕೆಯಾಗುತ್ತಿದ್ದ ಹಣವನ್ನು ಬಿಜೆಪಿ ಕೇಂದ್ರದಲ್ಲಿ ಮೊಟಕುಗೊಳಿಸಿರವುದನ್ನು ಪುನಃ ಜಾರಿಗೆ ತರಬೇಕೆಂದು ಸಭೆಯಲ್ಲಿ ಆಗ್ರಹಿಸಲಾಯಿತು. ಒಟ್ಟಾರೆಯಾಗಿ ಸಂವಿಧಾನವನ್ನು ಬದಲಾಯಿಸುವ ನಿಟ್ಟಿನಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಸಂವಿಧಾನ ಒದಗಿಸಿರುವ ಮೀಸಲಾತಿಯನ್ನು ಕಿತ್ತು ಹಾಕಲು ಸಂಚನ್ನು ರೂಪಿಸುತ್ತಿರುವ ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯ ಸರಕಾರಗಳಲ್ಲಿ, ದಲಿತರು ಮತ್ತು ಆದಿವಾಸಿಗಳ ಮೇಲಿನ ದೌರ್ಜನ್ಯಗಳು ಹೆಚ್ಚಾಗಿರುವುದೇ ಮೂಲ ಕಾರಣವಾಗಿವೆ.

ಈ ನಿಟ್ಟಿನಲ್ಲಿ ಸಭೆಯು ಗಂಭೀರವಾಗಿ ಚರ್ಚಿಸಿ, ಹಲವು ತೀರ್ಮಾನಗಳನ್ನು ಕೈಗೊಂಡಿತು.

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯಿದೆ 1989 ಅನ್ನು ದುರ್ಬಲಗೊಳಿಸಿ ಸುಪ್ರೀಂ ಕೋರ್ಟ್ ಕಳೆದ ಮಾರ್ಚ್‌ನಲ್ಲಿ ನೀಡಿದ್ದ ತೀರ್ಪಿನ ವಿರುದ್ಧ, ಕಳೆದ ಏಪ್ರಿಲ್ 2, ರಂದು ನಡೆಸಿದ್ದ ಭಾರತ್ ಬಂದ್ ಸಂದರ್ಭದಲ್ಲಿ ಬಂಧಿಸಿದ್ದ ಎಲ್ಲರನ್ನೂ ತಕ್ಷಣದಲ್ಲಿ ಬಿಡುಗಡೆಗೊಳಿಸಬೇಕು ಹಾಗೆಯೇ, ಮಧ್ಯಪ್ರದೇಶದ ಡಿಎಸ್ಎಂಎಂ ನ ಮುಖಂಡರಾದ ಸಂಗಾತಿ ಪಿಪ್ಪ ಲ್‌ರನ್ನು ಬಿಡುಗಡೆಗೊಳಿಸಬೇಕೆಂದು ದೇಶದಾದ್ಯಂತ, ನವೆಂಬರ್ 4, ರಂದು ಪ್ರತಿ ಭಟನೆ ಹಮ್ಮಿಕೊಳ್ಳಲು ಕರೆ,
2. ಡಿಸೆಂಬರ್ 20, ಸಂಸತ್ ಗೆ ಮೆರವಣಿಗೆ , "ಸಂವಿಧಾನ ರಕ್ಷಿಸಿ ; ದಲಿತರ ಹಕ್ಕುಗಳನ್ನು ಸಂರಕ್ಷಿಸಿ" ಎಂಬ ಘೋಷಣೆ ಯೊಂದಿಗೆ ;
3. ಮುಂದಿನ ವರ್ಷ ನವೆಂಬರ್ ನಲ್ಲಿ, "ದಲಿತ ಮಹಿಳಾ ಅಖಿಲ ಭಾರತ ಸಮಾವೇಶ", ಇದಕ್ಕೆ ಪೂರ್ವಭಾವಿಯಾಗಿ ಎಲ್ಲಾ ರಾಜ್ಯಗಳಲ್ಲಿ, ದಲಿತ ಮಹಿಳೆಯರ ಆಯಾ ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸುವುದು.

ಜತೆಗೆ ಇತ್ತೀಚೆಗೆ ಕೆನೆಪದರ ಮೀಸಲಾತಿಯ ವಿಚಾರಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಮೀಸಲಾತಿಯನ್ನು ಕಿತ್ತು ಹಾಕಿರುವ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಸಭೆಯು ಒಮ್ಮತದಿಂದ ವಿರೋಧಿಸಿತು. ಏಕೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಸಂವಿಧಾನಬದ್ಧವಾಗಿ ಒದಗಿಸಿರುವುದರಿಂದ, ಕೆನೆಪದರ ಮೀಸಲಾತಿಯನ್ನು ಈ ಸಮುದಾಯಕ್ಕೆ ಮುಂದುವರಿಸಲು ಕೇಂದ್ರ ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸಭೆಯು ನಿರ್ಣಯಿಸಿತು. ಆದರೆ, ಕೆನೆಪದರ ಮೀಸಲಾತಿಯು ಇತರೆ ಹಿಂದುಳಿದ ವರ್ಗಗಳ ಜಾತಿಗೆ (ಒಬಿಸಿ) ಅನ್ವಯಿಸುವುದಿಲ್ಲ ಎಂಬ ಸುಪ್ರೀಂ ಕೋರ್ಟ್ ನ ತೀರ್ಪನ್ನು ಸಭೆಯು ಅನುಮೋದಿಸಿತು.

–ನಾಗರಾಜ ನಂಜುಂಡಯ್ಯ

ಮೋದಿ ಸರಕಾರದ ವಿನಾಶಕಾರಿ ನೋಟು ರದ್ಧತಿಗೆ ಎರಡು ವರ್ಷ

ಈಗಲೂ ಅದರ ನಾಚಿಕೆಗೆಟ್ಟ ಸಮರ್ಥನೆ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ


ಈ ನವಂಬರ್ 8, ನೋಟು ರದ್ಧತಿಯ ಎರಡನೇ ವಾರ್ಷಿಕದ ದಿನ. ಈ ಸಂದರ್ಭದಲ್ಲಿ ಒಂದು ಹೇಳಿಕೆ ನೀಡಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಪ್ರಧಾನ ಮಂತ್ರಿ ಮೋದಿ ನಮ್ಮ ಆರ್ಥಿಕದ ಮೇಲೆ ಮತ್ತು ನಮ್ಮ ಜನಗಳ ಮೇಲೆ ಹೇರಿದ ಈ ವಿನಾಶದಿಂದ ಭಾರತೀಯ ಆರ್ಥಿಕ ವ್ಯವಸ್ಥೆ ಈಗಲೂ ಕೂಡ ಚೇತರಿಸಿಕೊಂಡಿಲ್ಲ ಎಂದು ಹೇಳಿದೆ.

ಅದು ಲಕ್ಷಾಂತರ ರೂ.ಗಳಷ್ಟು ಕಪ್ಪು ಹಣವನ್ನು ಹೊರಗೆಳೆಯುತ್ತದೆ, ಭ್ರಷ್ಟಾಚಾರವನ್ನು ಕೊನೆಗೊಳಿಸುತ್ತದೆ ಎಂಬುದು ಸಂಪೂರ್ಣ ಸುಳ್ಳು ಎಂಬುದು ಸಾಬೀತಾಗಿದೆ. ತದ್ವಿರುದ್ಧವಾಗಿ, ನಿಷೇಧಕ್ಕೆ ಒಳಗಾದ ನೋಟುಗಳಲ್ಲಿ 99.4%ದಷ್ಟು ವ್ಯವಸ್ಥೆಯೊಳಕ್ಕೆ ಮರಳಿ ಬಂದಿವೆ. ನಿಜ ಹೇಳಬೇಕೆಂದರೆ, ನೋಟುರದ್ಧತಿ ಕಪ್ಪು ಹಣವನ್ನು ಬಿಳಿ ಮಾಡುವ ದಾರಿಯಾಗಿ ಬಿಟ್ಟು ಅತ್ಯಂತ ಭ್ರಷ್ಟರಿಗೆ ನೆರವಾಗಿದೆ ಎಂಬುದು ಈಗ ಸ್ಪಷ್ಟವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮತ್ತೊಂದೆಡೆಯಲ್ಲಿ, ಪ್ರತಿದಿನ ನಗದು ವ್ಯವಹಾರಗಳನ್ನೇ ಅವಲಂಬಿಸಿದ್ದ ಕೋಟ್ಯಂತರ ಜನರು ವಿಧ್ವಂಸಗೊಂಡಿದ್ದಾರೆ. ಅಸಂಘಟಿತ ವಲಯದಲ್ಲಿ 35 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ತಮ್ಮ ಜೀವನಾಧಾರಗಳನ್ನು ಕಳಕೊಂಡಿದ್ದಾರೆ. ಅದೇ ರೀತಿಯಲ್ಲಿ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ತಮ್ಮ ಆದಾಯಗಳಲ್ಲಿ ಅಪಾರ ನಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಆ ವೇಳೆಯಲ್ಲಿ ಮೋದಿಯವರು, ನಿಧಿಗಳು ಸಿಗದೆ ಭಯೋತ್ಪಾದನೆಯ ಮೇಲೆ ಭಾರೀ ಪರಿಣಾಮ ಉಂಟಾಗುತ್ತದೆ ಎಂದು ಹೇಳಿಕೊಂಡರು. ತದ್ವಿರುದ್ಧ ವಾಗಿ, ಅಧಿಕೃತ ಮಾಹಿತಿ ಭಯೋತ್ಪಾದನೆಯ ದಾಳಿಗಳು ದ್ವಿಗುಣಗೊಂಡವು ಎಂದು ಹೊರಗೆಡಹುತ್ತವೆ.

ಭಾರತೀಯ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾದ ಈ ಹೊಲಸಿಗೆ ಅಷ್ಟೇ ಕಾರಣರಾದ ಹಣಕಾಸು ಮಂತ್ರಿ ಅರುಣ್ ಜೇಟ್ಲಿ ನಡೆಸಿರುವ ನೋಟುರದ್ಧತಿಯ ನಾಚಿಕೆಗೆಟ್ಟ ಸಮರ್ಥನೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಈಗ ದೇಶಾದ್ಯಂತ ನಡೆಸಿರುವ ಪ್ರಚಾರ ಕಾರ್ಯದಲ್ಲಿ ಪಕ್ಷದ ಘಟಕಗಳು ಈ ನೋಟುರದ್ಧತಿ ವಿನಾಶದ ಸಂಗತಿಗಳನ್ನು ಜನಗಳ ನಡುವೆ ಒಯ್ಯುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.



ಸಂಪಾದಕೀಯ

ಉಪ ಚುನಾವಣೆಗಳು : ಬಿಜೆಪಿ ರಾಜಕಾರಣದ ತಿರಸ್ಕಾರ

ರಾಜ್ಯ ಮತ್ತು ಇಡಿ ದೇಶದಲ್ಲೇ ತೀವ್ರ ರಾಜಕೀಯ ಕುತೂಹಲ ಮತ್ತು ಆತಂಕ–ನಿರೀಕ್ಷೆಗಳನ್ನು ಮೂಡಿಸಿದ್ದ ಐದು (3 ಲೋಕಸಭಾ ಮತ್ತು 2 ವಿಧಾನಸಭಾ) ಉಪಚುನಾವಣೆಗಳ ಫಲಿತಾಂಶ ಕೊನೆಗೂ ಬಂದಿದೆ. ಐದು ಉಪ ಚುನಾವಣೆಗಳಲ್ಲಿ ನಾಲ್ಕರಲ್ಲಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಗೆದ್ದಿದೆ. ತನ್ನ ಎರಡೂ ವಿಧಾನ ಸಭೆ ಕ್ಷೇತ್ರಗಳನ್ನು ಇನ್ನೂ ಹೆಚ್ಚಿನ ಅಂತರದಿಂದ ಗೆದ್ದುಕೊಂಡಿದೆ. ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಒಂದು ಕ್ಷೇತ್ರವನ್ನು (ಮಂಡ್ಯ) ಉಳಿಸಿಕೊಂಡರೆ, ಇನ್ನೊಂದು ಪ್ರತಿಷ್ಟೆಯ ಕ್ಷೇತ್ರವನ್ನು (ಬಳ್ಳಾರಿ) ಬಿಜೆಪಿಯಿಂದ ಕಸಿದುಕೊಂಡಿದೆ. ಮತ್ತೊಂದು ಕ್ಷೇತ್ರವನ್ನು (ಶಿವಮೊಗ್ಗ) ಬಿಜೆಪಿ ಹರಸಾಹಸ ಪಟ್ಟು ಉಳಿಸಿಕೊಂಡಿದೆ. ಯೆಡಿಯೂರಪ್ಪ 2014ರಲ್ಲಿ 3.6 ಲಕ್ಷ ಅಂತರದಿಂದ ಗೆದ್ದಿದ್ದ ರಾಜ್ಯದಲ್ಲೇ ಬಿಜೆಪಿಯ ಅತ್ಯಂತ ಭದ್ರಕೋಟೆಯೆಂದು ಹೇಳಲಾದ ಶಿವಮೊಗ್ಗ ಕ್ಷೇತ್ರದಲ್ಲಿ, ಅವರ ಮಗ ಬಿ.ವೈ.ರಾಘವೇಂದ್ರ 52 ಸಾವಿರ ಅಂತರದಿಂದ ಮಾತ್ರ ಗೆಲ್ಲಲು ಸಾಧ್ಯವಾಯಿತು. ಬಿಜೆಪಿ ಇಲ್ಲಿ ಗೆದ್ದು ಸೋತಿದೆ ಎಂದು ಹೇಳಬಹುದಾದಷ್ಟು ದೊಡ್ಡ ಹಿನ್ನಡೆಯಿದು. ಇನ್ನು ರಾಮನಗರದಲ್ಲಿ ಅತೃಪ್ತ ಕಾಂಗ್ರೆಸ್ ಶಾಸಕನ ಮಗನ ಪಕ್ಷಾಂತರ ಮಾಡಿಸಿ ಬಿಜೆಪಿ ಟಿಕೆಟ್ ಕೊಟ್ಟು, ಚುನಾವಣೆಯ ಎರಡು ದಿನಗಳ ಮೊದಲು ಆತ ಕಣದಿಂದ ವಾಪಸಾದ ಟ್ರಾಜಿ–ಕಾಮೆಡಿ ರಾಜ್ಯದಲ್ಲಿ ರಾಜಕಾರಣ ತಲುಪಿದ ಕೆಳಮಟ್ಟದ ಪ್ರತೀಕವಾಗಿತ್ತು.

ಈ ಉಪಚುನಾವಣೆಗಳನ್ನು ಎರಡೂ ಕಡೆಯವರು 2019 ಲೋಕಸಭೆಗೆ 'ಸೆಮಿ–ಫೈನಲ್', 'ದಿಕ್ಸೂಚಿ', 'ಮೈತ್ರಿ ಸರಕಾರದ ವಿಶ್ವಾಸಮತ' 'ಅನೈತಿಕ ಮೈತ್ರಿಕೂಟದ ಬಗ್ಗೆ ಜನತೆಯ ಅಭಿಪ್ರಾಯದ ಸೂಚಕ' ಎಂದೆಲ್ಲ ಬಣ್ಣಿಸಿದ್ದರು. ಈ ವರೆಗಿನ ಇತ್ತೀಚಿನ ಉದಾರಣೆಗಳನ್ನು ನೋಡುವುದಾದರೆ ಲೋಕಸಭೆ ಚುನಾವಣೆಯ ಬಗ್ಗೆ ಅದರ ಮೊದಲು ನಡೆದ ಉಪಚುನಾವಣೆಗಳು ಸ್ಪಷ್ಟ ದಿಕ್ಸೂಚಿಗಳು ಎಂದು ಹೇಳುವುದು ಕಷ್ಟ. ರಾಜ್ಯದಲ್ಲಿ 2009ರ ಮತ್ತು 2014ರ ಲೋಕಸಭಾ ಚುನಾವಣೆ ಫಲಿತಾಂಶಕ್ಕೂ, ಅದರ ಮೊದಲಿನ ಉಪಚುನಾವಣೆಯ ಫಲಿತಾಂಶಗಳಿಗೂ ಅಷ್ಟೇನೂ ತಾಳಮೇಳ ಕಂಡು ಬರುವುದಿಲ್ಲ. ಅಲ್ಲದೆ ಉಪ ಚುನಾವಣೆ ನಡೆದ ಕ್ಷೇತ್ರಗಳೂ ರಾಜ್ಯದ ಪ್ರಾತಿನಿಧಿಕ ಕ್ಷೇತ್ರಗಳು ಎಂದೂ ಹೇಳುವಂತಿಲ್ಲ. ಆದರೂ ಉಪಚುನಾವಣೆಗಳ ತೀರ್ಪುಗಳ ಮೂಲಕ ರಾಜ್ಯದ ಜನತೆ ನೀಡುತ್ತಿರುವ ಸಂದೇಶವೇನು? ಹೇಳುತ್ತಿರುವುದೇನು? ಎಂಬುದರ ಬಗ್ಗೆ ತೀರ್ಪಿನ ವಿವರಗಳ ವಿಶ್ಲೇಷಣೆಯಿಂದ (ವಿವರಗಳಿಗೆ ಪುಟ 11 ನೋಡಿ) ಕೆಲವು ಸೂಚನೆಗಳು ಸಿಗುತ್ತವೆ. ಜನತೆಯ ಈ ತೀರ್ಪಿನ ರಾಜಕೀಯ ಪರಿಣಾಮಗಳೇನು ಎಂಬುದನ್ನೂ ಇದರಿಂದ ಅರ್ಥೈಸಲು ಪ್ರಯತ್ನಿಸಬಹುದು

ಒಟ್ಟಾರೆಯಾಗಿ ಹೇಳುವುದಾದರೆ ರಾಜ್ಯದಲ್ಲೂ ಕೇಂದ್ರದಲ್ಲೂ ಬಿಜೆಪಿ ಅನುಸರಿಸುತ್ತಿರುವ ರಾಜಕಾರಣದ ವೈಖರಿ ಬಗ್ಗೆ ರಾಜ್ಯದ ಜನತೆ ತಮ್ಮ ತೀವ್ರ ಅಸಮ್ಮತಿ ವ್ಯಕ್ತ ಪಡಿಸಿದ್ದಾರೆ. ಅದನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಪ್ರಮುಖವಾಗಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ 'ಅನೈತಿಕ' ಮತ್ತು ಅದರ ಸರಕಾರ 'ಜನಾದೇಶದ ಉಲ್ಲಂಘನೆ' ಎಂಬ ಬಿಜೆಪಿಯ ಧೋರಣೆಯನ್ನು, ಜನತೆ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಮೊದಲು ಹಣ ಮತ್ತು ಕೇಂದ್ರ ಸರಕಾರದ ಅಧಿಕಾರಗಳ ದುರ್ಬಳಕೆ ಮಾಡಿ ಸರಕಾರ ರಚಿಸಲು ಪ್ರಯತ್ನಿಸಿ ವಿಫಲವಾದದ್ದು, ಹಾಗೂ ಆಮೇಲೆ ರಚಿತವಾದ ಮೈತ್ರಿಕೂಟದ ಸರಕಾರವನ್ನು ಅನೈತಿಕ ವಿಧಾನಗಳನ್ನು ಬಳಸಿ ಉರುಳಿಸಲು ಮೊದಲ ದಿನದಿಂದಲೇ ಪ್ರಯತ್ನಿಸಿದ್ದ ಬಗೆಗೂ ತೀವ್ರ ಅಸಮ್ಮತಿ ತೋರಿಸಿದ್ದಾರೆ. ಇದರರ್ಥ ಮೈತ್ರಿಕೂಟದ ಬಗ್ಗೆ ಜನ ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ ಎಂದು ಖಂಡಿತ ಅಲ್ಲ. ಆದರೆ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಸರಕಾರಕ್ಕೆ ಕೆಲಸ ಮಾಡಲು ಅವಕಾಶ ಕೊಡಬೇಕು. ಬಿಜೆಪಿ ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕೆಲಸ ಮಾಡಬೇಕು ಎಂದು ಜನ ಸಂದೇಶ ಕೊಡುತ್ತಿರುವಂತೆ ಕಾಣುತ್ತಿದೆ. ಬಿಜೆಪಿಯ ಕೇಂದ್ರ ಸರಕಾರ ಜನತೆಗೆ ಕೊಟ್ಟ ತನ್ನ ಆಶ್ವಾಸನೆಗಳನ್ನು ಈಡೇರಿಸದಿರುವ ಬಗ್ಗೆ ಭ್ರಮನಿರಸನವೂ, ಗಮನ ಬೇರೆಡೆ ಸೆಳೆಯುವ ವಿವಿಧ ಡ್ರಾಮಾಬಾಜಿ ಮತ್ತು ವಿಭಜಕ ಕೋಮುವಾದಿ ವಿಷಯಗಳನ್ನು ಎತ್ತುತ್ತಿರುವುದರ ಬಗ್ಗೆ ಅಸಮಾಧಾನವೂ ಕಂಡು ಬರುತ್ತಿದೆ. ಬಿಜೆಪಿ ಕೋಮುವಾದಿ ಜನ–ವಿರೋಧಿ ಧೋರಣೆಗಳ ವಿರುದ್ಧ ಒಗ್ಗಟ್ಟಿನಿಂದ ಕೆಲಸ ಮಾಡುವುದಾದರೆ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟಕ್ಕೆ ಲೋಕಸಭೆ ಚುನಾವಣೆಯಲ್ಲಿ ನಾವು ಮಣೆ ಹಾಕುತ್ತೇವೆ ಎಂದು ಜನತೆ ಸೂಚಿಸಿರುವಂತೆ ಕಾಣುತ್ತಿದೆ. ಬಿಜೆಪಿ ಗೆದ್ದಿದ್ದ ಬಳ್ಳಾರಿ ಮತ್ತು ಶಿವಮೊಗ್ಗ ಲೋಕಸಭಾ ಕ್ಷೇತ್ರಗಳ ಭಾಗವಾಗಿರುವ ಒಟ್ಟು 16 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ವಿಧಾನಸಭೆ ಚುನಾವಣೆಯಲ್ಲಿ ಗೆದ್ದಿದ್ದ ಕ್ಷೇತ್ರಗಳ ಸಂಖ್ಯೆ 9 ರಿಂದ ಈಗ 5 ಕ್ಕೆ ಇಳಿದಿದೆ. ಮಾತ್ರವಲ್ಲ ಈ ಎರಡೂ ಲೋಕಸಭಾ ಕ್ಷೇತ್ರಗಳಲ್ಲಿ ಶೇಕಡವಾರು ಮತ್ತು ಒಟ್ಟು ಮತಗಳಿಕೆ ಎರಡರಲ್ಲೂ ಕಡಿಮೆಯಾಗಿದೆ. ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಗೆದ್ದ ಮೈತ್ರಿಕೂಟದ ಅಭ್ಯರ್ಥಿಯ ಅಂತರ ಹಲವು ಪಟ್ಟು ಏರಿರುವುದು – ಇವೆಲ್ಲವೂ ಇದರ ಸೂಚಕ.



ಕೃಪೆ: ಪಿ. ಮಹಮ್ಮದ್, ವಿ.ಕ.

ಐದು ಕ್ಷೇತ್ರಗಳಲ್ಲಿ ಈ ಫಲಿತಾಂಶ ಬರಲು ಮೇಲೆ ಹೇಳಿದ ಅಂಶಗಳಲ್ಲದೆ, ಹಲವು ಇತರ ಅಂಶಗಳು ಕೆಲಸ ಮಾಡಿವೆ ಎಂಬುದು ನಿಜ. ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳೊಳಗೂ ಅವುಗಳ ನಡುವೆಯೂ ಸಾಕಷ್ಟು ಭಿನ್ನಾಭಿಪ್ರಾಯಗಳೂ, ಸಮಸ್ಯೆಗಳು ಇದ್ದರೂ ಕೊನೆಯಲ್ಲಿ ಕಂಡು ಬಂದ ಐಕ್ಯತೆ ಮತ್ತು ಎರಡೂ ಪಕ್ಷಗಳ ಹಿರಿಯ ನಾಯಕರು ಪ್ರಚಾರದಲ್ಲಿ ತೋರಿಸಿದ ಸಂಘಟಿತ ಸುವ್ಯವಸ್ಥಿತ ಪ್ರಯತ್ನ ಅನಿರೀಕ್ಷಿತವಾಗಿತ್ತು. ಇಡೀ ನಾಯಕತ್ವವೇ ಈ ಕ್ಷೇತ್ರಗಳಲ್ಲಿ ಬೀಡು ಬಿಟ್ಟಿತ್ತು ಮತ್ತು ಸ್ಥಳೀಯ ಮಟ್ಟದ ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಯಿತು. ಹಾಗೆನೇ ಬಿಜೆಪಿಯ ಹಿರಿಯ ನಾಯಕರ ನಡುವೆ ಕಂಡ ಅನೈಕ್ಯತೆ, ಅತಿ ಆತ್ಮವಿಶ್ವಾಸ, ಯೆಡಿಯೂರಪ್ಪ ಅವರನ್ನು ಬಿಟ್ಟರೆ ಗೆಲ್ಲಲೇಬೇಕೆಂಬ (ಅದೂ ಶಿವಮೊಗ್ಗಕ್ಕೆ ಸೀಮಿತವಾಗಿದ್ದು) ಛಲದ ಅಭಾವ ಸಹ ಅಷ್ಟೇ ಅನಿರೀಕ್ಷಿತವಾಗಿತ್ತು. ಜಮಖಂಡಿ ಮತ್ತು ರಾಮನಗರ ಎರಡರಲ್ಲೂ ಬಿಜೆಪಿಯ ಒಳಗಿನ ಭಿನ್ನಮತ ಅದಕ್ಕೆ ಮಾರಕವಾಗಿತ್ತು. ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿ ಸಿದ್ಧರಾಮಯ್ಯನವರ ಮಗನ ಸಾವಿನ ಕುರಿತು ಮತ್ತು ಶ್ರೀರಾಮುಲು ಮಾಡಿದ ಇತರ ಹಲವು ಅಸಭ್ಯ ವೈಯಕ್ತಿಕ ಕಮೆಂಟುಗಳು, ರಾಮನಗರದ ಬಿಜೆಪಿಯ ಅಭ್ಯರ್ಥಿಯ ಟ್ರಾಜಿ–ಕಾಮೆಡಿ ಇವೆಲ್ಲವೂ ಬಿಜೆಪಿಗೆ ಮಾರಕವಾದವು. ಆದರೂ ಈ ಅಂಶಗಳು ಇಲ್ಲದಿದ್ದರೂ ಬಹುಶಃ ಫಲಿತಾಂಶದಲ್ಲಿ ವಿಜಯದ ಅಂತರದ ಗಾತ್ರ ಬಿಟ್ಟರೆ ವ್ಯತ್ಯಾಸವಾಗುತ್ತಿರಲಿಲ್ಲ.

ಈ ಫಲಿತಾಂಶಗಳ ರಾಜಕೀಯ ಪರಿಣಾಮಗಳು ರಾಜ್ಯದ ರಾಜಕೀಯ ಮತ್ತು ಲೋಕಸಭಾ ಚುನಾವಣೆಯ ಮೇಲೆ ಖಂಡಿತ ಆಗಲಿವೆ. ಮೊದಲನೆಯದಾಗಿ ಮೈತ್ರಿಕೂಟ ಸರಕಾರವನ್ನು ಉರುಳಿಸುವ ಬಿಜೆಪಿಯ 'ಅಪರೇಶನ್'ಗಳಿಗೆ ಲೋಕಸಭಾ ಚುನಾವಣೆಯವರೆಗಂತೂ ವಿರಾಮ ಕೊಡಲಾಗುವುದು. ಪಕ್ಷದ ಒಳಗೆ ಯೆಡಿಯೂರಪ್ಪನವರ ನಾಯಕತ್ವಕ್ಕೆ ವಿರೋಧ ಪ್ರಬಲವಾಗಿ ಅದನ್ನು ನಿರ್ವಹಿಸುವುದು ಹೈಕಮಾಂಡಿಗೆ ಸವಾಲಾಗಬಹುದು. ಶ್ರೀರಾಮುಲು ಮತ್ತು ರೆಡ್ಡಿ ಸಹೋದರರರ ಜತೆ ಬಿಜೆಪಿಯ ಸಂಬಂಧ ಸಹ ಪ್ರಮುಖ ಸವಾಲಾಗಬಹುದು. ಈ ಸವಾಲು ಎದುರಿಸಲು ಅನಂತ ಕುಮಾರ್ ಹೆಗಡೆಯಂತಹ 'ಉಗ್ರ' ನಾಯಕರಿಗೆ ಮೊರೆ ಹೋಗುವ ಸಾಧ್ಯತೆ ಇಲ್ಲದಿಲ್ಲ. ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಅಂಕಗಣಿತದ ಪ್ರಕಾರ ಕಾರ್ಯಸಾಧ್ಯ ಕೂಟ ಎಂದು ಮೂರೂ ಪಕ್ಷಗಳಿಗೂ ಗೊತ್ತಿದ್ದರೂ, ಒಂದು ಪಕ್ಷದ 'ಮತಬ್ಯಾಂಕ್' ಇನ್ನೊಂದು ಪಕ್ಷಕ್ಕೆ ವರ್ಗಾಯಿಸುವುದು ಪ್ರಾಯೋಗಿಕವೇ ಎಂಬುದರ ಬಗ್ಗೆ ಎಲ್ಲರಿಗೂ ಸಂದೇಹವಿತ್ತು. ಆದರೆ ಉಪಚುನಾವಣೆಗಳ ಅಂಕೆಸಂಖ್ಯೆಗಳು (ವಿವರಗಳಿಗೆ ಪುಟ 11 ನೋಡಿ) ಇದು 5 ಕ್ಷೇತ್ರಗಳಲ್ಲಿ ಕನಿಷ್ಟ 3 ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ನಡೆದಿದೆ ಎಂದು ತೋರಿಸುತ್ತವೆ. ಇದು ಬಿಜೆಪಿಯ ವ್ಯೂಹ–ತಂತ್ರಗಳನ್ನು ಬದಲಾಯಿಸಲು ಕಾರಣವಾಗಬಹುದು. ಆದರೆ ಕಾಂಗ್ರೆಸ್–ಜೆಡಿ(ಎಸ್) ಗಳ ಮೈತ್ರಿಕೂಟ ಗಟ್ಟಿಯಾಗಬಹುದು. ಮೈತ್ರಿಕೂಟ ಸರಕಾರ ರಚಿಸಿದ ನಂತರವೂ, ಬಿಜೆಪಿ ಮತ್ತು ಕಾಂಗ್ರೆಸ್ ಎರಡರೊಂದಿಗೂ ಚೌಕಾಸಿ ಅವಕಾಶ ಉಳಿಸಿಕೊಳ್ಳುವ ಧೋರಣೆ ತಳೆದಿದ್ದ ಜೆಡಿ(ಎಸ್) ಕಾಂಗ್ರೆಸ್ ನೊಂದಿಗೆ ಲೋಕಸಭಾ ಚುನಾವಣೆಗಂತೂ ಮೈತ್ರಿ ಗಟ್ಟಿ ಮಾಡಿಕೊಳ್ಳುವತ್ತ ಸಾಗಬಹುದು. ಕಾಂಗ್ರೆಸ ನಾಯಕತ್ವ ಸಹ ಇದನ್ನು ಅರ್ಥ ಮಾಡಿಕೊಂಡು ಮೈತ್ರಿ ಗಟ್ಟಿ ಮಾಡಿಕೊಳ್ಳುವತ್ತ ಸಾಗಬಹುದು. ಆದರೆ ಕಾಂಗ್ರೆಸ್ ನೊಳಗೆ ಉಪಚುನಾವಣೆಗಳ ನಂತರ ಸ್ಟಾರ್ ಆಗಿರುವ ಸಿದ್ಧರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಗಳ ನಡುವಿನ ಪೈಪೋಟಿ ತೀವ್ರಗೊಳ್ಳಬಹುದು. ಅಲ್ಲದೆ ಉಪಚುನಾವಣೆಗಳ ವರೆಗೆ ಸಸ್ಪೆಂಡ್ ಆಗಿದ್ದ ಜೆಡಿ(ಎಸ್) ಕಾಂಗ್ರೆಸ್ ಪಕ್ಷಗಳೊಳಗೆ ಮತ್ತು ನಡುವೆ ಇದ್ದ ಭಿನ್ನಮತೀಯ ಚಟುವಟಿಕೆಗಳನ್ನು ಹೇಗೆ ನಿರ್ವಹಿಸುತ್ತದೆ ಎಂಬುದರ ಮೇಲೆ ಮುಂದಿನ ರಾಜಕೀಯ ಬೆಳವಣಿಗೆಗಳು ನಿಂತಿವೆ.

ಮೈತ್ರಿಕೂಟ ಸರಕಾರ ತನ್ನ ಸದಸ್ಯರ ಮಂತ್ರಿ–ಪದವಿಗಳ ದುರಾಸೆಗೆ ಕಡಿವಾಣ ಹಾಕಿ ಉತ್ತಮ ಜನಪರ ಆಡಳಿತ ಕೊಡುವತ್ತ ಎಷ್ಟು ಗಮನ ಹರಿಸುತ್ತದೆ, ನೆನೆಗುದಿಗೆ ಬಿದ್ದಿರುವ ಹಲವಾರು ಸಮಸ್ಯೆಗಳನ್ನು ಹೇಗೆ ಬಗೆಹರಿಸುತ್ತದೆ ಎಂಬುದರ ಮೇಲೂ ಜನತೆಯ ಮುಂದಿನ ನಿರ್ಧಾರ ಅವಲಂಭಿಸಿರುತ್ತದೆ. ಮೈತ್ರಿಕೂಟ ಪಕ್ಷ ಮತ್ತು ಸರಕಾರಕ್ಕೂ ಜನತೆ ಉಪಚುನಾವಣೆಗಳ ಮೂಲಕ ಕೆಲಸ ಮಾಡುವ ಅವಕಾಶವನ್ನು ಕೆಲಸ ಮಾಡದಿದ್ದರೆ ಶಿಕ್ಷಿಸುವ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ರಾಜ್ಯ ಮತ್ತು ಕೇಂದ್ರಗಳ ಸರಕಾರ ಒಂದೇ ಪಕ್ಷ/ಕೂಟದ ಕೈಯಲ್ಲಿ ಇದ್ದರೆ ಎರಡೂ ಸರಕಾರಗಳೂ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂಬ ಅಭಿಪ್ರಾಯ ಇರುವವರು ರಾಜ್ಯದ ಜನತೆ ಎಂದು ಮೈತ್ರಿಕೂಟ ಪಕ್ಷ ಮತ್ತು ಸರಕಾರಕ್ಕೆ ಗೊತ್ತಿರಬೇಕು. ಅದು ನಿಜವಲ್ಲ ಎಂದು ಜನತೆಯನ್ನು ಒಪ್ಪಿಸಲು ಇನ್ನಷ್ಟು ಶ್ರಮವಹಿಸಿ ಕೆಲಸ ಮಾಡಬೇಕಾಗಿದೆ. ರಾಮನಗರದ ಟ್ರಾಜಿ–ಕಾಮೆಡಿ ಈ ಬಾರಿ ಬಿಜೆಪಿ ವಿರುದ್ಧ ಹೋಗಿರಬಹುದು. ಅದು ಬಿಜೆಪಿಯ ಶೈಲಿಯ ಕೀಳು ರಾಜಕಾರಣದ ಬೆತ್ತಲೆ ಪ್ರದರ್ಶನದಂತೆ ಕಂಡಿರಬಹುದು. ಆದರೆ ಅದರಲ್ಲಿ ಕಾಂಗ್ರೆಸ್ ಶಾಸಕರ ನೈತಿಕ ಅಧಃಪತನದ ಪಾತ್ರವೂ ಇದೆ ಎಂದು ಜನ ಗಮನಿಸುತ್ತಾರೆ ಎಂದು ಮರೆತು ಬಿಡಬಾರದು.

ಕೋಮುವಾದಿ ಬಿಜೆಪಿಗೆ ಮುಖಭಂಗ, ಜಾತ್ಯಾತೀತ ಶಕ್ತಿಗಳಿಗೆ ಜಯ : ಸಿಪಿಐ(ಎಂ) ಸ್ವಾಗತ

ರಾಜ್ಯದ ಮೂರು ಲೋಕಸಭೆ ಹಾಗೂ ಎರಡು ವಿಧಾನ ಸಭಾ ಚುನಾವಣೆಯ ಫಲಿತಾಂಶಗಳು ಇದೀಗ ಪ್ರಕಟವಾಗಿವೆ. ಒಟ್ಟು ಮೂರು ಲೋಕ ಸಭಾ ಕ್ಷೇತ್ರಗಳಲ್ಲಿ ಎರಡು ಕಾಂಗ್ರೆಸ್ – ಜೆಡಿಎಸ್ ಮೈತ್ರಿ ಪಕ್ಷಗಳು ಗೆದ್ದಿವೆ. ಬಿಜೆಪಿಯಿಂದ ಬಳ್ಳಾರಿ ಕ್ಷೇತ್ರವನ್ನು ಕಸಿದುಕೊಂಡಿವೆ. ಬಿಜೆಪಿ ಶಿವಮೊಗ್ಗ ಕ್ಷೇತ್ರವನ್ನು ಅದು ಕಡಿಮೆ ಅಂತರದಲ್ಲಿ ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ.

ಎರಡು ವಿಧಾನ ಸಭಾ ಕ್ಷೇತ್ರಗಳನ್ನು ಮೈತ್ರಿ ಪಕ್ಷಗಳು ಉಳಿಸಿಕೊಂಡಿವೆ. ರಾಮನಗರ ಕ್ಷೇತ್ರದಲ್ಲಿ ಬಿಜೆಪಿಯ ಅಭ್ಯರ್ಥಿ ಚುನಾವಣೆಯ ಪೂರ್ವದಲ್ಲಿಯೇ ಕಣದಿಂದ ನಿವೃತ್ತಿ ಘೋಷಿಸಿ ಬಿಜೆಪಿಗೆ ತೀವ್ರ ಮುಖ ಭಂಗ ಉಂಟಾಗಿತ್ತು.

ಈ ಫಲಿತಾಂಶಗಳು ಕೋಮುವಾದವನ್ನು ತಿರಸ್ಕರಿಸಿದ ಹಾಗೂ ಜಾತ್ಯಾತೀತತೆಯನ್ನು ಎತ್ತಿ ಹಿಡಿದ ಫಲಿತಾಂಶಗಳಾಗಿದ್ದು ಸ್ವಾಗತಾರ್ಹವಾಗಿವೆ ಎಂದು ಸಿಪಿಐಎಂ ಮತದಾರರನ್ನು ಅಭಿನಂದಿಸಿದೆ. ಜಾತ್ಯಾತೀತ ಶಕ್ತಿಗಳು ಒಗ್ಗೂಡಿ ಕೋಮುವಾದಿ ಶಕ್ತಿಯ ವಿರುದ್ದ ನಿಂತುದು ಈ ಫಲಿತಾಂಶದ ಮೂಲವಾಗಿದೆ ಎಂದು ವಿಶ್ಲೇಷಣೆ ಮಾಡಿದೆ

ಕೋಮುವಾದಿ ಬಿಜೆಪಿಗೆ ಈ ಉಪ ಚುನಾವಣೆಗಳಲ್ಲಿ ಭಾರೀ ಮುಖಭಂಗ ಅನುಭವಿಸುವಂತೆ ಮಾಡಿ ಅದಕ್ಕೆ ಸರಿಯಾದ ಪಾಠವನ್ನು ಕಲಿಸಿದ್ದಾರೆಂದು ಸಿಪಿಐ(ಎಂ) ವಿವರಿಸಿದೆ.

ಈ ಫಲಿತಾಂಶವು ಮುಂಬರುವ ಸಾರ್ವತ್ರಿಕ ಲೋಕಸಭಾ ಚುನಾವಣೆಯ ಫಲಿತಾಂಶದ ದಿಕ್ಸೂಚಿಯಾಗಿದೆ. ಕೋಮುವಾದಿ ಬಿಜೆಪಿಯ ವಿರುದ್ಧ ಜಾತ್ಯಾತೀತ ಶಕ್ತಿಗಳು ಮತ್ತಷ್ಟು ಬಲವಾಗಿ ಒಗ್ಗೂಡಿ ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸಿದಲ್ಲಿ, ರಾಜ್ಯದಲ್ಲಿ ಇಂತಹದ್ದೇ ಫಲಿತಾಂಶ ನೀಡುವುದಾಗಿ ರಾಜ್ಯದ ಜಾತ್ಯಾತೀತ ಮತದಾರರು ಈ ಮೂಲಕ ಮುನ್ಸೂಚನೆ ನೀಡಿದ್ದಾರೆಂದು ಸಿಪಿಐಎಂ ಬಣ್ಣಿಸಿದೆ

ಈ ಹಿನ್ನೆಲೆಯಲ್ಲಿ ರಾಜ್ಯದ ಮತದಾರರ ಈ ಭಾವನೆಗಳನ್ನು ಗೌರವಿಸುವ ಹೊಣೆಗಾರಿಕೆ ಮೈತ್ರಿ ಸರಕಾರದ ಹೊಣೆಯಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಕೋಮುಸೌಹಾರ್ಧತೆಯನ್ನು ಸಂರಕ್ಷಿಸಲು ಮತ್ತು ಅದೇ ರೀತಿ ಜನರನ್ನು ತೀವ್ರ ಸಂಕಷ್ಠಕ್ಕೆ ದೂಡುವ ಜಾಗತೀಕರಣದ ದುರ್ನೀತಿಗಳನ್ನು ಕೈ ಬಿಟ್ಟು ಜನಪರವಾದ ಆರ್ಥಿಕ ನೀತಿಗಳನ್ನು ಜಾರಿಗೆ ತರಲು ಗಂಭೀರವಾದ ಕ್ರಮವಹಿಸಬೇಕೆಂದು ಮೈತ್ರಿ ಸರಕಾರವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ. ●

7 ದಿನಗಳಿಂದ ನಡೆಯುತ್ತಿದೆ ಗೋಡಂಬಿ ಕಾರ್ಮಿಕರ ಮುಷ್ಕರ

ವಾಸುದೇವ ಉಚ್ಚಿಲ



ಕರ್ನಾಟಕ ರಾಜ್ಯ ಸರಕಾರವು ಗೋಡಂಬಿ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ದಿ:1–4–2018 ರಿಂದ ಕನಿಷ್ಟ ವೇತನವನ್ನು ಪರಿಷ್ಕರಿಸಿ ಆದೇಶ ನೀಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಇತರೆಲ್ಲ ಗೋಡಂಬಿ ಕಾರ್ಖಾನೆಗಳ ಮಾಲಿಕರು ಈ ಆದೇಶವನ್ನು ಜಾರಿ ಮಾಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ನೀಡುತ್ತಿದ್ದರೂ, ಮಂಗಳೂರಿನ ಶಕ್ತಿನಗರದಲ್ಲಿರುವ 'ರಿಲಯೇಬಲ್ ಕ್ಯಾಶ್ಯೂ ಕಂಪೆನಿ' ಕನಿಷ್ಟ ಕೂಲಿ ನೀಡದೆ ಕಾರ್ಮಿಕರನ್ನು ವಂಚಿಸುತ್ತಿದೆ. ಕಾರ್ಮಿಕರು ಕನಿಷ್ಟ ಕೂಲಿ ಆಗ್ರಹಿಸಿ ಮುಷ್ಕರ ಹೂಡಿರುತ್ತಾರೆ. ಮುಷ್ಕರ 8ನೇ ದಿನಕ್ಕೆ ತಲುಪಿದೆ.

ಜಿಲ್ಲಾಡಳಿತ ಮತ್ತು ಕಾರ್ಮಿಕ ಇಲಾಖೆ ಮೌನದಿಂದ ಇರುವುದು ಸರಿಯಲ್ಲ. ತಕ್ಷಣವೇ ಮಧ್ಯಪ್ರವೇಶ ಮಾಡಬೇಕು. ಕಂಪೆನಿ ವಿರುದ್ಧ ಕ್ರಮ ಜರುಗಿಸಬೇಕು ಮತ್ತು ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು ಎಂಬುದಾಗಿ ದ.ಕ.ಜಿಲ್ಲೆಯ ಹಿರಿಯ ಕಾರ್ಮಿಕ ನಾಯಕರೂ ಕ್ಯಾಶ್ಯೂ ಎಂಡ್ ಅಲೈಡ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರೂ ಆದ ಕೆ.ಆರ್.ಶ್ರೀಯಾನ್ ಆಗ್ರಹಿಸಿದ್ದಾರೆ.

ಕೆ.ಆರ್. ಶ್ರೀಯಾನ್ ಅವರು ನವಂಬರ್ 3 ರಂದು ರಿಲಾಯೇಬಲ್ ಕ್ಯಾಶ್ಯೂ ಕಂಪೆನಿಯ ಎದುರು ಕಾರ್ಮಿಕರ ಮುಷ್ಕರವನ್ನು ಉದ್ಘಾಟಿಸಿದರು. 95% ಮಹಿಳೆಯರೇ ಇರುವ ಯೂನಿಯನ್ನಿನ 200ಕ್ಕೂ ಮಿಕ್ಕಿ ಕಾರ್ಮಿಕರು ಕಾರ್ಖಾನೆಯ ಎದುರು ಹಗಲು ರಾತ್ರಿ ಧರಣಿ ಮುಷ್ಕರ ನಡೆಸುತ್ತಿದ್ದಾರೆ. ಕಾರ್ಖಾನೆಯ ಮಾಲೀಕರು ಇದೀಗ ಕಚೇರಿಗೂ ಬರುತ್ತಿಲ್ಲವೆಂದು ತಿಳಿಯುತ್ತದೆ. ಸಿಐಟಿಯು ಹಾಗೂ ಬಿಎಂಎಸ್ ಎರಡೂ ಸಂಘಟನೆಗೆ ಸೇರಿದ ಎಲ್ಲ ಕಾರ್ಮಿಕರೂ ಈ ಮುಷ್ಕರದಲ್ಲಿ ಭಾಗಿಯಾಗಿದ್ದಾರೆ.

ಪ್ರತಿಭಟನೆಯ ಸ್ಥಳಕ್ಕೆ ಜಿಲ್ಲೆಯ ಸಿಐಟಿಯು ಕಾರ್ಮಿಕ ಮುಖಂಡರು ಭೇಟಿ ನೀಡಿ, ಧರಣಿ ನಿರತರನ್ನುದ್ದೇಶಿಸಿ ಮಾತನಾಡಿದ್ದಾರೆ. ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಉಪಾಧ್ಯಕ್ಷ ವಸಂತ ಆಚಾರಿ, ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮುಖಂಡರುಗಳಾದ ಯು.ಬಿ.ಲೋಕಯ್ಯ, ಯೋಗೀಶ್ ಜಪ್ಪಿನಮೊಗರು, ಸಿಐಟಿಯು ಯೂನಿಯನ್ನಿನ ಕಾರ್ಯದರ್ಶಿ ಬಾಬು ದೇವಾಡಿಗ ಅಲ್ಲದೆ ಬಿಎಂಎಸ್ ಮುಖಂಡರಾದ ವಿಶ್ವನಾಥ ಶೆಟ್ಟಿ, ಗೋಪಾಲಕೃಷ್ಣ ಅವರೂ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ್ದಾರೆ. ಗೋಡಂಬಿ ಕಾರ್ಮಿಕ ಮುಖಂಡರುಗಳಾದ ಮೀನಾಕ್ಷಿ, ಸುಂದರಿ, ಶಶಿಕಲಾ, ಶೋಭಾ, ಮಾಲತಿ ವಸಂತ ಪ್ರತಿಭಟನೆಯ ನೇತೃತ್ವ ವಹಿಸಿದ್ದಾರೆ. •

ವೆನ್‌ಲಾಕ್ ಆಸ್ಪತ್ರೆಯಲ್ಲಿ ಗುತ್ತಿಗೆ ನೀಡಿಕೆಯಲ್ಲಿ ಅಕ್ರಮ ವಿರೋಧಿಸಿ ಸಿಐಟಿಯು ಧರಣಿ

ಗ್ರೂಪ್ ಪೇಷಂಟ್ ಕ್ಯಾರ್ ನೌಕರರನ್ನು ಮಂಗಳೂರಿನ ಸರಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳುವಾಗ ಪರವಾನಗಿ ಹೊಂದಿದ ಗುತ್ತಿಗೆದಾರ ಸಂಸ್ಥೆಯಿಂದಲೇ ನೌಕರರನ್ನು ನೇಮಿಸಿಕೊಳ್ಳುವ ನಿಯಮವಿದೆ. ಆದರೆ ಮಂಗಳೂರಿನ ಜಿಲ್ಲಾ ಆಸ್ಪತ್ರೆ ವೆನ್‌ಲಾಕ್ ಅಲ್ಲಿನ ಅಧೀಕ್ಷಕಿ ಪರವಾನಿಗೆ ಇಲ್ಲದೆ ಸಂಸ್ಥೆಯೊಂದಕ್ಕೆ ನೌಕರರನ್ನು ಒದಗಿಸುವ ಜವಾಬ್ದಾರಿ ನೀಡಿದ್ದಾರೆ ಎಂದು ಸಿಐಟಿಯು ಮಂಗಳೂರು ನಗರ ಸಮಿತಿ ಟೀಕಿಸಿದೆ.

ಅಕ್ರಮ ನೇಮಕಾತಿ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ವೆನ್‌ಲಾಕ್ ಆಸ್ಪತ್ರೆ ಸಮೀಪ ಜಿಲ್ಲಾ ಮಿನಿ ವಿಧಾನಸೌಧದ ಮುಂದೆ ನವಂಬರ್ 3ರಂದು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನಾಕಾರರನ್ನುದ್ದೇಶಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮಂಗಳೂರು ನಗರ ಸಮಿತಿ ಅಧ್ಯಕ್ಷೆ ಜಯಂತಿ ಶೆಟ್ಟಿ, ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಮಾತನಾಡಿದರು. •

ಕಮ್ಯೂನಿಸ್ಟರು ದ.ಕ. ಅಭಿವೃದ್ಧಿಗೆ ಮಾರಕ ಎಂಬ ಭೈರಪ್ಪ ಹೇಳಿಕೆ ಅಜ್ಞಾನ–ದ್ವೇಷಪೂರಿತ : ಸಿಪಿಐ(ಎಂ) ದ.ಕ.



ಕಾರ್ಪೊರೇಟ್ ಸಂಘಟನೆಗಳು ನಗರ ಕೇಂದ್ರಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಅದ್ದೂರಿಯಾಗಿ ನಡೆಸುತ್ತಿದ್ದು, ಅವುಗಳ ವಿಸ್ತರಣೆಯಾಗಿ ಇತ್ತೀಚೆಗೆ "ಮಂಗಳೂರು ಲಿಟರೇಚರ್ ಫೆಸ್ಟಿವಲ್" ನಡೆದಿದೆ. ಮಂಗಳೂರಿನಲ್ಲಂತೂ ಅದು ಸಂಪೂರ್ಣವಾಗಿ ಹಿಂದೂತ್ವ ಸಂಘಟನೆಗಳಿಂದಲೇ ಸಂಯೋಜನೆಗೊಂಡಿದೆ. ಸಮ್ಮೇಳನದ ಉದ್ಘಾಟನೆ ನಡೆಸಿದವರು ಕಾದಂಬರಿಕಾರ ಎಸ್.ಎಲ್.ಭೈರಪ್ಪನವರು. ದಿಕ್ಸೂಚಿ ಭಾಷಣ ಮಾಡಿದವರು ಆರೆಸ್ಸೆಸ್ ಸಂಘಟನೆಯ ಪತ್ರಿಕೆ 'ಆರ್ಗನೈಸರ್'ನ ಪ್ರಧಾನ ಸಂಪಾದಕರು. 'ಮೋದಿನೋಮಿಕ್ಸ್', 'ಕಾಶ್ಮೀರ ಕೇರಳದಲ್ಲಿ ಭಯೋತ್ಪಾದನೆ' ಹಾಗೂ ಇನ್ನಿತರ ಗೋಷ್ಠಿ ವಿಷಯಗಳೂ ಹಿಂದೂತ್ವವಾದವನ್ನು ವೈಭವೀಕರಿಸುವ ನಿಟ್ಟಿನಲ್ಲೇ ಇದ್ದುವು. ಕೆಲವು ಗೋಷ್ಠಿಗಳಲ್ಲಿ 'ಜೈಶ್ರೀರಾಮ್' ಘೋಷಣೆಗಳನ್ನೂ ಪದೇ ಪದೇ ಹಾಕಿಸಲಾಯಿತೆಂದೂ ವರದಿಯಾಗಿದೆ.

ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪನವರು ಕಮ್ಯೂನಿಸ್ಟ್ ವಿರೋಧಿ ಎಂಬುದು ಎಲ್ಲರಿಗೆ ತಿಳಿದದ್ದೇ. ತಾವು ಉದ್ಘಾಟಿಸುವ ಸಮ್ಮೇಳನ ನಡೆಯುತ್ತಿರುವುದು ತಾನು ಬೆಂಬಲಿಸುತ್ತಿರುವ ಹಿಂದುತ್ವವಾದದ ಪ್ರಯೋಗಶಾಲೆಯಾದ ದಕ್ಷಿಣ ಕನ್ನಡದಲ್ಲಿ ಎಂಬ ಅರಿವೂ ಅವರಿಗಿದ್ದಿರಬೇಕು. ಈ ಹಿನ್ನೆಲೆಯಲ್ಲಿ ಭೈರಪ್ಪನವರು ತಮ್ಮ ಭಾಷಣದಲ್ಲಿ, ದ.ಕ. ಜಿಲ್ಲೆಯ ಅಭಿವೃದ್ಧಿಗೆ ಎಡಪಂಥೀಯ ಚಳುವಳಿ ಮಾರಕ ಎಂದು ಹೇಳಿದ್ದಾರೆ.

ಭೈರಪ್ಪನವರನ್ನು ಹಿರಿಯ ಸಾಹಿತಿಯೆಂದು ಗೌರವದಿಂದ ಅವರ ಬರಹಗಳನ್ನು ಓದುವ ಜನಗಳಲ್ಲಿ ಅನೇಕರಿಗೆ, ಅವರ ವೈಚಾರಿಕ ನೆಲೆಯು ಪ್ರಗತಿ ವಿರೋಧಿಯಾಗಿದೆ ಎಂದು ಗೊತ್ತಿಲ್ಲ. ದಕ್ಷಿಣ ಕನ್ನಡದ ಜನ ಅವರ ಹೇಳಿಕೆ ಅಜ್ಞಾನದಿಂದ ಕೂಡಿದೆ ಹಾಗೂ ಕುರುಡು ಕಮ್ಯೂನಿಸ್ಟ್ ದ್ವೇಷದಿಂದ ಕೂಡಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ದಕ್ಷಿಣ ಕನ್ನಡ ಜಿಲ್ಲೆಯು 20ನೇ ಶತಮಾನದುದ್ದಕ್ಕೂ ಅಭಿವೃದ್ಧಿ ದಾರಿಯಲ್ಲಿ ಮುನ್ನಡೆಯುವಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಜತೆಯಲ್ಲಿ ಸಾಗಿ ಬಂದಿರುವ ಕಮ್ಯೂನಿಸ್ಟ್ ಚಳುವಳಿಯು ಕಾರಣ. ಎನ್.ಎಲ್.ಉಪಾಧ್ಯಾಯ, ಸಿಂಪ್ಸನ್ ಸೋನ್ಸ್, ಎ.ಕೃಷ್ಣ ಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಎಂ.ಎಚ್.ಕೃಷ್ಣಪ್ಪ ಮೊದಲಾದವರು ಕಮ್ಯೂನಿಸ್ಟ್ ಚಳುವಳಿಯನ್ನು ದ.ಕ.ಜಿಲ್ಲೆಯಲ್ಲೂ ಬಳಿಕ ಕರ್ನಾಟಕದಲ್ಲೂ ಕಟ್ಟುವುದರಲ್ಲಿ ಪ್ರಮುಖ ಪಾತ್ರವಹಿಸಿದವರು. ಔದ್ಯೋಗೀಕರಣಗೊಳ್ಳುತ್ತಿರುವ ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿಯನ್ನು ಕಟ್ಟುತ್ತಾ, ಕಾರ್ಮಿಕರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿವಳಿಕೆ ಕೊಡುತ್ತಾ ಬಂದವರು ಇವರು. ಇಡೀ ರಾಜ್ಯದಲ್ಲೇ ಪ್ರಥಮವಾಗಿ 'ಉಳುವವನಿಗೇ ಭೂಮಿ' ಹೋರಾಟವನ್ನು ಕಟ್ಟಿ, ಭೂಸುಧಾರಣಾ ಶಾಸನ ಜಾರಿಯಾಗುವುದಕ್ಕೆ ಕಾರಣರಾದವರಿವರು. ಇದರಿಂದಾಗಿ ರಾಜ್ಯದ ಇತರೆಲ್ಲಾ ಜಿಲ್ಲೆಗಳಿಗಿಂತಲೂ ದ.ಕ–ಉಡುಪಿ ಜಿಲ್ಲೆಗಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಆರೋಗ್ಯ–ಎಲ್ಲ ರಂಗಗಳಲ್ಲೂ ಅತಿ ಹೆಚ್ಚಿನ ಅಭಿವೃದ್ಧಿ ಹೊಂದಲು ಸಾದ್ಯವಾಯಿತು. ಅಷ್ಟೇ ಏಕೆ, ಸಮೀಪದ ಕೇರಳ ರಾಜ್ಯದ ಅಭಿವೃದ್ಧಿಗೆ ಅಲ್ಲಿನ ಕಮ್ಯೂನಿಸ್ಟ್ ಚಳುವಳಿಯೇ ಕಾರಣ ಎಂಬುದನ್ನು ಕಮ್ಯೂನಿಸ್ಟ್ ವಿರೋಧಿಗಳೇ ಒಪ್ಪಿಕೊಳ್ಳುತ್ತಾರಲ್ಲ? ಹೀಗಿರುವಾಗ ದ.ಕ.ಜಿಲ್ಲೆಯ ಅಭಿವೃದ್ಧಿಗೆ ಎಡಪಂಥೀಯ ಚಳುವಳಿ ಮಾರಕ ಎಂಬ ಎಸ್.ಎಲ್.ಭೈರಪ್ಪನವರ ಹೇಳಿಕೆ ಅಜ್ಞಾನದಿಂದ ಕೂಡಿದ್ದು ಹಾಗೂ ಅವರ ಬಗ್ಗೆ ಇದಕ್ಕಾಗಿ ಕನಿಕರ ಪಡಬೇಕಾಗಿದೆ ಎಂದು ಸಿಪಿಐ(ಎಂ) ಭಾವಿಸಿದೆ.

ಎಸ್.ಎಲ್. ಭೈರಪ್ಪನವರು ಅಭಿಮಾನ ಹೊಂದಿರುವ ಹಿಂದೂತ್ವ ಸಂಘಟನೆಗಳಲ್ಲಿ ದ.ಕ. ಜಿಲ್ಲೆಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಾಗಲೀ, ಆನಂತರದಲ್ಲಿ ರೈತ ಕಾರ್ಮಿಕ ಹೋರಾಟಗಳಲ್ಲಾಗಲೀ ನೇತೃತ್ವಕೊಟ್ಟ ಒಂದೇ ಒಂದು ಉದಾಹರಣೆಗಳೂ ಇಲ್ಲ ಎಂಬುದನ್ನು ಭೈರಪ್ಪನವರಿಗೆ ಯಾರಾದರೂ ಅವರ ಮಿತ್ರರು ತಿಳಿಸಿಕೊಡುವುದು ಒಳ್ಳೆಯದು.

ಹಿಂದುಳಿದವರು ಮತ್ತು ಪರಿಶಿಷ್ಟ ಪಂಗಡದವರ ನಡುವೆ ಬಿರುಕು ಮೂಡಿಸುವ ಸಂಕುಚಿತ ರಾಜಕಾರಣ: ಸಿಪಿಐ(ಎಂ) ಖಂಡನೆ

ಹಿಂದುಳಿದ ಜನಸಮುದಾಯದವರ ಹಾಗೂ ಪರಿಶಿಷ್ಠ ಪಂಗಡದವರ ನಡುವೆ ಬಿರುಕು ಮೂಡಿಸಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯುವ ಸಂಕುಚಿತ ರಾಜಕಾರಣದ ಭಾಗವಾಗಿ ಎರಡು ಜನಸಮುದಾಯಗಳನ್ನು ಅವಹೇಳನಕರವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸುವ ದುರುದ್ದೇಶ ಪೂರಿತ ವಿಡಿಯೋಗಳನ್ನು ಕಳೆದ ಎರಡು ದಿನಗಳಿಂದ ಸಾಮಾಜಿಕ ಮಾದ್ಯಮಗಳಲ್ಲಿ ಹರಿಯ ಬಿಟ್ಟಿರುವುದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಇದರ ಹಿಂದೆ ಕೋಮುವಾದಿ ಶಕ್ತಿಗಳು ಮತ್ತು ಕೋಮುವಾದಿ ಜಾತಿವಾದಿ ರಾಜಕೀಯ ಪಕ್ಷಗಳು ಇರುವುದು ನಿಚ್ಚಳವಾಗಿದೆ.

ಎಲ್ಲ ಜನ ಸಮುದಾಯಗಳು ಜನರನ್ನು ವಿಭಜಿಸಿ ಆಳುವ ಇಂತಹ ಕುತಂತ್ರಗಳನ್ನು ಸೋಲಿಸಲು ಸಾಮರಸ್ಯವನ್ನು ಮತ್ತು ಐಕ್ಯತೆಯನ್ನು ಮೆರೆಯಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ತಕ್ಷಣವೇ ರಾಜ್ಯ ಸರಕಾರ ಹಾಗೂ ಪೋಲೀಸ್ ಇಲಾಖೆ ಮದ್ಯ ಪ್ರವೇಶಿಸಿ ಈ ಪ್ರಕರಣದಲ್ಲಿ ಭಾಗಿಯಾದವರನ್ನು ಬಂದಿಸಿ ಕಾನೂನಿನ ಕ್ರಮ ವಹಿಸಲು ಮತ್ತು ಈ ಹುನ್ನಾರದ ಹಿಂದಿನ ಸಂಚನ್ನು ಬೇಧಿಸಲು ಸಿಪಿಐ(ಎಂ) ಒತ್ತಾಯಿಸಿದೆ. •

ಮರಳು ಸಮಸ್ಯೆ ಪರಿಹಾರಕ್ಕೆ ಮಂಗಳೂರಿನಲ್ಲಿ ಪ್ರತಿಭಟನೆ

ದ.ಕ.ಜಿಲ್ಲೆಯಲ್ಲಿ ತಲೆದೋರಿರುವ ಮರಳು ಸಮಸ್ಯೆ ಪರಿಹಾರಕ್ಕೆ ಜನಪರ ಮರಳು ನೀತಿಯನ್ನು ಜಾರಿಗೊಳಿಸಬೇಕು. ಕೇಂದ್ರದ ಎನ್‌ಡಿಎ ಸರಕಾರವು ಹಸಿರು ನ್ಯಾಯ ಮಂಡಳಿಗೆ ಸದಸ್ಯರ ನೇಮಕಾತಿ ಮಾಡದೇ ಇರುವುದರಿಂದ ಕರಾವಳಿ ನಿಯಂತ್ರಣ ವಲಯದಲ್ಲಿನ ಮರಳು ತೆಗೆಯುವುದಕ್ಕೆ ಸಂಬಂಧಿಸಿದ ಪ್ರಕರಣ ಇತ್ಯರ್ಥವಾಗುತ್ತಿಲ್ಲ. ಈ ಸಮಸ್ಯೆ ಪರಿಹರಿಸದೇ ಬಿಜೆಪಿ ನಾಯಕರು ಮತ್ತು ಚುನಾಯಿತ ಪ್ರತಿನಿಧಿಗಳು ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂಬುದಾಗಿ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಧರಣಿಯಲ್ಲಿ ಟೀಕಿಸಲಾಯಿತು.

ಕಟ್ಟಡ ಕಾರ್ಮಿಕ ಸಂಘಟನೆಯ ದ.ಕ.ಜಿಲ್ಲಾ ಸಮಿತಿ(ಸಿಐಟಿಯು) ವತಿಯಿಂದ ನವಂಬರ್ 6 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಜಿಲ್ಲೆಯಲ್ಲಿ ಕೃತಕವಾಗಿ ಮರಳಿನ ಸಮಸ್ಯೆ ಉಂಟು ಮಾಡಲಾಗಿದೆ. ಅಕ್ರಮ ಮರಳುಗಾರಿಕೆ ನಡೆಸುವವರು ದುಬಾರಿ ದರಕ್ಕೆ ಮಾಡುತ್ತಿದ್ದಾರೆ. ಹೊರ ಜಿಲ್ಲೆಗಳಿಗೂ ಹೊರ ರಾಜ್ಯಗಳಿಗೂ ಅಡೆತಡೆಯಿಲ್ಲದೆ ಅಕ್ರಮ ಮರಳು ಸಾಗಾಟ ನಡೆಯುತ್ತಿದೆ. ಇದನ್ನು ತಡೆಯಲು ರಾಜ್ಯ ಸರಕಾರವು ಯಾವ ಕ್ರಮ ಕೈಗೊಳ್ಳುತ್ತಿಲ್ಲ. ಇನ್ನೊಂದೆಡೆ ಮರಳುಗಾರಿಕೆಯನ್ನೇ ಅವಲಂಬಿಸಿರುವ ಕಾರ್ಮಿಕರಿಗೆ ಜೀವನ ನಿರ್ವಹಣೆ ಕಷ್ಟವಾಗಿದೆ ಎಂದು ನಾಯಕರು ಟೀಕಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಘಟಕದ ಅಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಮುಖಂಡರಾದ ಯು. ಜಯಂತ ನಾಯ್ಕ್ ಮಾತನಾಡಿದರು. ಸಂಘಟನೆಯ ಜಿಲ್ಲಾ ಮುಖಂಡರು ಪ್ರತಿಭಟನೆಯ ನೇತೃತ್ವ ನೀಡಿದ್ದರು. •

ಜಾಲಹಳ್ಳಿ ರೈತರ ಹೋರಾಟ : ಕಳಪೆ ಭತ್ತ ಬೀಜಕ್ಕೆ ಪರಿಹಾರ

ರಾಯಚೂರು ಜಿಲ್ಲೆಯ ಜಾಲಹಳ್ಳಿಯಲ್ಲಿ ಕೋರಮಂಡಲ್ ಇಂಟರನ್ಯಾಷನಲ್ ಲಿಮಿಟೆಡ್ ನ ಗ್ರೋಮರ್ ಸೆಂಟರ್, B.P.T ಸೋನಾ 5204 ಹಾಗೂ RNR 15048 ಈ ಎರಡು ತಳಿಯ ಭತ್ತದ ಮಿಶ್ರ ಬೀಜಗಳನ್ನು ಅಂದಾಜು 35 ಜನ ರೈತರಿಗೆ 95 ಎಕರೆ ಪ್ರದೇಶಕ್ಕೆ ಆಗುವಷ್ಟು B.P.T ಸೋನಾ ಭತ್ತದ ಬೀಜ ಎಂದು ಹೇಳಿ ಮಾರಾಟ ಮಾಡಿತ್ತು. ಪ್ರಸಕ್ತ ಸಾಲಿನ ಮುಂಗಾರು ಬೆಳೆಗೆ ರೈತರು ಭತ್ತದ ಬೀಜ ಖರೀದಿಸಿ ಬಿತ್ತನೆ ಮಾಡಿದ್ದ ಭತ್ತದ ಬೆಳೆಯು ನಾಟಿ ಮಾಡಿ 4 ತಿಂಗಳ ನಂತರವೂ ಅರ್ಧ ಜಮೀನುಗಳಲ್ಲಿ ಮಾತ್ರ ತೆನೆ ಕಟ್ಟಿತ್ತು. ಉಳಿದ ಅರ್ಧ ಜಮೀನಿನಲ್ಲಿ ತೆನೆ ಬಿಟ್ಟಿರಲಿಲ್ಲ. ಇದರಿಂದ ಸಂಕಷ್ಟಕ್ಕೆ ಸಿಲುಕಿದ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕೃಷಿ ಇಲಾಖೆ ಎದುರು ಎರಡು ದಿನಗಳ ಕಾಲ ಪ್ರತಿಭಟನೆ ನಡೆಸಿದರು.

ರೈತರ ಪ್ರತಿಭಟನೆಯ ಒತ್ತಡದಿಂದ ತಾಲೂಕು ಕೃಷಿ ಇಲಾಖೆ ಅಧಿಕಾರಿಗಳು ರೈತರ ಜಮೀನುಗಳಿಗೆ ಭೇಟಿ ನೀಡಿ ಸಂಸ್ಥೆಯ ಮಾಲೀಕರಿಗೆ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಅಧಿಕಾರಿಗಳ ಮಧ್ಯಸ್ತಿಕೆಯ ನಂತರ ಗ್ರೋಮರ್ ಸೆಂಟರ್ ಅಧಿಕಾರಿಗಳು 'ರೈತರ ಹೊಲದಲ್ಲಿ ಮಿಶ್ರ ಬೇಳೆ ಆಗಿ ರೈತರು ರೊಚ್ಚಿಗೆದ್ದಿರುವ ಕಾರಣ ರೈತರು ಬೆಳೆದ ಮಿಶ್ರ ಭತ್ತದ ಬೆಳೆಗಳನ್ನು ಪ್ರತಿ ಎಕರೆಗೆ 43 ಚೀಲ (75ಕೆ.ಜಿ) ಯಂತೆ ರೈತರಿಗೆ ಪರಿಹಾರವಾಗಿ ಕೊಡಲು' ಕರಾರು ಪತ್ರ ಬರೆದು ಕೊಟ್ಟಿದ್ದಾರೆ. 'ಮಾರುಕಟ್ಟೆಯಲ್ಲಿ ಬೆಳೆ ಕಟಾವು ಸಮಯದಲ್ಲಿ ಏನು ದರ ಇರುತ್ತದಯೋ ಅದರ ಸಂಪೂರ್ಣ ಹಣವನ್ನು ನಾವು ಕಂಪನಿಯಿಂದ ಪಾವತಿಸುತ್ತೇವೆ. ಅಲ್ಲಿಯವರೆಗೆ ಈ ದಿನದಿಂದ ಬೆಳೆಯೂ ಕಟಾವುಗೆ ಬರುವರೆಗೆ ನಿರ್ವಹಿಸುವುದು ಹಾಗೂ ಕಟಾವು ಮಾಡಿಕೊಡುವುದು ರೈತರ ಜವಾಬ್ದಾರಿಯಾಗಿದೆ.' ಎಂದೂ ಕರಾರು ಪತ್ರದಲ್ಲಿ ತಿಳಿಸಿದ್ದಾರೆ.

ಈ ಕರಾರು ಪತ್ರಕ್ಕೆ ಗ್ರೋಮರ್ ಸೆಂಟರ್ ಪರವಾಗಿ ಶ್ರೀ ಚಂದ್ರಶೇಖರ ಜೋನಲ್ ಮ್ಯಾನೇಜರ್ ರಾಯಚೂರು ಹಾಗೂ ಶ್ರೀ ವಿವೇಕ ಏರಿಯಾ ಮ್ಯಾನೇಜರ್ ಶಹಾಪೂರ; ಸಾಕ್ಷಿದಾರರಾಗಿ ರಹೀಮಾನಸಾಬ ಕೃಷಿ ಅಧಿಕಾರಿಗಳು ರಾಯಚೂರು ಹಾಗೂ ಸುಧಾ ಮೂಡಲಗೇರಿ ಕೃಷಿ ಸಹಾಯಕ ಅಧಿಕಾರಿಗಳು ದೇವದುರ್ಗ; ಸಹಿ ಹಾಕಿದ್ದಾರೆ. KPRS ನರಸಣ್ಣ ನಾಯಕ, ಶಿವರಾಜ್ ವಠಾರ್, ಹನುಮಂತ ಗುರು ನಾಯಕ, ಮೌನೇಶ ಮುಕ್ಕಣ್ಣ, ಮಕ್ತುಂ ಪಾಷ, ಮಲ್ಲು ತೆಗ್ಗೆಳ್ಳಿ, ಮಲ್ಲಪ್ಪ ಗೌಡೂರು,



ಶಿವಪ್ಪ ಗೌಡೂರು ಸಿದ್ದಪ್ಪ ತೆಗ್ಗೆಳ್ಳಿ ಮುಂತಾದವರು ಇದ್ದರು. ●

ಸಿಂದಗಿಯ ವಕೀಲರ ಕೊಲೆ: ಸಿಓಡಿ ತನಿಖೆಗೆ ಒತ್ತಾಯ

ಸಿಂದಗಿಯಲ್ಲಿ 31.10.2018 ರಂದು ನಡೆದ ವಕೀಲ ದತ್ತಾತ್ರೇಯ ಲಕ್ಷ್ಮಣ ಬಂಡಿವಡ್ಡರ ಬರ್ಬರ ಹತ್ಯೆಯ ಕುರಿತ ತನಿಖೆಯ ಬಗ್ಗೆ ಅಖಿಲ ಭಾರತ ವಕೀಲರ ಸಂಘವು(ಎ.ಐ.ಎಲ್.ಯು) ನೇಮಿಸಿದ ಸತ್ಯಶೋಧನಾ ಸಮಿತಿಯು ಅಸಮಾಧಾನ ವ್ಯಕ್ತಪಡಿಸಿದೆ. ಇಂದು ಸಿಂದಗಿಗೆ ಭೇಟಿ ನೀಡಿದ ರಾಜ್ಯದ ಆರು ವಕೀಲರುಗಳನ್ನೊಳಗೊಂಡ ತಂಡವು ಹತ್ಯೆಯಾದ ವಕೀಲರ ಗ್ರಾಮವಾದ ಬಳಗಾನೂರಿಗೆ ಭೇಟಿ ನೀಡಿತ್ತು. ಸಂಬಂಧಿಕರು, ಊರಿನವರು, ಸ್ನೇಹಿತರೊಂದಿಗೆ ಚರ್ಚಿಸಿ ಮಾಹಿತಿ ಕಲೆ ಹಾಕಿದರು. ನಂತರ ಸಿಂದಗಿಯ ವಕೀಲರ ಸಂಘದ ಸದಸ್ಯರೊಂದಿಗೆ ಭೇಟಿ ಮಾಡಿ ಮೃತ ವಕೀಲರು ನಡೆಸುತ್ತಿದ್ದ ವ್ಯಾಜ್ಯಗಳ ಕುರಿತು ದಾಖಲೆಗಳನ್ನು ಪಡೆದರು. ಕೋಟೇಶ್ವರ ರಾವು ಸತ್ಯಶೋಧನಾ ಸಮಿತಿಯ ಮುಖ್ಯಸ್ಥರು.

ಇದಲ್ಲದೆ, ಮೃತ ವಕೀಲರು ತೊಡಗಿಸಿಕೊಂಡಿದ್ದ ಸಾಮಾಜಿಕ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿ ಮಾಹಿತಿ ಪಡೆದರು. ನಂತರ ಪೋಲೀಸ್ ಅಧಿಕಾರಿಗಳನ್ನು ತಂಡದ ಸದಸ್ಯರು ಭೇಟಿ ಮಾಡಿ ಚರ್ಚಿಸಿದರು. ತಂಡದ ಮುಖ್ಯಸ್ಥರೂ ಮತ್ತು ಎಐಎಲ್‌ಯು ರಾಜ್ಯ ಉಪಾಧ್ಯಕ್ಷರೂ ಆದ ಕರ್ನಾಟಕ ವಕೀಲರ ಪರಿಷತ್ತು ಸದಸ್ಯ ಕೋಟೇಶ್ವರ ರಾವು ವಕೀಲರ ಕೊಲೆಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಪ್ರಕರಣದ ತನಿಖೆಯಲ್ಲಿ ಮತ್ತು ಕುಟುಂಬದ ಸದಸ್ಯರ ಮತ್ತು ಇತರರ ಅಭಿಪ್ರಾಯಗಳಲ್ಲಿ ಗಂಭೀರ ವ್ಯತ್ಯಾಸಗಳಿವೆ. ಮೇಲ್ನೋಟಕ್ಕೆ ಇದೊಂದು ಸಂಘಟಿತ ಅಪರಾಧವಾಗಿದ್ದು ಇದರಲ್ಲಿ ಭಾಗಿಯಾಗಿರುವ ಹಾಗೂ ಸಂಚು ನಡೆಸಿರುವವರ ಕುರಿತು ಆಳವಾದ ತನಿಖೆಯನ್ನು ನಡೆಸಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆಯನ್ನು ಸಿಓಡಿಗೆ ವರ್ಗಾಯಿಸಬೇಕೆಂದು ಕೋಟೇಶ್ವರ ರಾವು ಅವರು ಸರ್ಕಾರಕ್ಕೆ ಒತ್ತಾಯಿಸಿದರು.

ಇತ್ತೀಚಿನ ದಿನಗಳಲ್ಲಿ ವಕೀಲರ ಮೇಲೆ ಪದೇ ಪದೇ ಕೊಲೆ, ಹಲ್ಲೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ವಕೀಲರಿಗೆ ರಕ್ಷಣೆಯನ್ನು ಒದಗಿಸುವ ದಿಸೆಯಲ್ಲಿ ರಾಜ್ಯ ಸರ್ಕಾರವು ಸೂಕ್ತ ಕಾಯ್ದೆಯನ್ನು ರೂಪಿಸಬೇಕೆಂದು ಎಐಎಲ್‌ಯು ಒತ್ತಾಯಿಸಿದೆ.

ಸತ್ಯಶೋಧನಾ ಸಮಿತಿ ಸದಸ್ಯರಾದ ರಾಜ್ಯ ಸಮಿತಿ ಸದಸ್ಯ ಶ್ರೀನಿವಾಸ ಕುಮಾರ್, ಆರ್. ಜಗನ್ನಾಥ, ಎ. ಕರುಣಾನಿಧಿ, ಪಿ.ಪಿ.ಬಾಬುರಾಜ್ ಮತ್ತು ರಮೇಶ್ ಕುಮಾರ್ ಭಾಗವಹಿಸಿದ್ದು ವರದಿಯನ್ನು ಸಿದ್ಧಪಡಿಸಿದ್ದಾರೆ. ಸಿಂದಗಿ ವಕೀಲರ ಸಂಘದ ಅಧ್ಯಕ್ಷರಾದ ಬಿ.ಸಿ.ಕೊಣ್ಣೂರ ಹಾಗೂ ವಿಜಯಪುರದ ಹಿರಿಯ ವಕೀಲರಾದ ಶ್ರೀಧರ ಕುಲಕರ್ಣಿ ಜೊತೆಗಿದ್ದು ನೆರವು ನೀಡಿದರು.

ಪ್ರೊ. ಸೂಲಬಕ್ಕನವರ್ ಅವರಿಗೆ ಅಭಿನಂದನೆಗಳು!



ಖ್ಯಾತ ಕಲಾವಿದ ಸೂಲಬಕ್ಕನವರಿಗೆ ಹಾವೇರಿಯ ಜಾನಪದ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸುತ್ತಿರುವುದು ಸೂಕ್ತ ಮತ್ತು ಅಭಿನಂದನೀಯವಾಗಿದೆ. ಜನ ಚಳುವಳಿಗಳ ಜತೆ ಯಾವತ್ತೂ ಒಡನಾಡಿದ್ದ ಪ್ರೊ. ಸೂಲಬಕ್ಕನವರಿಗೆ ಅಭಿನಂದನೆಗಳು. ಅವರು ತರಬೇತಿ ಪಡೆದ ಕಲಾವಿದರಾಗಿದ್ದು 1990ರ ವರೆಗೆ ದಾವಣಗೆರೆಯ ಚಿತ್ರ ಕಲಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಆ ಅವಧಿಯಲ್ಲಿ 1986ರಲ್ಲಿ ವಿಶ್ವ ಶಾಂತಿ ವರ್ಷ ಆಚರಣೆಯ ಅಂಗವಾಗಿ ಸಮುದಾಯ ಸಾಂಸ್ಕೃತಿಕ ಸಂಘಟನೆಗೆ ಅವರು ಮಾಡಿಕೊಟ್ಟ ವಿಶ್ವಶಾಂತಿಯ ಸಂದರ್ಭದಲ್ಲಿ ರಚಿಸಿದ ನೂರಡಿಯ ದೀರ್ಘ ಚಿತ್ರ ಚಾರಿತ್ರಿಕವಾಗಿತ್ತು. ಸಮುದಾಯ "ನೂರಡಿ ಬಣ್ಣದ ನಡೆ, ಅಣ್ವಸ್ತ್ರಕ್ಕೆ ತಡೆ' ಎಂಬ ಘೋಷಣೆಯೊಂದಿಗೆ ರಾಜ್ಯಾದ್ಯಂತ ಜಾಥಾದಲ್ಲಿ ಸಂಚರಿಸಿ ವಿಶ್ವಶಾಂತಿಯ ಪರವಾಗಿ ಅಣು ಯುದ್ಧದ ವಿರುದ್ಧ ಪ್ರಚಾರಾಂದೋಲನ ನಡೆಸಿತ್ತು. ಇದಕ್ಕಾಗಿ ಅವರು ರಚಿಸಿದ 102x4 ಅಡಿಗಳ ಉದ್ದದ ಕ್ಯಾನವಾಸ್ ಮೇಲಿನ ತೈಲವರ್ಣದ ಚಿತ್ರ ಮಾನವ ಬೆಳವಣಿಗೆಯ "ವಿಕಾಸ" ಹಾದಿ, ಅದರಲ್ಲಿ ಸಾಮರಸ್ಯ-ಸಂಘರ್ಷ ಮತ್ತು ಯುದ್ಧಗಳ ಕುರಿತು ಸಾಮಾನ್ಯ ಜನರಲ್ಲಿ ಅರಿವು ಮೂಡಿಸಿತ್ತು. 1990ರ ಸ್ವಯಂ-ನಿವೃತ್ತಿ ನಂತರ ಅವರು ತಮ್ಮ ಜಾನಪದ ಕಲೆಗಳು ಮತ್ತು ಶಿಲ್ಪಕಲೆ ಮುಂತಾದ ಹಲವು ಅಭಿರುಚಿ ಹವ್ಯಾಸಗಳ ಅನ್ವೇಷಣೆಯಲ್ಲಿ ತೊಡಗಿದರು. ಶಿಗ್ಗಾವಿನ ಗೊಟಗೋಡಿ ತಾಲೂಕಿನಲ್ಲಿರುವ ಉತ್ಸವ್ ರಾಕ್ ಗಾರ್ಡನ್ ಒಂದು ಶಿಲ್ಪ ತೋಟವಾಗಿದ್ದು, ಇದು ಗ್ರಾಮೀಣ ಸಂಸ್ಕೃತಿಯ ಸಮಕಾಲೀನ ಕಲೆ ಮತ್ತು ಉತ್ತರ ಕರ್ನಾಟಕದ ಸಂಪ್ರದಾಯಗಳನ್ನು ಪ್ರದರ್ಶಿಸುತ್ತದೆ. ಉದ್ಯಾನವನವು ಕಾರ್ಮಿಕರ ದೈನಂದಿನ ಜೀವನವನ್ನು ಚಿತ್ರಿಸುವ 2,000 ಕ್ಕೂ ಹೆಚ್ಚು ಶಿಲ್ಪಗಳನ್ನು ಹೊಂದಿದೆ, ಅವುಗಳು ತುಂಬಾ ಜೀವಂತವಿರುವಂತೆ ಕಾಣುತ್ತದೆ. ಈ ಭವ್ಯವಾದ ಉದ್ಯಾನವನ್ನು ರೂಪಿಸುವ ಪರಿಕಲ್ಪನೆ, ವಿನ್ಯಾಸ ಗಳು ಸೂಲಬಕ್ಕನವರ್ ಅವರ ಕಲಾತಪಸ್ಸಿನ ಇನ್ನೊಂದು ಹೆಗ್ಗುರುತು. ಇಂತಹ ಹಲವು ರಾಕ್ ಗಾರ್ಡನುಗಳನ್ನು ವಿನ್ಯಾಸಗೊಳಿಸಿದ್ದಾರೆ. ಕಲಾವಿದನಿಗೆ ಸೌಂದರ್ಯ ಪ್ರಜ್ಞೆ ಜತೆ ಸಾಮಾಜಿಕ ಜವಾಬ್ದಾರಿಯೂ ಅಗತ್ಯವೆಂದು ನಂಬುವ ಸೂಲಬಕ್ಕನವರ್ ಅವರಿಗೆ ಇನ್ನೊಮ್ಮೆ ಅಭಿನಂದನೆಗಳು!

ಬೆಳಗಾವಿಯಲ್ಲಿ ಎಲ್.ಐ.ಸಿ. ದುಡಿಯುವ ಮಹಿಳೆಯರ ಸಮಾವೇಶ
ಮಹಿಳೆಗೆ ಎಲ್ಲ ಕ್ಷೇತ್ರದಲ್ಲೂ ಸಮಾನ ಅವಕಾಶ ಸಿಗಲಿ - ಎಸ್.ವರಲಕ್ಷ್ಮಿ

ದಿನಾಂಕ 28.10.2018 ರಂದು ಬೆಳಗಾವಿಯ ಪಾಟಿದಾರ ಭವನದಲ್ಲಿ ಕರ್ನಾಟಕ ರಾಜ್ಯ ಎಲ್.ಐ.ಸಿ ದುಡಿಯುವ ಮಹಿಳೆಯರ ಸಮಾವೇಶದ ಉದ್ಘಾಟನಾ ಭಾಷಣದಲ್ಲಿ, ಸಿ.ಐ.ಟಿ.ಯು ನ ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಯವರು ಮಹಿಳೆಗೆ ಎಲ್ಲ ಕ್ಷೇತ್ರದಲ್ಲೂ ಸಮಾನ ಅವಕಾಶಗಳು ಸಿಗಬೇಕು, ಅವಳ ಮೇಲೆ ನಾನಾ ರೀತಿಯಲ್ಲಿ ನಡೆಯುತ್ತಿರುವ ದೌರ್ಜನ್ಯ, ಕಿರುಕುಳಗಳು ನಿಲ್ಲಬೇಕು ಎಂದರು. ಸಂಪ್ರದಾಯವಾದಿಗಳು ಮಹಿಳೆಯರಿಗೆ ಶಬರಿಮಲೆ ದೇವಾಲಯ ಪ್ರವೇಶ ತಡೆದಿರುವುದು ತಪ್ಪು. ಸಂಪ್ರದಾಯದ ಹೆಸರಿನಲ್ಲಿ ಇದೆಲ್ಲಾ ನಡೆಯುತ್ತಿರುವುದು ಖಂಡನೀಯ, ಸುಪ್ರಿಂ ಕೋರ್ಟ್ ಆದೇಶವನ್ನು ಅಲ್ಲಿನ ಆಡಳಿತ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದರು. ಮುಟ್ಟು ಮಹಿಳೆಗೆ ನಿಸರ್ಗ ಕ್ರಿಯೆ. ಅದನ್ನು ಮೈಲಿಗೆ ಎನ್ನುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ರಕ್ಷಣೆ ಹಾಗೂ ಅನುಕೂಲಗಳು ಸಿಗಬೇಕು, ವೇತನ ತಾರತಮ್ಯಗಳನ್ನು ತಪ್ಪಿಸಬೇಕು. ಅವರ ಕೆಲಸಗಳಿಗೆ ಮಾನ್ಯತೆ, ಗೌರವ ಸಿಗಬೇಕು. ಕೇಂದ್ರ ಸರಕಾರ ಸಾರ್ವಜನಿಕ ವಲಯದ ಅನೇಕ ಕ್ಷೇತ್ರಗಳಲ್ಲಿ ಖಾಸಗೀಕರಣ ತರಲು ಪ್ರಯತ್ನ ನಡೆಸಿದೆ. ಇದು ಆಗಬಾರದು. ಈ ವಲಯದ ನೌಕರರಿಗೆ ಎಲ್ಲ ರೀತಿಯ ಸೌಕರ್ಯಗಳನ್ನು ನೀಡಬೇಕು. ಸಾಮಾಜಿಕವಾಗಿ ಮಹಿಳೆ ಇಂದಿಗೂ ಒಂದು ಚೌಕಟ್ಟಿನಲ್ಲಿ ಬದುಕಬೇಕಾದ ಸ್ಥಿತಿ ಇದೆ. ಸ್ವಾತಂತ್ರ್ಯ ಎಂಬುದಕ್ಕಿಂತ ಸೀಮಿತ ಸ್ವಾತಂತ್ರ್ಯ ಎಂದರೆ ಅರ್ಥಪೂರ್ಣವಾದೀತು. ಆರ್ಥಿಕ,ಧಾರ್ಮಿಕ, ಸಾಮಾಜಿಕ,ಔದ್ಯೋಗಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಗೆ ಸಿಗಬೇಕಾದ ಪೂರಕವಾದ ವಾತಾವರಣ ಸೃಷ್ಟಿ ಇದುವರೆಗೂ ಆಗಿಲ್ಲ. ಇಂದಿಗೂ ವಿವಿಧ ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಇನ್ನು ಅಸಂಘಟಿತ ವಲಯದ ದುಡಿಯುವ ವರ್ಗದ ಮಹಿಳೆಯರಿಗೆ ಸಂಘಟಿತ ವಲಯದ ಮಹಿಳೆಯರ ಸಹಕಾರ ಅಗತ್ಯವಾಗಿದೆ.

ಮೀ-ಟೂ ಅಭಿಯಾನದ ಬಗ್ಗೆ ಮಾತನಾಡಿದ ಅವರು ಯಾವುದೇ ಮಹಿಳೆ ಇಂಥ ವಿಷಯದಲ್ಲಿ ಸುಳ್ಳು ಹೇಳಿ ಪ್ರಚಾರ ಪಡೆಯುವ ಮಟ್ಟಕ್ಕೆ ಹೋದ ನಿದರ್ಶನಗಳು ಇಲ್ಲ. ಎಲ್ಲ ಕ್ಷೇತ್ರದಲ್ಲೂ ಕಿರುಕುಳ ಆಗುತ್ತಿದೆ. ಇದನ್ನು ಬಹಿರಂಗವಾಗಿ ಹೇಳಿಕೊಳ್ಳಲು ಈಗ ಮೀ-ಟೂ ವೇದಿಕೆಯಾಗಿದೆ. ಇದನ್ನು ತಪ್ಪಾಗಿ ಅರ್ಥೈಸಿಕೊಂಡಿರುವ ಅನೇಕರು ಹೆಣ್ಣು ಮಕ್ಕಳ ಧ್ವನಿ ಅಡಗಿಸುವ ಹಾಗೂ ಬಾಯಿ ಮುಚ್ಚಿಸುವ ಕೆಲಸ ನಡೆಸಿದ್ದಾರೆ. ಇತ್ತೀಚೆಗೆ ಬೆಲೆಏರಿಕೆ ಹೆಚ್ಚಾಗಿದೆ. ಸರಕಾರದ ಈ ಜನವಿರೋಧಿ ನೀತಿ ಖಂಡಿಸಲು ಜನವರಿ 8 ಮತ್ತು 9 2019 ರಂದು ದೇಶದ ಕಾರ್ಮಿಕ ವರ್ಗ ಮುಷ್ಕರಕ್ಕೆ ಅಣಿ ಆಗುತ್ತಿದೆ. ಎಲ್ ಐ ಸಿ ದುಡಿಯುವ ಮಹಿಳೆಯರು ಮುಂಚೂಣಿಯಲ್ಲಿ ಇರಬೇಕೆಂದು ಕರೆ ನೀಡಿದರು. ದಕ್ಷಿಣ ಮಧ್ಯ ವಲಯದ ವಿಮಾ ನೌಕರರ ಒಕ್ಕೂಟದ ಉಪಾಧ್ಯಕ್ಷೆ ಎಸ್.ಕೆ.ಗೀತಾ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ರಾಜ್ಯ ಸಂಚಾಲಕಿ ಎಚ್ ಆರ್ ಗಾಯತ್ರಿ ಅವರು ಕಳೆದ ಸಮಾವೇಶದ ನಂತರದ 15 ಪುಟಗಳ ವರದಿ ಸಲ್ಲಿಸಿದರು. 11 ಮಹಿಳೆಯರು ವರದಿ ಮೇಲೆ ಚರ್ಚೆಯ ನಂತರ ಸರ್ವಾನುಮತದಿಂದ ವರದಿ ಅಂಗೀಕಾರವಾಯಿತು. ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಂ. ಕ್ಲೆಮೆಂಟ ದಾಸ ಮಾತನಾಡಿ ಸಂಘಟನೆ 1988 ಜೈಪುರ ಸಮ್ಮೇಳನದಿಂದ ಮಹಿಳೆಯರನ್ನು ಸಂಘಟನೆ ಚಟುವಟಿಕೆಯಲ್ಲಿ ತೊಡಗಿಸುವ ದೃಷ್ಟಿಯಿಂದ ತೆಗೆದುಕೊಂಡ ನಿರ್ಧಾರಗಳ ವಿವರ ನೀಡಿದರು. ಮುಂಬರುವ ಜನವರಿ 2019 ಎರಡು ದಿನಗಳ ಮುಷ್ಕರಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಮಹಿಳೆಯರಿಗೆ ಸಂಬಂಧಿಸಿದ 4 ಗೊತ್ತುವಳಿಗಳನ್ನು ಸಮಾವೇಶ ಅನುಮೋದಿಸಿತು. ಎಂಟೂ ವಿಭಾಗದ ಸುಮಾರು 30 ಜನ ಮಹಿಳಾ ಸಂಗಾತಿಗಳು ಹಾಡಿದ ಸಮೂಹ ಗೀತೆ ಸಮಾವೇಶದ ಆಕರ್ಷಣೆಯಾಗಿತ್ತು. ಬೆಳಗಾವಿ ವಿಭಾಗದ ಮಹಿಳಾ ಸಂಗಾತಿಗಳು ಹಾಕಿದ ರಂಗೋಲಿ ವಿಶೇಷ ಆಕರ್ಷಣೆಯಾಗಿತ್ತು. ಸಮಾವೇಶ ಸಂಘಟಿಸುವಲ್ಲಿ ವಿಮಾ ನೌಕರರ ಸಂಘ ಪಟ್ಟ ಶ್ರಮ, ಪ್ರಯತ್ನ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಕರ್ನಾಟಕದ 8 ವಿಭಾಗಗಳಿಂದ ಸುಮಾರು 350 ಕ್ಕೂ ಹೆಚ್ಚು ಮಹಿಳಾ ಸಂಗಾತಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ದಲಿತ ಹಕ್ಕುಗಳ ಸಮಿತಿ ಪ್ರತಿಭಟನೆ

ಡಿ.ಎಸ್.ಎಂ.ಎಂ.ನ ಮಧ್ಯ ಪ್ರದೇಶ ರಾಜ್ಯದ ನಾಯಕರಾದ ಪಿಪ್ಪಲ್ ರನ್ನು ಹಾಗೂ, ಏಪ್ರಿಲ್ 2ರ ಭಾರತ್ ಬಂದ್ ಪ್ರತಿಭಟನೆಯಲ್ಲಿ ಬಂಧಿಸಿರುವ ಎಲ್ಲಾ ದಲಿತ ನಾಯಕರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು, ಡಿ.ಎಸ್.ಎಂ.ಎಂ.ನ ಅಖಿಲ ಭಾರತ ಕರೆಯ ಭಾಗವಾಗಿ ಬೆಂಗಳೂರಿನಲ್ಲಿ ನವೆಂಬರ್ 4ರಂದು ಮೈಸೂರು ಬ್ಯಾಂಕ್ ವೃತ್ತದ ಬಳಿ, ದಲಿತ ಹಕ್ಕುಗಳ ಸಮಿತಿ ವತಿಯಿಂದ ಪ್ರತಿಭಟನೆಯನ್ನು ನಡೆಸಲಾಯಿತು.

'ಸೈಪ್ರಸ್' ನಲ್ಲಿ ಕಟ್ಟಡ ಕಾರ್ಮಿಕ ಸಂಘಗಳ ಜಾಗತಿಕ ಸಭೆ

ಸೈಪ್ರಸ್ ನಲ್ಲಿ ಅಕ್ಟೋಬರ್ 19 ಹಾಗೂ 20 ರಂದು ನಡೆದ ಕಟ್ಟಡ ನಿರ್ಮಾಣ ಕಾರ್ಮಿಕರ ಜಾಗತಿಕ ಸಂಘಟನೆ UITBB ಯ ವಿಸ್ತೃತ ಕಾರ್ಯಕಾರಿ ಸಭೆಯಲ್ಲಿ, ಇಂಡಿಯಾದ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆ CWFI ನ ಪ್ರತಿನಿಧಿಯಾಗಿ ಭಾಗವಹಿಸಿದ ಮೂವರಲ್ಲಿ ಒಬ್ಬರಾದ ಕೆ. ಮಹಾಂತೇಶ ಅವರಿಂದ ಆ ಸಭೆ ಬಗ್ಗೆ ವರದಿ.

ಕೆ. ಮಹಾಂತೇಶ್



ಜಾಗತಿಕವಾಗಿ ಕಟ್ಟಡ ನಿರ್ಮಾಣ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಕೆಲಸ ಮಾಡುತ್ತಿರುವ UITBB (Trades Union International of Workers in the Building, Wood, Building Materials and Allied Industries) ನ ಅಂತರಾಷ್ಟ್ರೀಯ ಯುರೋಪ್ನ ಸೈಪ್ರೆಸ್ ದೇಶದ ಪ್ರಮುಖ ನಗರವಾದ ಲಾರನೇಕಾ (Larnaca) ದಲ್ಲಿ ಇದೇ ಅಕ್ಟೋಬರ್ 19 ಹಾಗೂ 20 ರಂದು ಆ ಸಭೆ ನಡೆಯಿತು. ಈ ಸಭೆಯಲ್ಲಿ ಇಂಡಿಯಾದ CWFI ಪ್ರತಿನಿಧಿಸಿ ಅಖಿಲ ಭಾರತ ಅಧ್ಯಕ್ಷರಾದ ಸಿಂಗಾರುವೇಲು, ಪಂಜಾಬ್ ನಿರ್ಮಾಣ ಮಜ್ದೂರ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಹರಿಂಧರ್ ಸಿಂಗ್ ಮತ್ತು ಕರ್ನಾಟಕವನ್ನು ಪ್ರತಿನಿಧಿಸಿ ನಾನು ಭಾಗವಹಿಸಿದ್ದೆವು.

ಜಾಗತಿಕವಾಗಿ ಕಾರ್ಮಿಕ ವರ್ಗ ಅದರಲ್ಲೂ ವಿಶೇಷವಾಗಿ ಕಟ್ಟಡ ನಿರ್ಮಾಣ ವಲಯ ಕಾರ್ಮಿಕರು ಹತ್ತು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿ ವಲಸೆ ಸಮಸ್ಯೆ ಮತ್ತು ಸುರಕ್ಷತಾ ರಹಿತ ದುಡಿಮೆ ಪ್ರಧಾನವಾದವುಗಳು. ಜಗತ್ತಿನಲ್ಲೆಡೆ ಈಗ ಜಾಗತೀಕರಣದ ಭರಾಟೆ. ಭವ್ಯ ಮಹಲುಗಳನ್ನು, ಸೌಧಗಳನ್ನು, ಗಗನ ಚುಂಬಿ ಕಟ್ಟಡಗಳನ್ನು ಕಟ್ಟುವ ಉಮೇದಿನಲ್ಲಿ ಬಂಡವಾಳಿಗರು ನಿರತರಾಗಿದ್ದಾರೆ. ಆದರೆ ಅಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗಕ್ಕೆ ಯಾವುದೇ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡುವುದಿಲ್ಲ ಮತ್ತು ಇರುವ ಕಡೆ ಉಲ್ಲಂಘನೆ ಎನ್ನುವುದು ಸಾಮಾನ್ಯವಾಗಿವೆ. ಇಂತಹ ನೀತಿಗಳ ವಿರುದ್ದ ಜಗದಗಲ ಹೋರಾಟಗಳು ಜಾಗತೀಕರಣಗೊಂಡಿವೆ. ಅದರ ಭಾಗವಾಗಿಯೇ UITBB ವಿಸ್ತೃತ ಕಾರ್ಯಕಾರಿ ಸಭೆಯನ್ನು ಸೈಪ್ರಸ್ ನ ಲಾರನೇಕಾದ PEO ಆಯೋಜಿಸಿತ್ತು. ಈ ಸಭೆಯಲ್ಲಿ ಲೆಬನಾನ್, ಸಿರಿಯಾ, ವಿಯೆಟ್ನಾಂ, ಕ್ಯೂಬಾ, ಪನಾಮ, ಉರುಗ್ವೇ, ಸ್ಪೈನ್, ಸೈಪ್ರಸ್, ಪೋರ್ಚುಗಲ್, ಇಂಡಿಯಾ ಗ್ರೀಸ್, ಜಪಾನ್ ಹಾಗೂ WFTU ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿ ಇಂತಹ ಹಲವು ಅನುಭವಗಳನ್ನು ಸಭೆಯಲ್ಲಿ ಹಂಚಿಕೊಂಡರು.

ಬ್ರೆಜಿಲ್ ನಲ್ಲಿ ಉಂಟಾದ ರಾಜಕೀಯ ಬದಲಾವಣೆ ಕಾರಣದಿಂದಾಗಿ ಅಲ್ಲಿ ಟ್ರೇಡ್ ಯೂನಿಯನ್ ಜವಬ್ದಾರಿಯಿಂದ UITBB ಅಧ್ಯಕ್ಷರಾದ ಅಂಥೊನಿಯಾ ಪೆರಿಸೀಸ್ ಕೆಳಗಿಳಿಸಲಾಗಿದೆ ಹಾಗಾಗಿ ಅವರು ಈ ಸಭೆಗೆ ಹಾಜರಾಗಲು ಸಾಧ್ಯವಾಗಲಿಲ್ಲ. ಹೀಗಾಗಿ ಈ ಸಭೆಯ ಅಧ್ಯಕ್ಷತೆಯನ್ನು ಗ್ರೀಕ್ ನ ಯನ್ನೀಸ್ ಟಾಸೀಯೋಲಾಸ್ ವಹಿಸಿ ನಡೆಸಿದರು.

UITBB ಪ್ರಧಾನ ಕಾರ್ಯದರ್ಶಿ ಮೀಕಾಲೀಸ್ ಪಾಪನೀಕೋಲೋ ಎಲ್ಲರನ್ನು ಸ್ವಾಗತಿಸಿ ಜಗತ್ತಿನಾದ್ಯಂತ ಹಣಕಾಸು ಬಂಡವಾಳದ ಹರಿಯುವಿಕೆಯು ಅಭಿವೃದ್ಧಿಯ ಮುಖವಾಡ ಹಾಕಿ ಶ್ರಮಜೀವಿಗಳನ್ನು ಹೇಗೆ ಶೋಷಣೆಗೊಳಪಡಿಸಿದೆ, ವಿಶೇಷವಾಗಿ ಜಗತ್ತಿನ ಬೇರೆ ಬೇರೆ ಖಂಡಗಳಲ್ಲಿ ಕಟ್ಟಡ ನಿರ್ಮಾಣ ವಲಯ ತೀವ್ರವಾಗಿ ಬೆಳೆಯುತ್ತಿದ್ದರೂ ಕಾರ್ಮಿಕ ಕಲ್ಯಾಣ, ಸುರಕ್ಷಾ ಕ್ರಮಗಳಿಲ್ಲದೆ ಕಾರ್ಮಿಕರು ದುಡಿಯುವಂತಾಗಿದೆ. ಕಾರ್ಮಿಕ ಕಾನೂನು ಉಲ್ಲಂಘನೆಗಳು, ಕಾರ್ಮಿಕರ ಸಾವುಗಳು ನಿರಂತರ ಎನ್ನುವಂತೆ ಆಗಿವೆ. ಇದು ನಮ್ಮಗಳ ಮುಂದಿರುವ ಗಂಭೀರ ಸವಾಲಾಗಿದೆ. ಬಂಡವಾಳಶಾಹಿಯು ತನ್ನ ಲಾಭಕೋರತನವನ್ನು ತೀವ್ರ ಗೊಳಿಸಲು ಮತ್ತಷ್ಟು ಶೋಷಣೆಗಳನ್ನು ಹರಿಯ ಬಿಡುತ್ತದೆ. ಇಂತಹ ನೀತಿಗಳ ವಿರುದ್ಧ UITBB ಸಂಯೋಜಿತ ಸಂಘಟನೆಗಳು ಜಗತ್ತಿನಾದ್ಯಂತ ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸಿವೆ. ಆದರೆ ಈಗ ನಡೆಯುತ್ತಿರುವ ಪ್ರಯತ್ನಗಳು ಸಾಲದು. ಇದು ಹೆಚ್ಚಾಗಬೇಕು. ಇದಕ್ಕೆ ಕಾರಣವಾಗಿರುವ ನಮ್ಮ ಸಂಘಟನಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗಬೇಕು. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾದಷ್ಟು ಬೇಗ ಪ್ರಯತ್ನಿಸಬೇಕು. ಇಲ್ಲದಿದ್ದಲ್ಲಿ ನಾವು ಕೈಗೊಳ್ಳುವ ಹಲವು ಕಾರ್ಯಯೋಜನೆಗಳನ್ನು ಜಾರಿ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ UITBB ಹಮ್ಮಿಕೊಂಡಿರುವ ಈ ಕಾರ್ಯಕ್ರಮಗಳ ಜಾರಿಗೆ ಅಗತ್ಯ ಸಹಾಯ ಸಹಕಾರದ ಅಗತ್ಯವನ್ನು ಕೋರಿದರು.

ಪ್ರಧಾನ ಕಾರ್ಯದರ್ಶಿ ಪ್ರಾಸ್ತಾವಿಕ ಮಾತಿನ ಬಳಿಕ ಇಂಡಿಯಾವನ್ನು ಪ್ರತಿನಿಧಿಸಿ ಸಿಂಗಾರವೇಲು ಮಾತನಾಡಿ ಭಾರತದ ರಾಜಕೀಯ ಪರಿಸ್ಥಿತಿ, ಬಲಪಂಥಿಯ ದಾಳಿಗಳು, ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಕಾರ್ಮಿಕ ವರ್ಗ ನಡೆಸುತ್ತಿರುವ ಹೋರಾಟಗಳು, ನೋಟು ಅಮಾನ್ಯೀಕರಣ, ಜಿಎಸ್.ಟಿ. ನೀತಿಗಳ ಪರಿಣಾಮವಾಗಿ ಕಟ್ಟಡ ಕಾರ್ಮಿಕರ ಪರಿಸ್ಥಿತಿ, ಉದಾರೀಕರಣ ನೀತಿಗಳ ಪರಿಣಾಮವಾಗಿ ಬಿಲಿಯನರ್ಸ್ ಸಂಖ್ಯೆಗಳ ಹೆಚ್ಚಳ ಮತ್ತು ಈ ನೀತಿಗಳಿಗೆ ಪ್ರತಿರೋಧ ವ್ಯಕ್ತಪಡಿಸುವವರನ್ನು ಬಂಧಿಸುವ ಪ್ರವೃತ್ತಿಗಳು, ನಮ್ಮ ಆಹಾರ, ಬಟ್ಟೆ, ಓಡಾಟಗಳ ಮೇಲೆ ನಿರ್ಬಂಧ ಹೇರುತ್ತಿರುವ ಬಗ್ಗೆ, ದಲಿತರ ಮೇಲೆ ನಡೆಯುತ್ತಿರುವ ದಾಳಿಗಳು, ಮರ್ಯಾದಾ ಹತ್ಯೆಗಳು ಇತ್ಯಾದಿಳ ಬಗ್ಗೆ ಅವರು ತಮ್ಮ ಭಾಷಣದಲ್ಲಿ ಬೆಳಕು ಚೆಲ್ಲಿದರು.

ನಿರ್ಣಯಗಳು

ಎರಡು ದಿನಗಳ ಕಾಲ ಸುಮಾರು 12 ದೇಶಗಳ ಚರ್ಚೆಯ ಬಳಿಕ UITBB ಸಭೆಯು ಹಲವು ನಿರ್ಣಯಗಳನ್ನು ಕೈಗೊಂಡಿತು. ಅದರಲ್ಲಿ ಪ್ರಮುಖವಾಗಿ ಕಟ್ಟಡ ನಿರ್ಮಾಣ ವಲಯದಲ್ಲಿ ಒಂದು ಸೈದ್ಧಾಂತಿಕ ಹಾಗೂ ರಾಜಕೀಯ ಬದ್ಧತೆಯೊಂದಿಗೆ ಕೆಲಸ ಮಾಡುವ ಸಂಘಟನೆಗಳ ನಡುವೆ ಒಂದು ಅಂತರಾಷ್ಟ್ರೀಯ ಸಮನ್ವಯತೆ ತರುವುದು, ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರಿಗೆ ಸುರಕ್ಷತಾ ವಿಧಾನಗಳು, ಕಲ್ಯಾಣ ಸೌಲಭ್ಯಗಳಿಗಾಗಿ ತೀವ್ರ ರೀತಿಯ ಚಳವಳಿಗಳನ್ನು ನಡೆಸುವುದು, UITBB ಸಂಘಟನಾ ಜಾಲವನ್ನು ಎಲ್ಲಾ ಖಂಡಗಳ ವಿವಿಧ ದೇಶಗಳಲ್ಲಿರುವ ಸಂಪರ್ಕ ಬಳಸಿ ವಿಸ್ತರಿಸುವುದು, ಅದಕ್ಕಾಗಿ ಪ್ರಾದೇಶಿಕ ಸಹಕಾರಗಳನ್ನು ಪರಸ್ಪರ ನೀಡುವುದು, ಸಂಘಟನೆಯ ಹಣಕಾಸಿನ ಪರಿಸ್ಥಿತಿ ಉತ್ತಮಪಡಿಸುವುದು ಮತ್ತು ಸಾಮಾಜಿಕ ಜಾಲ ತಾಣಗಳನ್ನು ಚಳವಳಿ ವಿಸ್ತರಣೆ ಮತ್ತು ಸಂಘಟನಾ ಸಂಪರ್ಕಗಳನ್ನು ಹೆಚ್ಚಿಸಲು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು – ಮುಂತಾದ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು.



UITBB ಇತಿಹಾಸ

1949 ಜುಲೈ 14–16 ರಲ್ಲಿ ಇಟಲಿಯ ಮಿಲಾನೋ ದಲ್ಲಿ ಜರುಗಿದ ಪ್ರಥಮ ಅಧಿವೇಶನದಲ್ಲಿ UITBB ಜನ್ಮ ತಾಳಿತು. ಕಳೆದ ಏಳು ದಶಕಗಳಿಂದ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕ ಪರಿಸ್ಥಿತಿ ಸುಧಾರಣೆಗಾಗಿ ಅದೇ ರೀತಿಯಲ್ಲಿ ಜಗತ್ತಿನಾದ್ಯಂತ ಕೆಲಸ ಮಾಡುತ್ತಿರುವ ಕಟ್ಟಡ ನಿರ್ಮಾಣ ವಲಯದ ಸಂಘಟನೆಗಳನ್ನು ಒಳಗೊಂಡಿರುವ ಅಂತರಾಷ್ಟ್ರೀಯ ಸಂಘಟನೆಯಾಗಿ UITBB ಕಾರ್ಯನಿರ್ವಹಿಸುತ್ತಿದೆ. ಜೊತೆಗೆ World Federation of Trade Unions (WFTU) ಸಂಯೋಜನೆಗೊಂಡು ವಿಶ್ವ ಮಟ್ಟದಲ್ಲಿ ಜನಾಂಗೀಯ, ಲಿಂಗ, ಧಾರ್ಮಿಕ, ಭಾಷೆ ಹಾಗೂ ರಾಜಕೀಯ ಭಿನ್ನತೆಗಳನ್ನು ಮೀರಿ, ದುಡಿಯುವ ವರ್ಗದ ಹಕ್ಕುಗಳಿಗಾಗಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಶೋಷಣಾ ವಿಧಾನದ ವಿರುದ್ಧ ನಿರಂತರ ತನ್ನ ಪ್ರತಿರೋಧ ಒಡ್ಡುತ್ತಿರುವ ಕಟ್ಟಡ ನಿರ್ಮಾಣ ವಲಯದ ಏಕೈಕ ಜಾಗತಿಕ ಸಂಸ್ಥೆಯಾಗಿದೆ. 1979 ರಿಂದಲೂ ನಮ್ಮ ಸಂಘಟನೆಯಾದ Construction Workers of India (CWFI-CITU) ಆರಂಭದಿಂದಲೂ UITBB ಸಂಘಟನೆಯೊಂದಿಗೆ ಜಾಗತಿಕವಾಗಿ ಕೆಲಸ ಮಾಡುತ್ತಾ ಬಂದಿದೆ. ಇಂತಹ UITBB ಸಂಘಟನೆಯು ತನ್ನ ಅಂತರಾಷ್ಟ್ರೀಯ ಸಭೆಗಳನ್ನು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ನಡೆಸುತ್ತಾ ಬಂದಿದೆ.

ಕಳೆದ ವರ್ಷ ಇಂತಹ ಸಭೆಯನ್ನು CWFI ಆತಿಥ್ಯವಹಿಸಿ ಕೇರಳದ ಕೊಚ್ಚಿನ್ ನಗರದಲ್ಲಿ ನಡೆಸಿಕೊಟ್ಟಿತ್ತು. ಇದೀಗ ಸೈಪ್ರಸ್ ಪ್ರಮುಖ ಕಾರ್ಮಿಕ ಸಂಘಟನೆಯಾದ Cyprus Building, Wood, Mine and General Workers trade Union (PEO) ಎರಡು ದಿನಗಳ UITBB ಅಂತರಾಷ್ಟ್ರೀಯ ಸಭೆಯನ್ನು ಸೈಪ್ರೆಸ್ ನ ಪ್ರಮುಖ ಬಂದರು ನಗರವಾದ ಲಾರನೇಕಾ ದಲ್ಲಿ ವ್ಯವಸ್ಥೆ ಗೊಳಿಸಿತ್ತು. ಏಷ್ಯಾ–ಯುರೋಪ ಮತ್ತು ಆಫ್ರಿಕಾ ಹೀಗೆ ಮೂರು ಖಂಡಗಳಿಗೂ ಮಧ್ಯೆ ಬರುವ "ಸೈಪ್ರಸ್" ಅತ್ಯಂತ ಚಿಕ್ಕದಾದ ದೇಶ. ಅಲ್ಲಿಗೆ ಅಕ್ಟೋಬರ್ 17 ರ ಮಧ್ಯಾನ್ಹ ನಾವು ಬಹರೇನ್ ಮೂಲಕ ಲಾರನೇಕಾ ತಲುಪಿದೆವು. ಸಭೆಯ ಆತಿಥ್ಯವನ್ನು ವಹಿಸಿದ್ದ ಸೈಪ್ರಸ್ ಪ್ರಮುಖ ಕಾರ್ಮಿಕ ಸಂಘ PEO ತನ್ನ ಗೆಸ್ಟ್ ಹೌಸ್ ಕಂ ಹೋಟೆಲ್ ನಲ್ಲಿ ನಮ್ಮ ವಾಸ್ತವ್ಯಕ್ಕೆ ತುಂಬಾ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದರು.

ವಲಸೆ ಕಾರ್ಮಿಕರು ವೇತನ ತಾರತಮ್ಯಗಳು

ಅಕ್ಟೋಬರ್ 17 ಬೆಳಗಿನ ಜಾವ ದೆಹಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟು ಬಹ್ರೇನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿ ಅಲ್ಲಿಂದ ಸೈಪ್ರಸ್ ಲಾರನೇಕಾ ಕ್ಕೆ ಹೋಗಲು ಗೇಟ್ ನಂ 34ಕ್ಕೆ ಹೋದೆವು. ಅಲ್ಲಿ ನಮಗೆ ಸಿಕ್ಕ ಪ್ರತಿಯೊಬ್ಬರು ಸೈಪ್ರಸ್ ನ ವಿವಿಧ ಪ್ರದೇಶಗಳಿಗೆ ಕೆಲಸಕ್ಕಾಗಿ ವಲಸೆ ಬರುತ್ತಿದ್ದ ಅತ್ಯಂತ ಚಿಕ್ಕ ವಯಸ್ಸಿನ ಯುವಕ ಯುವತಿಯರೇ ಆಗಿದ್ದರು. ಅದರಲ್ಲೂ ಪಂಜಾಬ್ ಮೂಲದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಇಲ್ಲಿನ ಹೊಲಗಳಲ್ಲಿ, ಮಾಂಸಕ್ಕಾಗಿ ಬೆಳೆಸಲಾಗುವ ಕೋಳಿ ಹಸು, ಹಂದಿ, ಸಾಕಾಣಿಕೆ ಫಾರ್ಮ್‌ಹೌಸ್ ಗಳಲ್ಲಿ, ಹೊಟೇಲ್, ಆಫೀಸ್ ಗಳಲ್ಲಿ ಇವರೆಲ್ಲ ದುಡಿಯಲು ತೆರಳುತ್ತಿದ್ದರು. ಹೀಗೆ ದುಡಿಯಲು ಬರುವವರಿಗೆ ಒಂದೇ ರೀತಿಯ ವೇತನಗಳಿಲ್ಲ. ನಾವು ಉಳಿದು ಕೊಂಡಿದ್ದ PEO ಯೂನಿಯನ್ ಗೆಸ್ಟ್ ಹೌಸ್ ರೆಸಾರ್ಟ್ ರೀತಿಯದ್ದು. ಅದನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಇಲ್ಲಿರುವ ಎಲ್ಲಾ ನೌಕರರು ಸ್ಥಳೀಯರು. ಅವರಿಗೆಲ್ಲಾ ಪ್ರತಿ ಒಂದು ಗಂಟೆಗೆ 5 ಯುರೋ

ಪುಟ 10 ಕ್ಕೆ

ಇರಾನಿನ ಮೇಲೆ ತನ್ನ ನಿರ್ಬಂಧವನ್ನು ಹೇರುವ ಆಶಯವನ್ನು ಅಧ್ಯಕ್ಷ ಟ್ರಂಪ್ ಏಕಪಕ್ಷೀಯವಾಗಿ ಪ್ರಕಟಿಸಿದಾಗ, ಭಾರತ ಯಾವುದೋ ಒಂದು ದೇಶ ಹೇರುವ ನಿರ್ಬಂಧಗಳನ್ನು ಪಾಲಿಸುವುದಿಲ್ಲ ಎಂದು ಘೋಷಿಸಲಾಗಿತ್ತು. ಆದರೆ ಅಂದಿನಿಂದ, ಅಮೆರಿಕಾದಿಂದ ವಿನಾಯ್ತಿಗೆ ಅಂಗಲಾಚುವುದು, ಅದಕ್ಕಾಗಿ ಇರಾನಿನಿಂದ ತೈಲ ಆಮದನ್ನು, ಅದರ ಮೇಲಿನ ಅಮೆರಿಕನ್ ನಿರ್ಬಂಧ ಜಾರಿಯಾಗುವ ವೇಳೆಗೆ ಮೂರನೇ ಒಂದರಷ್ಟು ಇಳಿಸಿರುವುದು ಅಮರಿಕನ್ ಒತ್ತಡಕ್ಕೆ ಕ್ರಮೇಣ ತಲೆಬಾಗಿರುವುದನ್ನು ಹೊರಗೆಡಹುತ್ತದೆ................

ಇರಾನ್ ನಿರ್ಬಂಧದಿಂದ 'ವಿನಾಯ್ತಿ' ಸರಕಾರದ ಸಾಧನೆಯಲ್ಲ-ಶರಣಾಗತಿ



ಒಂದು ಅಡಿಯಾಳು ಮಿತ್ರನಾಗುವ ಮೋದಿ ಸರಕಾರದ ಆತುರದಿಂದಾಗಿ ಅಮೆರಿಕಾದೊಂದಿಗೆ ಭಾರತ ಒಂದು ಸಾಮರಿಕ ಆಲಿಂಗನದಲ್ಲಿ ಬಂಧಿಯಾಗಿದೆ. ಇದರಿಂದ ತಪ್ಪಿಸಿಕೊಂಡರೆ ಮಾತ್ರವೇ, ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ನಿರ್ಬಂಧಗಳನ್ನು ಉಲ್ಲಂಘಿಸಲು ಮತ್ತು ತನ್ನ ಆಯಕಟ್ಟಿನ ಸ್ವಾಯತ್ತತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಇದು ಮೋದಿ ಆಳ್ವಿಕೆಗೆ ಯೋಚಿಸಲೂ ಸಾಧ್ಯವಿಲ್ಲದ ಒಂದು ಸಂಗತಿ.



ಪ್ರಕಾಶ ಕಾರಟ್

ಮೋದಿ ಸರಕಾರ ಅಮೆರಿಕ ಸಂಯುಕ್ತ ಸಂಸ್ಥಾನಗಳ ನಿರ್ಬಂಧಗಳ ಬೆದರಿಕೆಗಳ ಎದುರು ಮಂಡಿಯೂರಿದೆ. ಮೊದಲ ನೋಟಕ್ಕೆ, ಸರಕಾರ ಭಾರತ ಮತ್ತು ಇತರ ಏಳು ದೇಶಗಳಿಗೆ ನಿರ್ಬಂಧಗಳಿಂದ ನೀಡಿರುವ ತಾತ್ಕಾಲಿಕ ವಿನಾಯ್ತಿಯನ್ನು ಸರಕಾರ ಬಿಂಬಿಸುತ್ತಿರುವ ರೀತಿಯಿಂದ, ಇದು ಅಸಂಭವ ಎಂದನಿಸಬಹುದು. ಆದರೆ, ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ನೀಡಿರುವ ಹೇಳಿಕೆಯನ್ನು ವಿಶ್ಲೇಷಿಸಿದಾಗ ಚಿತ್ರ ಸ್ಪಷ್ಟವಾಗುತ್ತದೆ.

ಅಮೆರಿಕ ಸಂಯುಕ್ತ ಸಂಸ್ಥಾನ ನವಂಬರ್ 5ರಿಂದ ಇರಾನಿನ ತೈಲ ವ್ಯಾಪಾರ, ಹಡಗು ಸಾಗಣೆ ಮತ್ತು ಬ್ಯಾಂಕಿಂಗ್ ಮೇಲೆ ನಿರ್ಬಂಧಗಳನ್ನು ಮತ್ತೆ ಹಾಕಿತು. ಈ ವಲಯಗಳಲ್ಲಿ ಇರಾನಿನೊಂದಿಗೆ ವ್ಯಾಪಾರ ಮತ್ತು ವ್ಯವಹಾರ ಚಟುವಟಿಕೆಗಳನ್ನು ನಡೆಸುವವರ ಮೇಲೂ ಈ ನಿರ್ಬಂಧಗಳು ಅನ್ವಯಿಸುತ್ತವೆ. ಈ ವರ್ಷ ಮೇ ತಿಂಗಳಲ್ಲಿ ಇರಾನಿನೊಂದಿಗೆ ಪರಮಾಣು ಒಪ್ಪಂದದಿಂದ ಹೊರಬಂದಿರುವುದಾಗಿ ಪ್ರಕಟಿಸಿದ ನಂತರ ಅದು ಈ ಸ್ವೇಚ್ಛಾಚಾರದ ಕ್ರಮವನ್ನು ಕೈಗೊಂಡಿದೆ. ಆರು ತಿಂಗಳಲ್ಲಿ ತೈಲ ರಫ್ತಿನ ಮೇಲೆ ನಿರ್ಬಂಧಗಳನ್ನು ಹಾಕುವುದಾಗಿ ಅಮೆರಿಕನ್ ಆಡಳಿತ ಆಗ ಹೇಳಿತ್ತು.

ಇರಾನಿನ ಪರಮಾಣು ಶಸ್ತ್ರಾಸ್ತ್ರ ಅಭಿವೃದ್ಧಿ ಸಾಮರ್ಥ್ಯದ ಮೇಲೆ ಮಿತಿ ಹಾಕಲು ಜಂಟಿ ಸಮಗ್ರ ಕಾರ್ಯಾಚರಣೆಯ ಯೋಜನೆ(ಜೆಸಿಪಿಒಎ) ಎಂಬುದನ್ನು ಇರಾನ್ ಮತ್ತು ಇತರ ಆರು ದೇಶಗಳು, ಅಂದರೆ ಅಮೆರಿಕಾ ಸಂಯುಕ್ಯ ಸಂಸ್ಥಾನ, ಜರ್ಮನಿ, ಫ್ರಾನ್ಸ್, ಬ್ರಿಟನ್, ರಷ್ಯಾ ಮತ್ತು ಚೀನಾ ನಡುವೆ ರೂಪಿಸಲಾಯಿತು. ಈಗಿನ ಅಮೆರಿಕನ್ ನಿರ್ಧಾರವನ್ನು ಇತರ ಯಾವ ಭಾಗೀದಾರ ದೇಶವೂ ಒಪ್ಪಿಲ್ಲ. ಇರಾನ್ ಒಪ್ಪಂದದ ಶರತ್ತುಗಳನ್ನು ಪಾಲಿಸುತ್ತಿದೆ, ಆದ್ದರಿಂದ ಅಮೆರಿಕಾ ಹಿಂತೆಗೆದುಕೊಂಡಿರುವುದು ಒಂದು ಅನಗತ್ಯ ಕ್ರಮ ಎಂದು ಅವು ಹೇಳಿವೆ. ತಾವು ಇರಾನಿನೊಂದಿಗೆ ವ್ಯಾಪಾರವನ್ನು ಮುಂದುವರೆಸುವುದಾಗಿ ಅವು ಹೇಳಿವೆ.

ಭಾರತವು ಚೀನಾದ ನಂತರ ಇರಾನಿನಿಂದ ತೈಲ ಪಡೆಯುತ್ತಿರುವ ಎರಡನೇ ದೊಡ್ಡ ದೇಶ. ಸದ್ಯಕ್ಕೆ, ಇರಾನ್ ಭಾರತಕ್ಕೆ ಮೂರನೇ ದೊಡ್ಡ ತೈಲ ಪೂರೈಕೆದಾರ ದೇಶ. ಕಳೆದ ಆರು ತಿಂಗಳಲ್ಲಿ, ನಿರ್ಬಂಧ ಹೇರುವ ಸಿದ್ಧತೆಯಲ್ಲಿ, ಇರಾನಿನಿಂದ ಭಾರತ ತನ್ನ ತೈಲ ಆಮದುಗಳನ್ನು ಕಡಿತ ಮಾಡುವಂತೆ ಅಮೆರಿಕಾ ಮಾತುಕತೆಗಳನ್ನು ನಡೆಸುತ್ತ ಬಂದಿದೆ.

ಸಪ್ಟಂಬರಿನಲ್ಲಿ 2+2 ಮಂತ್ರಿಮಟ್ಟದ ಮಾತುಕತೆಗಳಲ್ಲಿ, ಭಾರತ ಇರಾನಿನಿಂದ ತೈಲ ಆಮದುಗಳನ್ನು ಗಮನಾರ್ಹವಾಗಿ ಇಳಿಸಲು ಕ್ರಮ ಕೈಗೊಳ್ಳುವುದು, ಅದಕ್ಕೆ ಪ್ರತಿಯಾಗಿ, ಆರು ತಿಂಗಳಲ್ಲಿ ಕ್ರಮೇಣ ಕಡಿಮೆ ಪ್ರಮಾಣದಲ್ಲಿ ಇರಾನಿ ತೈಲ ಆಮದನ್ನು ಮುಂದುವರೆಸಲು ಅಮೆರಿಕಾ ವಿನಾಯ್ತಿಯನ್ನು ಕೊಡುತ್ತದೆ ಎಂಬ ಒಂದು ತಿಳುವಳಿಕೆಗೆ ಬಂದಿರುವಂತೆ ಕಾಣುತ್ತದೆ. ಒಂದು ನಿರ್ದಿಷ್ಟ ಅವಧಿಯಲ್ಲಿ ಸೊನ್ನೆ ಆಮದುಗಳತ್ತ ಸಾಗಲು ಅಮೆರಿಕಾ ಭಾರತದ ಮೇಲೆ ಒತ್ತಡ ಹಾಕುವುದನ್ನು ಮುಂದುವರೆಸುತ್ತದೆ.

ಆ ಮಾತುಕತೆಗಳಲ್ಲಿ ಇದು ನಡೆದಿದೆ ಎಂಬುದನ್ನು ನಿರ್ಬಂಧ ಹೇರುವ ಹಿಂದಿನ ದಿನ, ನವಂಬರ್ 2ರಂದು ಮೈಕ್ ಪೊಂಪಿಯೊ ನೀಡಿರುವ ಹೇಳಿಕೆ ಈಗ ದೃಢಪಡಿಸಿದೆ. "ಎಂಟು ವ್ಯಾಪ್ತಿಗಳಿಗೆ ಕೆಲವು ತಾತ್ಕಾಲಿಕ ನೀಡಿಕೆಗಳನ್ನು" ಕೊಡಲಾಗುತ್ತಿದೆ ಎಂದು ಅವರು ಹೇಳಿದರು. ಆದರೆ "ಅವರು ಕಚ್ಚಾ ತೈಲ ಆಮದಿನಲ್ಲಿ ಗಮನಾರ್ಹ ಕಡಿತ ಮತ್ತು ಇತರ ಹಲವು ರಂಗಗಳಲ್ಲಿ ಸಹಕಾರವನ್ನು ಪ್ರದರ್ಶಿಸಿದ್ದರಿಂದ ಮಾತ್ರವೇ" ಎಂದು ಅವರು ಸೇರಿಸಿದರು.

ಭಾರತ ತನ್ನ ಕಚ್ಚಾ ತೈಲ ಆಮದಿನಲ್ಲಿ ಗಮನಾರ್ಹ ಕಡಿತಗಳನ್ನು "ಪ್ರದರ್ಶಿಸಿದೆ". ಆಮದು ಪ್ರಮಾಣ ಮೇ 2018ರಲ್ಲಿ ದಿನಕ್ಕೆ 6,90,000 ಬ್ಯಾರಲ್ ಇದ್ದದ್ದು, ಈ ವರ್ಷ ಆಗಸ್ಟ್‌ನಲ್ಲಿ (2+2 ಭೇಟಿಯ ವೇಳೆಗೆ) ದಿನಕ್ಕೆ 4,00,000 ಬ್ಯಾರಲ್‌ಗೆ ಇಳಿಯಿತು.

2017-18ರಲ್ಲಿ ಭಾರತವು ಇರಾನಿನಿಂದ 2.26 ಕೋಟಿ ಟನ್ ತೈಲವನ್ನು ಆಮದು ಮಾಡಿಕೊಂಡಿತ್ತು. ಅದನ್ನು ವರ್ಷಕ್ಕೆ 1.5 ಕೊಟಿ ಟನ್‌ಗಳಿಗೆ ಸೀಮಿತಗೊಳಿಸಬೇಕು ಎಂದು ಅಮೆರಿಕಾ ಆಗ್ರಹಿಸುತ್ತಿರುವುದಾಗಿ ವರದಿಯಾಗಿದೆ, ಅದು ದಿನಕ್ಕೆ 3,00,000 ಲಕ್ಷ ಬ್ಯಾರಲ್‌ಗಳಷ್ಟಾಗುತ್ತದೆ.

ಅಧ್ಯಕ್ಷ ಟ್ರಂಪ್ ತಮ್ಮ ದೇಶ ಇರಾನಿನಿಂದ ತೈಲ ಆಮದುಗಳನ್ನು ಒಮ್ಮೆಲೇ ಇಳಿಸಲು ಆಗ್ರಹಿಸಿಲ್ಲ, ಏಕೆಂದರೆ ಅದರಿಂದ 'ತೈಲ ಆಘಾತ' ಸಂಭವಿಸಬಹುದು ಎಂದು ಸ್ಪಷ್ಟಪಡಿಸಿದ್ದರು. ಎಲ್ಲ ಇರಾನೀ ತೈಲ ಆಮದುಗಳನ್ನು ಹಿಂತೆಗೆದುಕೊಂಡರೆ ಅದು ತೈಲ ಬೆಲೆಗಳಲ್ಲಿ ಅಗಾಧ ಏರಿಕೆಗೆ ಕಾರಣವಾಗಬಹದು, ಅದು ಜಾಗತಿಕ ಆರ್ಥಿಕಕ್ಕೆ ಒಂದು ಆಘಾತವಾಗಬಲ್ಲದು.

ಹೀಗೆ ಭಾರತಕ್ಕೆ, ಇರಾನಿನಿಂದ ತನ್ನ ತೈಲ ಆಮದುಗಳನ್ನು ಕ್ರಮೇಣ ನಿಲ್ಲಿಸಿ ಬಿಡಲು ಸಮಯ ಕೊಡಲಾಗಿದೆ. ಇದಕ್ಕೆ ಭಾರತ ಭಾರೀ ಬೆಲೆ ತೆರಬೇಕಾಗುತ್ತದೆ. ಪ್ರಸಕ್ತ ಹಣಕಾಸು ವರ್ಷ 2018-19ರಲ್ಲಿ ತೈಲ ಆಮದು ಮೊತ್ತ 125 ಬಿಲಿಯ(12500 ಕೋಟಿ) ಡಾಲರಿಗೆ, ಅಂದರೆ 42% ದಷ್ಟು ಏರುವ ನಿರೀಕ್ಷೆ ಇದೆ. ಇದು ಜಾಗತಿಕ ತೈಲ ಬೆಲೆಯೇರಿಕೆಗಳಿಂದಾಗಿ ಮತ್ತು ರೂಪಾಯಿ ಬೆಲೆ ಇಳಿಕೆಯಿಂದಾಗಿ ಆಗುತ್ತಿದೆ. ಇರಾನಿನ ಅಗ್ಗದ ತೈಲ ಆಮದುಗಳಲ್ಲಿ ಪ್ರಮುಖ ಕಡಿತಗಳಿಂದಾಗಿ ಒಟ್ಟಾರೆ ತೈಲ ಆಮದು ವೆಚ್ಚ ಮತ್ತಷ್ಟು ಹೆಚ್ಚುವುದು ಖಂಡಿತ. ಇದು ಆರ್ಥಿಕ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ.

ಈ ರೀತಿಯಾಗಿ ಭಾರತದ ಹಿತಗಳಿಗೆ ಬಾಧಕವಾಗಿರುವ, ಅಮೆರಿಕನ್ ಒತ್ತಡಕ್ಕೆ ಮಣಿದಿರುವುದನ್ನು ಈಗ ಒಂದು ಸಾಧನೆಯೆಂಬಂತೆ ಬಿಂಬಿಸಲಾಗುತ್ತಿದೆ. ನವಂಬರ್ 3ರಂದು ಪೆಟ್ರೋಲಿಯಂ ಮತ್ತು ಅನಿಲ ಮಂತ್ರಿ ಧರ್ಮೇಂದ್ರ ಪ್ರಧಾನ್ "ಬಳಕೆದಾರ ದೇಶಗಳ ಹಿತಗಳನ್ನು ನೀವು ಉಪೇಕ್ಷಿಸಲು ಸಾಧ್ಯವಿಲ್ಲ ಎಂಬುದು ಪ್ರಧಾನ ಮಂತ್ರಿಗಳ ಬಲಯುತವಾದ ಪ್ರಚಾರವಾಗಿತ್ತು. ಭೌಗೋಳಿಕ-ರಾಜಕೀಯ ಸನ್ನಿವೇಶವನ್ನು ಅರ್ಥ ಮಾಡಿಕೊಂಡು, ಭಾರತ ತನಗೆ ಬೇಕಾದುದನ್ನು ಪಡೆಯಲು ಸಾಧ್ಯವಾಗಿದೆ. ಅಮೆರಿಕವು ಭಾರತವೂ ಸೇರಿದಂತೆ ಕೆಲವು ದೇಶಗಳಿಗೆ ವಿನಾಯ್ತಿ ನೀಡಿದೆ" ಎಂದು ಪತ್ರಕರ್ತರಿಗೆ ಹೇಳಿದರು. ಇದು ತಿಪ್ಪೆ ಸಾರಿಸುವ ಕೆಲಸವಷ್ಟೇ.

ಅಮೆರಿಕಾ ಸಂಯುಕ್ತ ಸಂಸ್ಥಾನ ಇರಾನಿನ ಮೇಲೆ ತನ್ನ ನಿರ್ಬಂಧಗಳನ್ನು ಹೇರುವ ಆಶಯವನ್ನು ಪ್ರಕಟಿಸಿದಾಗ ವಿದೇಶಾಂಗ ವ್ಯವಹಾರಗಳ ಮಂತ್ರಿ ಸುಷ್ಮಾ ಸ್ವರಾಜ್, ಭಾರತವು ವಿಶ್ವ ಸಂಸ್ಥೆಯ ನಿರ್ಬಂಧಗಳನ್ನಷ್ಟೇ ಪಾಲಿಸುತ್ತದೆ, ಯಾವುದೋ ಒಂದು ದೇಶದ್ದಲ್ಲ ಎಂದು ಘೋಷಿಸಿದ್ದರು. ಅಂದಿನಿಂದ, ಅಮೆರಿಕಾದಿಂದ ವಿನಾಯ್ತಿಗೆ ಅಂಗಲಾಚುವುದು, ಅದಕ್ಕಾಗಿ ಇರಾನಿನಿಂದ ತೈಲ ಆಮದುಗಳನ್ನು ನಿರ್ಬಂಧಗಳು ಜಾರಿಯಾಗುವ ವೇಳೆಗೆ ಮೂರನೇ ಒಂದರಷ್ಟು ಇಳಿಸಿರುವುದು ಅಮರಿಕನ್ ಒತ್ತಡಕ್ಕೆ ಕ್ರಮೇಣ ತಲೆಬಾಗಿರುವುದನ್ನು ಹೊರಗೆಡಹುತ್ತದೆ.

ಈ ತಾತ್ಕಾಲಿಕ ವಿನಾಯ್ತಿಗೂ ಭಾರೀ ಬೆಲೆ ತೆರಬೇಕಾಗಿ ಬಂದಿದೆ. ಏಕೆಂದರೆ, ಪೊಂಪಿಯೊ ಹೇಳಿಕೆ "ನಾವು ಈ ವ್ಯಾಪ್ತಿಗಳಿಗೆ ಅವು ಇರಾನಿನಿಂದ ತೈಲ ಆಮದುಗಳನ್ನು ತಾತ್ಕಾಲಿಕವಾಗಿ ಮುಂದುವರೆಸಲು ಅವಕಾಶ ನೀಡಲು ಒಪ್ಪುವ ಮೊದಲು, ಅವರಿಂದ ಇನ್ನಷ್ಟು ಹೆಚ್ಚು ಗಂಭೀರವಾದ ರಿಯಾಯ್ತಿಗಳನ್ನು ಆಗ್ರಹಿಸಿದ್ದೇವೆ" ಎಂದಿತ್ತು. ಭಾರತೀಯ ಸರಕಾರ ಒಪ್ಪಿರುವ ಗಂಭೀರ ರಿಯಾಯ್ತಿಗಳೇನು ಎಂದು ನಮಗೆ ಇನ್ನಷ್ಟೇ ತಿಳಿಯಬೇಕಾಗಿದೆ.

ಇರಾನಿನ ಚಬಹರ್ ಬಂದರಿನಲ್ಲಿ ಭಾರತದ ಹೂಡಿಕೆಗೆ ಕೊಟ್ಟಿರುವ ಇನ್ನೊಂದು ವಿನಾಯ್ತಿ ಕೂಡ ಅಫಘಾನಿಸ್ತಾನದಲ್ಲಿ ಭಾರತ ಹೆಚ್ಚೆಚ್ಚು ತೊಡಗಿಕೊಳ್ಳುವಂತೆ ಮಾಡುವ ಅಮೆರಿಕನ್ ಹಿತಗಳಿಂದ ಪ್ರೇರಿತವಾಗಿದೆ. ಏಕೆಂದರೆ ಚಬಹರ್ ಬಂದರಿನಿಂದಾಗಿ ಭಾರತ ಪಾಕಿಸ್ತಾನವನ್ನು ಹಾಯ್ದು ಅಫಘಾನಿಸ್ತಾನಕ್ಕೆ ಹೋಗಲು ಅವಕಾಶವಾಗುತ್ತದೆ.

ಇರಾನಿನ ಮೇಲೆ ಅಮೆರಿಕನ್ ನಿರ್ಬಂಧಗಳನ್ನು ಹಲ್ಲುಗಿಂಜಿಕೊಂಡು ಸ್ವೀಕರಿಸುವ ಅಗತ್ಯವೇನೂ ಭಾರತಕ್ಕೆ ಇರಲಿಲ್ಲ. ಮೊದಲನೆಯದಾಗಿ, ಈ ನಿರ್ಬಂಧ ಈ ಹಿಂದಿನ ವಿಶ್ವಸಂಸ್ಥೆಯ ನಿರ್ಬಂಧಗಳಂತಲ್ಲದೆ, ಅಮೆರಿಕ ಏಕಪಕ್ಷೀಯವಾಗಿ ಹೇರಿರುವಂತದ್ದು. ಅಮೆರಿಕಾದ ಮಿತ್ರರುಗಳೂ, ಮತ್ತು ಜೆಸಿಪಿಒ ಒಪ್ಪಂದಕ್ಕೆ ಅದರ ಜೊತೆಗೆ ಸಹಿ ಹಾಕಿರುವ ದೇಶಗಳೂ ಆಗಿರುವ ಬ್ರಿಟನ್, ಜರ್ಮನಿ ಮತ್ತು ಫ್ರಾನ್ಸ್ ಈ ನಿರ್ಬಂಧಗಳನ್ನು ಸ್ವೀಕರಿಸಲು ನಿರಾಕರಿಸಿವೆ. ಸಹಿ ಹಾಕಿದ ಇನ್ನೆರಡು ದೇಶಗಳಾದ ರಷ್ಯಾ ಮತ್ತು ಚೀನಾ ನಿರ್ಬಂಧಗಳಿಗೆ ದೃಢವಾದ ವಿರೋಧವನ್ನು ಹೊಂದಿವೆ.

ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ಯುರೋಪಿಯನ್ ಒಕ್ಕೂಟದ ವಿದೇಶಾಂಗ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ನವಂಬರ್ 2 ರಂದು ನೀಡಿರುವ ಜಂಟಿ ಹೇಳಿಕೆ "ಇರಾನಿನೊಂದಿಗೆ ಪರಿಣಾಮಕಾರಿ ಹಣಕಾಸು ವಾಹಿನಿಗಳನ್ನು ಕಾಯ್ದುಕೊಳ್ಳಲು ಮತ್ತು ಇರಾನಿನ ತೈಲ ಮತ್ತು ಅನಿಲ ರಫ್ತುಗಳ ಮುಂದುವರಿಕೆಗೆ" ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದೆ. ತಾವು ಇರಾನಿನೊಂದಿಗೆ ಜೆಸಿಪಿಒ ಒಪ್ಪಂದದಲ್ಲಿ ಭಾಗವಹಿಸಿರುವ ರಷ್ಯಾ ಮತ್ತು ಚೀನಾದೊಂದಿಗೆ ಹಾಗೂ ಈ ಒಪ್ಪಂದವನ್ನು ಬೆಂಬಲಿಸುವ ಆಸಕ್ತಿ ಇರುವ ಮೂರನೇ ದೇಶಗಳೊಂದಿಗೂ ಕೆಲಸ ಮಾಡುವುದಾಗಿ ಅವರು ಹೇಳಿದ್ದಾರೆ.

ಭಾರತದಂತಲ್ಲದೆ, ಚೀನಾ ಹೊಸ ಅಮೆರಿಕನ್ ನಿರ್ಬಂಧಗಳನ್ನು ಖಂಡಿಸಿದೆ. ಚೀನೀ ಸರಕಾರದ ಅಧಿಕೃತ ವಕ್ತಾರರು ಚೀನಾ ಈ ಏಕಪಕ್ಷೀಯ ನಿರ್ಬಂಧಗಳನ್ನು ವಿರೋಧಿಸುತ್ತದೆ ಎಂದು ಘೋಷಿಸಿದ್ದಾರೆ ಹಾಗೂ ಇರಾನಿನೊಂದಿಗೆ ಚೀನಾದ "ಸಾಮಾನ್ಯ ಸಹಕಾರ"ವನ್ನು ಪುನರುಚ್ಚರಿಸಿದ್ದಾರೆ.

ಹೀಗೆ ಭಾರತ ಮನಸ್ಸು ಮಾಡಿದ್ದರೆ, ಇರಾನಿನಿಂದ ತನ್ನ ತೈಲ ಆಮದುಗಳು ಮತ್ತು ಇತರ ವ್ಯವಹಾರದ ಹೂಡಿಕೆಗಳನ್ನು ಮುಂದುವರಿಸಿಕೊಂಡು ಹೋಗುವಂತಾಗಲು ಈ ಎಲ್ಲ ಪ್ರಮುಖ ದೇಶಗಳೊಡನೆ ಸಹಕರಿಸಬಹುದಾಗಿತ್ತು. ಇದು ಭಾರತದ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವ ದಾರಿಯಾಗಬಹುದಿತ್ತು.

ಆದರೆ ಒಂದು ಅಡಿಯಾಳು ಮಿತ್ರನಾಗುವ ಮೋದಿ ಸರಕಾರದ ಆತುರದಿಂದಾಗಿ ಭಾರತ ಅಮೆರಿಕಾ ಸಂಯುಕ್ತ ಸಂಸ್ಥಾನದೊಂದಿಗೆ ಒಂದು ಸಾಮರಿಕ ಆಲಿಂಗನದಲ್ಲಿ ಬಂಧಿಯಾಗಿದೆ. ಈ ಆಯಕಟ್ಟಿನ ಮೈತ್ರಿಯಿಂದ ತಪ್ಪಿಸಿಕೊಂಡರೆ ಮಾತ್ರವೇ, ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ನಿರ್ಬಂಧಗಳನ್ನು ಉಲ್ಲಂಘಿಸಲು ಮತ್ತು ತನ್ನ ಆಯಕಟ್ಟಿನ ಸ್ವಾಯತ್ತತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಇದು ಮೋದಿ ಆಳ್ವಿಕೆಗೆ ಯೋಚಿಸಲೂ ಸಾಧ್ಯವಿಲ್ಲದ ಒಂದು ಸಂಗತಿ.



“ಎಲ್ಲಿದೆ ನನ್ನ ಉದ್ಯೋಗ?”

ಸಂಸತ್ತಿನ ಮುಂದೆ ಯುವಜನರ ಪ್ರಶ್ನೆ

23 ರಾಜ್ಯಗಳಿಂದ ದಿಲ್ಲಿಗೆ ಬಂದ ಎಲ್ಲ ಯುವಜನರದ್ದೂ ಇದೊಂದೇ ಪ್ರಶ್ನೆ. ಬಹುಪಾಲು ಯುವಜನರದ್ದೂ ಒಂದೇ ಕತೆ – ಭವಿಷ್ಯದ ಬಗ್ಗೆ ಆತಂಕ, ಮೋದಿ ಸರಕಾರ ಆಶ್ವಾಸನೆ ಈಡೇರಿಸದಿರುವ ಬಗ್ಗೆ ಆಕ್ರೋಶ.

ಇತ್ತೀಚಿನ ದಿನಗಳಲ್ಲಿ ರೈತರ, ಕಾರ್ಮಿಕರ ಮತ್ತು ಮಹಿಳೆಯರ ಬೃಹತ್ ರ್‍ಯಾಲಿಗಳನ್ನು ಕಂಡ ದೇಶದ ರಾಜಧಾನಿ ನವಂಬರ್ 3 ರಂದು ಇನ್ನೊಂದು ಬೃಹತ್ ರ್‍ಯಾಲಿಯನ್ನು ಕಂಡಿತು. “ಎಲ್ಲಿದೆ ನನ್ನ ಉದ್ಯೋಗ, ಮೋದಿಯವರೇ” ಎಂದು ಕೇಳುತ್ತಿದ್ದ ದೇಶದ ಯುವಜನರ ರ್‍ಯಾಲಿ.

ಸಂಸತ್ತಿನತ್ತ ನಡೆದ ಈ ರ್‍ಯಾಲಿಯಲ್ಲಿ ದೇಶದ ಮೂಲೆ–ಮೂಲೆಗಳಿಮದ ಬಂದಿದ್ದ ಸುಮಾರು 10 ಸಾವಿರ ಯುವಜನರು ಪ್ರಧಾನ ಮಂತ್ರಿ ಮೋದಿಯವರು 2014 ರಲ್ಲಿ ನೀಡಿದ ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳ ಆಶ್ವಾಸನೆ ಹುಸಿಯಾಗಿರುವುದರ ಬಗ್ಗೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಡಿವೈಎಫ್‌ಐ ಇದನ್ನು ಸಂಘಟಿಸಿತ್ತು.

“ಮೋದಿ ಸರಕಾರಕ್ಕೆ ದೇಶದ ಯುವಜನರಿಗೆ ಉದ್ಯೋಗ ಒದಗಿಸಲು ಸಾಧ್ಯವಾಗದಿದ್ದರೆ ಅದಕ್ಕೆ ಧಿಕ್ಕಾರ ಇತ್ತು, ಧಿಕ್ಕಾರ ಇರುತ್ತದೆ” ಎಂದು ಪಂಜಾಬಿನ ಫರೋಝ್‌ಪುರದಿಂದ ಬಂದ ಯುವಕ ಅಜಯ್ ಸಹೋಟ ಹೇಳುತ್ತಾನೆ.

“ನಮ್ಮ ತಂದೆ–ತಾಯಿ ನಮ್ಮ ಶಿಕ್ಷಣಕ್ಕೆ ಹಣ ಹೊಂದಿಸುತ್ತಾರೆ, ನಮಗೆ ಕೆಲಸ ಸಿಕ್ಕಿ ಅದನ್ನು ತೀರಿಸಬಹುದು ಎಂಬ ನಿರೀಕ್ಷೆಯಿಂದ. ಆದರೆ ನನಗೂ ಉದ್ಯೋಗ ಸಿಕ್ಕಿಲ್ಲ, ನನ್ನ ತಂಗಿಗೂ ಕೆಲಸ ಸಿಕ್ಕಿಲ್ಲ. ನಮ್ಮ ಮುಂದೆ ಭವಿಷ್ಯ ಎಂಬುದಿಲ್ಲ. ನಾವು ಬಹಳಷ್ಟು ಮಂದಿ ಶಾಲಾ, ಕಾಲೇಜು ಶಿಕ್ಷಣ ಮುಗಿಸಿದ್ದೇವೆ. ಉದ್ಯೋಗಗಳನ್ನೆಲ್ಲ ಗುಡಿಸಿ ಅಳಿಸಿ ಹಾಕಿದ್ದಾರೆ. ಶಿಕ್ಷಿತ ಯುವಜನ ಕೇವಲ ಮಾಸಿಕ 3000–4000ರೂ.ಸಂಬಳಕ್ಕೆ ಕೆಲಸ ಮಾಡಬೇಕಾಗಿ ಬಂದಿದೆ.”

ದೇಶದ ಇತರೆಡೆಗಳಿಂದ ಬಂದು ಆತನೊಂದಿಗೆ ಮೆರವಣಿಗೆಯಲ್ಲಿ ಹೊರಟ ಇತರ ಹಲವು ಯುವಜನರದ್ದೂ ಅದೇ ಕತೆ– ಭವಿಷ್ಯದ ಬಗ್ಗೆ ಆತಂಕ, ಮೋದಿ ಸರಕಾರ ಆಶ್ವಾಸನೆ ಈಡೇರಿಸದಿರುವ ಬಗ್ಗೆ ಆಕ್ರೋಶ.

ತ್ರಿಪುರಾದ ಬಿ.ಕಾಂ ಪದವೀಧರ ಅಶುತೋಷ್‌ಗೆ ಕಳೆದ ನಾಲ್ಕು ವರ್ಷಗಳಿಂದ ಸರಿಯಾದ ಕೆಲಸ ಸಿಕ್ಕಿಲ್ಲ. ಬದುಕಿರಲು ಹತಾಶನಾಗಿ ಟ್ಯೂಶನ್ ಮಾಡುತ್ತಿದ್ದಾನೆ. “ಮೋದಿಯವರ ಆಶ್ವಾಸನೆ ಮುರಿದಿದೆ, ನಮ್ಮ ಕನಸುಗಳೂ ಮುರಿದಿವೆ” ಎನ್ನುತ್ತಾನೆ ಆತ ಹತಾಶೆಯಿಂದ.

23 ರಾಜ್ಯಗಳಿಂದ ದಿಲ್ಲಿಗೆ ಬಂದ ಎಲ್ಲ ಯುವಜನರದ್ದೂ ಒಂದೇ ಪ್ರಶ್ನೆ “ಎಲ್ಲಿದೆ ನನ್ನ ಉದ್ಯೋಗ?” ನಾಲ್ಕೂವರೆ ವರ್ಷಗಳಲ್ಲಿ ಈ ಸರಕಾರ ನಿರ್ಮಿಸಿದ್ದು 50 ಲಕ್ಷ ಉದ್ಯೋಗಗಳು ಮಾತ್ರ, ಎನ್ನುತ್ತಾರೆ ಡಿವೈಎಫ್‌ಐ ಅಧ್ಯಕ್ಷ ಪಿ ಎ ಮಹಮ್ಮದ್ ರಿಯಾಸ್. ಆಶ್ವಾಸನೆಯಂತ ಎ8–9 ಕೋಟಿ ಉದ್ಯೋಗಗಳು ನಿರ್ಮಾಣವಾಗಬೇಕಿತ್ತು.

ಜಿಎಸ್‌ಟಿ ಮತ್ತು ನೋಟುರದ್ಧತಿ ಕೆಲಸ ಮತ್ತು ಸಂಬಳ ಎರಡರ ಮೇಲೂ ನೇರ ಪ್ರಭಾವ ಬೀರಿದೆ ಎಂಬುದು ಈ ಯುವಜನರ ಅಭಿಪ್ರಾಯವಲ್ಲ, ಅನುಭವ.ಗೀ ಹಿಂದ ಎಉತ್ತರಪ್ರದೇಶದ ಕಾರ್ಮಿಕರು ಬೇರ ಎಹಲವು ರಾಜ್ಯಗಳಲ್ಲಿ ಉದ್ಯೋಗ ಪಡೆದಿದ್ದರು. ಆದರೆ ಈ ಗ ಅವರೆಲ್ಲರೂ ನಿರುದ್ಯೋಗಿಗಳು ಎಂಬುದನ್ನು ಆ ರಾಜ್ಯದ ಗೊಂಡ ಇಂದ ಬಂದ ಆಶಿಸ್ ಸಿಂಗ್‌ಗೆ ಕಂಡು ಬಂದದ್ದು.

ಯುವಜನರಿಗೆಂದು ಹತ್ತು ಹಲವು ಯೋಜನೆಗಳ ಪ್ರಚಾರ. ಸ್ಕಿಲ್ ಇಂಡಿಯ, ಮೇಕ್ ಇನ್ ಇಂಡಿಯ ಇತ್ಯಾದಿ. ಅವೆಲ್ಲ ಈಗ ಬೋರಲು ಬಿದ್ದಿವೆ.

ಎಲ್ಲಕ್ಕಿಂತ ಹೆಚ್ಚು ಏಟು ಬಿದ್ದಿರುವುದು ಮಹೀಲೆಯರ ಮೇಲೆ. ಬೇಟಿ ಬಚಾವೊ ,ಬೇಟಿ ಪಢಾವೊ ಈ ಸರಕಾರದ ಅತ್ಯಂತ ವಿಫಲ ಸ್ಕೀಮ್ ಎನ್ನುತ್ತಾರೆ ಡಿವೈಎಫ್‌ಐ ಜಂಟಿ ಕಾರ್ಯದರ್ಶಿ ಪ್ರೀತಿ ಶೇಖರ್. “ಉದ್ಯೋಗಹೀನತೆ ವಿಶೇಷವಾಗಿ ಮಹಿಳೆಯರನ್ನು ತಟ್ಟಿದೆ. ಮೊದಲೇ ಆದ್ಯತೆಯಿರಲಿಲ್ಲ, ಈಗ ಮದುವೆ ಮಾಡಿ ಬಿಡುತ್ತಾರೆ, ಸ್ವಂತ ಗುರುತೊಂದು ಇಲ್ಲವಾಗುತ್ತಿದೆ ಎನ್ನುತ್ತಾಳೆ ಪಂಜಾಬಿನಿಂದ ಬಂದ ಯುವತಿ.

ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆ ಯನ್ನು ಉದ್ದೇಶಿಸಿ ಡಿವೈಎಫ್‌ಐ ಅಧ್ಯಕ್ಷ ಮಹಮ್ಮದ್ ರಿಯಾಸ್, ಪ್ರಧಾನ ಕಾರ್ಯದರ್ಶಿ ಅವೊಯ್ ಮೂಕರ್ಜಿ, ಉಪಾಧ್ಯಕ್ಷರುಗಳಾದ ಎಂ. ಸ್ವರಾಜ್ ಮತ್ತು ಅಮಲ್ ಚಕ್ರವರ್ತಿ, ಜಂಟಿ ಕಾರ್ಯದರ್ಶಿಗಳಾದ ಪ್ರೀತಿ ಶೇಖರ್ ಮತ್ತು ಸತ್ಯದೀಪ್ ಮಿತ್ರ ಮಾತಾಡಿದರು.

ಅಲ್ಲದೆ, ಡಿವೈಎಫ್‌ಐನ ಸ್ಥಾಪಕ ಪ್ರಧಾನ ಕಾರ್ಯದರ್ಶಿ ಹಾಗೂ ಈಗ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಗದ ಮುಖಂಡ ಸುನೀತ್ ಚೋಪ್ರ, ಜನವಾದಿ ಮಹಿಳಾ ಸಂಘದ ಅಖಿಲ ಭಾರತ ಅಧ್ಯಕ್ಷೆ ಮರಿಯಮ್ ಧವಳೆ, ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿ ಮಾಯುಕ್ ಬಿಸ್ವಾಸ್ ಮಾತಾಡಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಮಾತಾಡುತ್ತ ಯುವಜನರ ಆಗ್ರಹಗಳಿಗೆ ಕಿವಿಗೊಡದ ಸರಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯುವ ಹಕ್ಕು ಇಲ್ಲ, ಭಾರತದ ಯುವಜನ ಈ ಸರಕಾರವನ್ನು ಉರುಳಿಸುವಷ್ಟು ಬಲಶಾಲಿಯಾಗಿದ್ದಾರೆ ಎಂದರು.

ಸಂಸತ್ ಸದಸ್ಯ ಮಹಮ್ಮದ್ ಸಲೀಂ ಸರಕಾರ ತನ್ನ ವಿಫಲತೆಯನ್ನು ಮುಚ್ಚಿ ಹಾಕಲು ಅಧಿಕೃತ ಮಾಹಿತಿಯಲ್ಲೇ ಕೈಯಾಡಿಸುತ್ತಿದ್ದಾರೆ ಎಂದರು.

ಉದ್ಯೋಗದ ಹಕ್ಕನ್ನು ಆಗ್ರಹಿಸಿರುವ ಯುವಜನ ರ್‍ಯಾಲಿ 1980ರಲ್ಲಿ ಇದೇ ದಿನ, ಅಂದರೆ ನವಂಬರ್ 3, 1980 ರಂದು ಸ್ಥಾಪಿಗೊಂಡಿರುವ ಡಿವೈಎಫ್‌ಐನ ಮುನ್ನಡೆಯಲ್ಲಿ ಒಂದು ಮೈಲಿಗಲ್ಲು.

ನಿರುದ್ಯೋಗ ಕುರಿತಾದ “ಭಾರತದ ಭವಿಷ್ಯತ್ತಿಗೆ ಸಂಚಕಾರ” ಎಂಬರ್ಥದ ಒಂದು ಕಿರು ಪುಸ್ತಕವನ್ನು ಈ ಸಭೆಯಲ್ಲಿ ಬಿಡುಗಡೆ ಮಾಡಲಾಯಿತು. ಇದು ಡಿವೈಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ತೂರಿಸಿರುವ ದಸ್ತಾವೇಜು.

ಒಂದು ರಾಷ್ಟ್ರೀಯ ವಿದ್ಯಾರ್ಥಿ–ಯುವಜನ ಸಮಾವೇಶ, ಅದನ್ನನುಸರಿಸಿ ಸಪ್ಟಂಬರ್‌ನಿಂದ ದೇಶಾದ್ಯಂತ ಪ್ರಚಾರಾಂದೋಲನದ ನಂತರ ನಡೆದಿರುವ ಅತಿ ದೊಡ್ಡ ಯುವಜನ ರ್‍ಯಾಲಿ– ಇದನ್ನು ಮುಂದೊಯ್ಯಲು ಕಟಿಬದ್ಧರಾಗಿರುವುದಾಗಿ ಡಿವೈಎಫ್‌ಐ ಮುಖಂಡರು ಹೇಳಿದ್ದಾರೆ.





“ನವ–ಉದಾರವಾದಿ ಅಜೆಂಡಾವನ್ನು ನೆಲಕ್ಕಪ್ಪಳಿಸಲು ಸಿದ್ಧರಾಗಿ”



ಕಾರ್ಮಿಕ ವರ್ಗಕ್ಕೆ ಸಿಐಟಿಯು ಕಾರ್ಯಕಾರಿ ಸಮಿತಿ ಕರೆ

ಆಳುವ ವರ್ಗಗಳ ನವ–ಉದಾರವಾದಿ ಅಜೆಂಡಾವನ್ನು ಬಲಿಷ್ಟ ಐಕ್ಯ ಕಾರ್ಯಾಚರಣೆಗಳ ಮೂಲಕ ನೆಲಕ್ಕಪ್ಪಳಿಸಲು ಸಿದ್ಧರಾಗಿ ಎಂದು ಸಿಐಟಿಯು ಕಾರ್ಯಕಾರಿ ಸಮಿತಿ ದೇಶದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ನವಂಬರ್ 1 ರಿಂದ 3 ರವರೆಗೆ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ನಡೆದಿರುವ ಸಿಐಟಿಯುನ ಕಾರ್ಯಕಾರಿ ಸಮಿತಿಯ ಸಭೆ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಒಕ್ಕೂಟಗಳ ರಾಷ್ಟ್ರೀಯ ಸಮಾವೇಶದ ಕರೆಯಂತೆ ಜನವರಿ 8–9ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಯಶಸ್ಸಿಗೆ ದೇಶಾದ್ಯಂತ ವ್ಯಾಪಕ ಪ್ರಚಾರಾಂದೋಲನವನ್ನು ಹರಿಯ ಬಿಡಲು, ಈ ಸಾರ್ವತ್ರಿಕ ಮುಷ್ಕರಕ್ಕೆ ಶ್ರಮಜೀವಿಗಳ ಎಲ್ಲ ವಿಭಾಗಗಳಿಂದ ಮತ್ತು ಸಮಾಜದಲ್ಲಿನ ಪ್ರಗತಿಶೀಲ ವಿಭಾಗಗಳಿಂದ ಸೌಹಾರ್ದ ಮತ್ತು ಬೆಂಬಲ ಪಡೆಯಲು ನಿರ್ಧರಿಸಿದೆ.

ನವಂಬರ್ 29–30ರ ರೈತರ ದಿಲ್ಲಿ ‘ಲಾಂಗ್‌ಮಾರ್ಚ್’ಗೆ ಸೌಹಾರ್ದ ಮತ್ತು ಸಕಲ ನೆರವನ್ನು ನೀಡಬೇಕು ಎಂದು ಎಲ್ಲ ಸಿಐಟಿಯು ರಾಜ್ಯ ಸಮಿತಿಗಳಿಗೆ ಕಾರ್ಯಕಾರಿ ಸಮಿತಿ ನಿರ್ದೇಶನವನ್ನು ನೀಡಿದೆ.

122 ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಿವಿಧ ಸಂಯೋಜಿತ ಕಾರ್ಮಿಕ ಒಕ್ಕೂಟಗಳ ಹಾಗೂ ಸೋದರ ಸಂಘಟನೆಗಳ ಆಹ್ವಾನಿತರು ಮೂರು ದಿನಗಳ ಕಲಾಪಗಳಲ್ಲಿ ಭಾಗವಹಿಸಿದರು.

ದೇಶದಲ್ಲಿ ಕಾರ್ಮಿಕ ವರ್ಗದ ಮೇಲೆ, ಅದು ಕಷ್ಟಪಟ್ಟು ಹೋರಾಟಗಳ ಮೂಲಕ ಗಳಿಸಿರುವ ಹಕ್ಕುಗಳ ಮೇಲೆ ದಾಳಿಗಳು ಹೆಚ್ಚುತ್ತಿರುವುದನ್ನು ಜಗತ್ತಿನಾದ್ಯಂತ ಶ್ರಮಜೀವಿಗಳ ಮೇಲೆ ತೀವ್ರಗೊಳ್ಳುತ್ತಿರುವ ನವ–ಉದಾರವಾದಿ ಪ್ರಹಾರಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ ಎಂದು ಸಿಐಟಿಯು ಅಧ್ಯಕ್ಷರಾದ ಡಾ.ಹೇಮಲತಾ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು.

ಬಂಡವಾಳಶಾಹಿಗೆ ಜನಗಳ ಮೇಲೆ ದಾಳಿ ಮಾಡದೆ ತನ್ನನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬಂತಹ ಸ್ಥಿತಿ ಬಂದಿದೆ. ಜಾಗತಿಕ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳುತ್ತಿದೆ ಎಂದು ತೋರಿಸಲು ಅದು ಪ್ರಯತ್ನ ಪಡುತ್ತಿದೆ. ಆದರೆ ಹಲವು ವರದಿಗಳು, ಇತ್ತೀಚಿನ ಐಎಂಎಫ್ ವಿಶ್ವ ಆರ್ಥಿಕ ಕಣ್ನೋಟ ವರದಿ ಕೂಡ ಹೆಚ್ಚಿನ ದೇಶಗಳಲ್ಲಿ ಆರ್ಥಿಕ ವ್ಯವಸ್ಥೆ 2008ರ ಬಂಡವಾಳಶಾಹಿ ಬಿಕ್ಕಟ್ಟಿನ ಮೊದಲಿದ್ದ ಸ್ಥಿತಿಯನ್ನು ತಲುಪಲೂ ಸಾಧ್ಯವಾಗುತ್ತಿಲ್ಲ ಎಂದು ತೋರಿಸುತ್ತಿವೆ.

ಬಂಡವಾಳಶಾಹಿ ವರ್ಗ ತಂತ್ರಜ್ಞಾನವನ್ನು, ಮುಖ್ಯವಾಗಿ ‘ಕೃತಕ ಬುದ್ಧಿಮತ್ತೆ’ಯನ್ನು (ಅಂದರೆ ರೊಬೊಗಳನ್ನು, ಅಥವ ಯಂತ್ರಮಾನವರನ್ನು) ಮಾನವ ಶ್ರಮದ ಜಾಗದಲ್ಲಿ ಹೆಚ್ಚೆಚ್ಚಾಗಿ ಬಳಸಲು ಪ್ರಯತ್ನಿಸುತ್ತಿದೆ. ಈಗ 12 ಪ್ರಮುಖ ಉದ್ದಿಮೆಗಳಲ್ಲಿ ಕೆಲಸದ 29% ಭಾಗವನ್ನು ಇಂತಹ ರೊಬೊಗಳಿಂದ ನಡೆಸಲಾಗುತ್ತಿದೆ. ಇದು 2022ರ ವೇಳೆಗೆ 42%ಕ್ಕೇರಬಹುದು ಎಂದು ವರ್ಲ್ಡ್ ಇಕನಾಮಿಕ್ ಫೋರಂನ “ಉದ್ಯೋಗದ ಭವಿಷ್ಯ’ ವರದಿ ಹೇಳಿದೆ. ಸೃಷ್ಟಿಯಾದ ಸಂಪತ್ತು ಸರಕಾರದಲ್ಲಿನ ಚಮಚಾಗಳ ಮೂಲಕ ಕಾರ್ಪೊರೇಟ್‌ಗಳ ಪಾಲಾಗುತ್ತಿದೆ.

ಜಾಗತೀಕರಣದ ಹರಿಕಾರನಾದ ಅಮೆರಿಕ ಸಂಯುಕ್ತ ಸಂಸ್ಥಾನವೇ ಈಗ ರಕ್ಷಣಾತ್ಮಕ ಕ್ರಮಗಳಿಗೆ ಇಳಿದಿದೆ. ಆದರೂ ತನ್ನ ಮಿಲಿಟರಿ, ರಾಜಕೀಯ ಹಸ್ತಕ್ಷೇಪಗಳ ಮೂಲಕ ತನ್ನ ಯಜಮಾನಿಕೆಯನ್ನು ಕಾಯ್ದುಕೊಂಡಿದೆ. ‘ ದೇಶಭಕ್ತಿ’ ‘ರಾಷ್ಟ್ರೀಯವಾದ’ದ ಬಗ್ಗೆ ಬಹಳಷ್ಟು ಮಾತಾಡುವ ಬಿಜೆಪಿ, ಈ ಕುರಿತು ಅದರ ನಿಲುವನ್ನು ಒಪ್ಪದವರನ್ನು ರಾಷ್ಟ್ರ–ವಿರೋಧಿಗಳು ಎಂದು ಹಣೆಪಟ್ಟಿ ಹಚ್ಚುತ್ತಲೇ, ಇನ್ನೊಂದೆಡೆಯಲ್ಲಿ ಎಲ್ಲ ರಂಗಗಳಲ್ಲೂ ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಶಾಮೀಲಾಗುತ್ತಿದೆ ಎಂದು ಸಿಐಟಿಯು ಅಧ್ಯಕ್ಷರು ಹೇಳಿದರು.

ಹೆಚ್ಚೆಚ್ಚು ದಾಳಿಗಳಿಗೆ ಒಳಗಾಗುತ್ತಿರುವ ಸನ್ನಿವೇಶದಲ್ಲಿ ಕಾರ್ಮಿಕರು ಜಗತ್ತಿನಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಹೋರಾಟಕ್ಕಿಳಿಯುತ್ತಿದ್ದಾರೆ. ಅವರಲ್ಲಿ ಅಸಂತೃಪ್ತಿ ಬೆಳೆಯುತ್ತಿದೆ. ಎಲ್ಲೆಲ್ಲಿ ಎಡಶಕ್ತಿಗಳು ನವ–ಉದಾರವಾದದ ವಿರುದ್ಧ ದೃಢ ನಿಲುವು ತಳೆದು ಇವರ ಹೋರಾಟಗಳನ್ನು ಸತತವಾಗಿ ಬೆಂಬಲಿಸುತ್ತಿದ್ದಾರೋ, ಅಲ್ಲೆಲ್ಲ ಎಡಶಕ್ತಿಗಳು ಬೆಳೆಯುತ್ತಿವೆ. ಆದರೆ ಇದರಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಹಿಂದೇಟು ಹಾಕಿದಲ್ಲೆಲ್ಲ ಬಲಪಂಥೀಯ ಪ್ರತಿಗಾಮಿ ಶಕ್ತಿಗಳು ಶಕ್ತಿ ಪಡೆದುಕೊಳ್ಳುತ್ತಿವೆ. ನಮ್ಮ ದೇಶದಲ್ಲೂ ಇದು ಕಾಣ ಬರುತ್ತಿದೆ.

ಒಂದೆಡೆ ನಿರುದ್ಯೋಗ, ಕೃಷಿ ಬಿಕ್ಕಟ್ಟು ಹೆಚ್ಚುತ್ತಿದ್ದರೆ ಬಿಜೆಪಿ ನೇತೃತ್ವದ ಸರಕಾರ ಸಂಪತ್ತನ್ನು ಕೆಲವು ದೊಡ್ಡ ಕಾರ್ಪೊರೇಟ್‌ಗಳಿಗೆ ಹಸ್ತಾಂತರವಾಗುವಂತೆ ಮಾಡುತ್ತಿದೆ. ಚುನಾವಣೆಗಳು ಸಮೀಪಿಸುತ್ತಿರುವಂತೆ ಇದರಿಂದ ಗಮನವನ್ನು ಬೇರೆಡೆಗೆ ಸೆಳೆಯಲು ವಿಚ್ಛಿದ್ರಕಾರಿ ಪ್ರಶ್ನೆಗಳನ್ನು ಎತ್ತಿ ಜನಗಳ ಆಕ್ರೋಶವನ್ನು ತಪ್ಪು ದಿಕ್ಕುಗಳಿತ್ತ ಹರಿಯುವಂತೆ ಪ್ರಯತ್ನಿಸುತ್ತದೆ. ಕಾರ್ಮಿಕ ವರ್ಗ ಈ ಕುತಂತ್ರಗಳ ಬಗ್ಗೆ ಅರಿಯುವಂತೆ, ಸಿಐಟಿಯು ಮಾಡಬೇಕಾಗಿದೆ. ಇವುಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸಬೇಕಾಗಿದೆ, ಆರ್ಥಿಕ ಶೋಷಣೆಯ ವಿರುದ್ಧ ಮಾತ್ರವೇ ಅಲ್ಲ, ಸಾಮಾಜಿಕ ಪ್ರಶ್ನೆಗಳ ಮೇಲೂ ಸಮಸ್ತ ಕಾರ್ಮಿಕ ವರ್ಗವನ್ನು ಒಂದುಗೂಡಿಸಬೇಕಾಗಿದೆ ಎಂದು ಡಾ. ಹೇಮಲತಾ ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು.

ಪುಟ 10 ನೋಡಿ

ಕಾರ್ಯಕಾರಿ ಸಮಿತಿಯ ಸಭೆಯ ಆರಂಭದ ದಿನ ನವಂಬರ್ 1 ರಂದು ಒಂದು ಬೃಹತ್ ಕಾರ್ಮಿಕರ ರ್‍ಯಾಲಿ ನಡೆಯಿತು. ಇದರಲ್ಲಿ ಸಾವಿರಾರು ಕೈಗಾರಿಕಾ ಕಾರ್ಮಿಕರು ಮತ್ತು ಇತರ ವಿಭಾಗಗಳ ಕಾರ್ಮಿಕರು ಭಾಗವಹಿಸಿದರು.





ಕಾರ್ಮಿಕ ವರ್ಗಕ್ಕೆ ಸಿಐಟಿಯು ಕಾರ್ಯಕಾರಿ ಸಮಿತಿ ಕರೆ

ಪುಟ 9 ರಿಂದ

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಕಾರ್ಯಕಾರಿ ಸಮಿತಿಗೆ ವರದಿಯನ್ನು ಮಂಡಿಸಿದರು. ಅದರಲ್ಲಿ ಸಿಐಟಿಯುನ ಕೋಝಿಕೊಡ್ ಜನರಲ್ ಕೌನ್ಸಿಲ್ ಸಭೆಯ ನಿರ್ಣಯಗಳ ಜಾರಿಯ ಪರಾಮರ್ಶೆಯ ಮೇಲೆ ಗಮನ ಕೇಂದ್ರೀಕರಿಸುತ್ತ ಎರಡು ದಿನಗಳ ಸಾರ್ವತ್ರಿಕ ಮುಷ್ಕರದ ಸಿದ್ಧತೆ ಸೇರಿದಂತೆ ಮುಂದಿನ ಕೆಲಸಗಳ ಬಗ್ಗೆ ಸೂಚನೆಗಳನ್ನು ಇಡಲಾಗಿತ್ತು.

ಬಿಜೆಪಿಯ ಧೋರಣೆಗಳು ಕಾರ್ಮಿಕ-ವಿರೋಧಿಯಷ್ಟೇ ಅಲ್ಲ, ದೇಶ-ವಿರೋಧಿ ಕೂಡ ಎಂದ ತಪನ್ ಸೇನ್ ಅವು ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ಸಂಪನ್ಮೂಲಗಳ ಲೂಟಿಗೆ ಅವಕಾಶ ಕಲ್ಪಿಸಲು ದೇಶದ ತಯಾರಿಕಾ ಸಾಮರ್ಥ್ಯವನ್ನೇ ಧ್ವಂಸ ಮಾಡುತ್ತಿದೆ, ಕಾರ್ಮಿಕರ ಶೋಷಣೆಯನ್ನು ತೀವ್ರಗೊಳಿಸುವ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಬಲವಾಗಿ ಟೀಕಿಸಿದರು.

ಈ ಸರಕಾರ ಸಾರ್ವಜನಿಕ ನಿಧಿಗಳನ್ನು ಕಾರ್ಪೊರೇಟ್‌ಗಳಿಗೆ ವರ್ಗಾಯಿಸಲು ಹೊಸ-ಹೊಸ ವಿಧಾನಗಳನ್ನು ಕಂಡುಕೊಂಡಿದೆ. ಉದಾ: ಇನ್‌ಸಾಲ್ವೆನ್ಸಿ, ಬ್ಯಾಂಕ್ರಪ್ಟ್ಸಿ ಕೋಡ್(ದಿವಾಳಿ ಸಂಹಿತೆ). ಈ ವಿಧಾನದ ಮೂಲಕ ಕಾರ್ಪೊರೇಟ್‌ಗಳ ಸುಸ್ತಿಸಾಲಗಳನ್ನು ಅವುಗಳಿಂದ ವಸೂಲಿ ಮಾಡುವ ಬದಲು ಸಾರ್ವಜನಿಕ ವಲಯದ ಬ್ಯಾಂಕುಗಳು ತಾವು ನಿಡಿದ ಸಾಲಗಳ ಒಂದು ಭಾಗವನ್ನು ಬಿಟ್ಟುಕೊಡುವಂತೆ (ಇದನ್ನು 'ಹೇರ್ ಕಟ್' ಅಂದರೆ 'ಚೌರ' ಎನ್ನಲಾಗುತ್ತದೆ) ಮಾಡಲಾಗುತ್ತಿದೆ.

ಹಿಂದಿನ ನಿರ್ಣಯಗಳ ಜಾರಿಯ ವಿಮರ್ಶೆ ಮಾಡುತ್ತ ಸಿಐಟಿಯುನ ವಿವಿಧ ಸಮಿತಿಗಳು ಬಹಳಷ್ಟು ಕೆಲಸ ಮಾಡಿವೆ, ಆದರೆ ಸಂಘಟನಾ ಕುರಿತ ಸಮಕಾಲಿಕ ಗೊಳಿಸಿದ ಸಂಘಟನಾ ದಸ್ತಾವೇಜನ್ನು ಆತ್ಮಗತ ಮಾಡಿಕೊಂಡಿದ್ದರೆ ಮತ್ತು ಇದನ್ನು ಸಪ್ಟಂಬರ್ 5ರ 'ಮಜ್ದೂರ್-ಕಿಸಾನ್ ರ‍್ಯಾಲಿ'ಯ ಪ್ರಚಾರಾಂದೋಲನದಲ್ಲಿ ಅನ್ವಯ ಮಾಡಿದ್ದರೆ ಇನ್ನಷ್ಟು ಉತ್ತಮ ಫಲಿತಾಂಶಗಳನ್ನು ಪಡೆಯಬಹುದಿತ್ತು ಎಂಬ ಸಂಗತಿಯತ್ತ ಗಮನ ಸೆಳೆದರು.

ಈ ಪ್ರಚಾರಾಂದೋಲನದಲ್ಲಿ ಗಮನಿಸಿದ ಕೊರತೆ, ದೌರ್ಬಲ್ಯಗಳನ್ನು ಎರಡು ದಿನಗಳ ಸಾರ್ವತ್ರಿಕ ಮುಷ್ಕರದ ಪ್ರಚಾರಾಂದೋಲನದ ವೇಳೆಯಲ್ಲಿ ಮೀರಿ ನಿಲ್ಲಬೇಕು, ಅತ್ಯಂತ ಕೆಳಗಿನ ಸಮಿತಿಗಳನ್ನು ಸಕ್ರಿಯಗೊಳಿಸಬೇಕು, ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯಕರ್ತರನ್ನು ಒಳಗೊಳ್ಳಬೇಕು ಎಂದು ತಪನ್ ಸೇನ್ ಹೇಳಿದರು. ಪ್ರತಿಯೊಬ್ಬ ಕಾರ್ಮಿಕರನ್ನು, ಅವರು ಯಾವುದೇ ಕಾರ್ಮಿಕ ಸಂಘಕ್ಕೆ ಸೇರಿರಲಿ, ತಲುಪಲು ನಿರ್ದಿಷ್ಟ ಗಮನ ಕೊಡಬೇಕು ಎಂದು ತಪನ್ ಸೇನ್ ಹೇಳಿದರು.

ನವ-ಉದಾರವಾದಿ ಧೋರಣೆಗಳನ್ನು ಸೋಲಿಸುವ, ಕಾರ್ಮಿಕರ ಐಕ್ಯತೆಯನ್ನು ಉಳಿಸಿಕೊಳ್ಳುವ ಮತ್ತು ಐಕ್ಯ ಹೋರಾಟಗಳನ್ನು ಬಲಪಡಿಸುವ ಆಗತ್ಯದ ಬಗ್ಗೆ ಕಾರ್ಮಿಕರಲ್ಲಿ ಬುಡಮಟ್ಟದಲ್ಲಿ ಅರಿವು ಮೂಡಿಸುವಂತೆ ಈ ಪ್ರಚಾರಾಂದೋಲನ ಮಾಡಬೇಕಾಗಿದೆ. ಇದನ್ನು ನವ-ಉದಾರವಾದದ ವಿರುದ್ಧ ಮತ್ತು ಅದನ್ನು ಅತ್ಯಂತ ಅಮಾನುಷವಾಗಿ ಜಾರಿಗೊಳಿಸುತ್ತಿರುವ ಪ್ರಸಕ್ತ ಆಳುವ ಪಕ್ಷದ ವಿರುದ್ಧ ಒಂದು ರಾಜಕೀಯ ಪ್ರಚಾರ ಎಂದು ಅರ್ಥಮಾಡಿಕೊಳ್ಳಬೇಕಾಗಿದೆ. ಬಿಜೆಪಿ-ಆರೆಸ್ಸೆಸ್‌ನ ವಿಚ್ಛಿದ್ರಕಾರಿ ಅಜೆಂಡಾವನ್ನು ಕಾರ್ಮಿಕರಿಗೆ ವಿವರಿಸಬೇಕಾಗಿದೆ.

ತಕ್ಷಣದ ಅಗತ್ಯವೆಂದರೆ ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ದೇಶ-ವಿರೋಧಿ ಬಿಜೆಪಿಯನ್ನು ಸೋಲಿಸುವುದು, ಮುಂದೆ ಬರುವ ಸರಕಾರಕ್ಕೆ, ಇಂತಹ ಧೋರಣೆಗಳನ್ನು ಕಾರ್ಮಿಕ ವರ್ಗ ಸಹಿಸುವುದಿಲ್ಲ ಎಂಬ ಒಂದು ಬಲವಾದ ಸಂದೇಶವನ್ನು ತಲುಪಿಸುವುದು ಎಂದು ತಪನ್ ಸೇನ್ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಹೇಳಿದರು.

ರೈತಾಪಿ ಜನಗಳೊಂದಿಗೆ ಸೌಹಾರ್ದದ ಪ್ರಯತ್ನಗಳ ಬಗ್ಗೆ ಮಾತಾಡುತ್ತ ದೇಶದ ಸಂಪತ್ತನ್ನು ಸೃಷ್ಟಿಸುತ್ತಿರುವ ಎರಡು ಮಹತ್ವದ ವರ್ಗಗಳ ನಡುವೆ ನಿಕಟ ಸಂಬಂಧ ಆಳುವ ವರ್ಗಗಳ ಧೋರಣೆಗಳಲ್ಲಿ ಬದಲಾವಣೆ ತರುವಂತೆ ಮಾಡಲು ಮತ್ತು ಶೋಷಣೆಯ ವಿರುದ್ಧ ಹೋರಾಟವನ್ನು ಮೇಲಣ ಹಂತಕ್ಕೆ ಒಯ್ಯಲು ಅತ್ಯಗತ್ಯ ಎಂದು ತಪನ್ ಸೇನ್ ಹೇಳಿದರು.

ದುಡಿಯುವ ಮಹಿಳೆಯರ ನಡುವೆ ಕೆಲಸಕ್ಕೆ ಒತ್ತು ನೀಡುತ್ತ ಅದನ್ನು ಬಲಪಡಿಸಬೇಕಾದ ಅಗತ್ಯವನ್ನು ಪ್ರಧಾನ ಕಾರ್ಯದರ್ಶಿಗಳ ವರದಿ ನಿರೂಪಿಸಿದೆ.

ಇದು ದುಡಿಯುವ ಮಹಿಳಾ ಕಾರ್ಯಕರ್ತರ ಕೆಲಸವಷ್ಟೇ ಅಲ್ಲ, ಇಡೀ ಸಿಐಟಿಯು ಸಮಿತಿಗಳ ಕೆಲಸ ಎಂಬ ಸಂಗತಿಯನ್ನು ತಪನ್ ಸೇನ್ ಒತ್ತಿ ಹೇಳಿದರು. ಸಮಾನ ಸಂಬಳ, ಹೆರಿಗೆ ಸೌಲಭ್ಯಗಳು, ಲೈಂಗಿಕ ಕಿರುಕುಳಗಳು ಇತ್ಯಾದಿ ಮಹಿಳಾ ಕಾರ್ಮಿಕರ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು, ಇವು ಎರಡು ದಿನಗಳ ಸಾರ್ವತ್ರಿಕ ಮುಷ್ಕರದ ಪ್ರಚಾರಾಂದೋಲನದ ಭಾಗವೂ ಆಗಬೇಕು ಎಂದು ತಪನ್ ಸೇನ್ ಹೇಳಿದರು.

ಸಿಐಟಿಯುವಿನ ಮುಂದಿನ ಕಾರ್ಯಭಾರಗಳು, ಪ್ರಚಾರಾಂದೋಲನ ಕಾರ್ಯಕ್ರಮಗಳನ್ನು ಪವರ್‌ಪಾಯಿಂಟ್ ಪ್ರಸ್ತುತಿಯ ಮೂಲಕ ಸಿಐಟಯು ಅಧ್ಯಕ್ಷರಾದ ಡಾ.ಹೇಮಲತಾ ಕಾರ್ಯಕಾರಿ ಸಮಿತಿಯ ಸದಸ್ಯರ ಮುಂದಿಟ್ಟರು. ಅತ್ಯಂತ ಕೆಳಮಟ್ಟದಲ್ಲಿರುವ ಯೂನಿಯನ್ ಸಮಿತಿಗಳನ್ನು ಸಕ್ರಿಯಗೊಳಸಿವ ಮತ್ತು ಎಲ್ಲ ಸಿಐಟಿಯು ಸದಸ್ಯರನ್ನು ಈ ಪ್ರಚಾರಾಂದೋಲನ ಗಳಲ್ಲಿ ಒಳಗೊಳ್ಳುವ ಮಹತ್ವವನ್ನು ಅವರು ಪುನರುಚ್ಚರಿಸಿದರು.

ನಂತರ ನಡೆದ ಚರ್ಚೆಯಲ್ಲಿ 60 ಸದಸ್ಯರು ಭಾಗವಹಿಸಿದರು. ತಪನ್ ಸೇನ್ ಈ ಚರ್ಚೆಯಲ್ಲಿ ಬಂದ ಸಂಗತಿಗಳ ಸಾರಾಂಶವನ್ನು ಪ್ರಸ್ತುತ ಪಡಿಸಿದ ನಂತರ ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ವರದಿಯನ್ನು ಮತ್ತು ಮುಂದಿನ ಕಾರ್ಯಭಾರಗಳ ಸೂಚನೆಯನ್ನು ಕಾರ್ಯಕಾರಿ ಸಮಿತಿ ಸರ್ವಸಮ್ಮತಿಯಿಂದ ಅಂಗೀಕರಿಸಿತು. ●

ಉದ್ಘಾಟನಾ ಅಧಿವೇಶನದಲ್ಲಿ ಹರಿಯಾಣಾದ ರಸ್ತೆ ಸಾರಿಗೆ ಕಾರ್ಮಿಕರು, ಚೆನ್ನೈನ ಯಮಾಹ ಕಾರ್ಖಾನೆಯ, ಬೆಂಗಳೂರಿನ ಟಿಆರ್‌ಎಂಎನ್ ಮತ್ತು ಗುಜರಾತಿನ ಸಾನಂದದಲ್ಲಿ ಫೋರ್ಡ್ ಕಾರ್ಖಾನೆಯ ಕಾರ್ಮಿಕರ ಹೋರಾಟಗಳಿಗೆ ಸೌಹಾರ್ದವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಇವರೆಲ್ಲರೂ ತಮ್ಮ ಮೂಲಭೂತ ಕಾರ್ಮಿಕ ಸಂಘಟನೆಯ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಹರಿಯಾಣದ ರಸ್ತೆ ಸಾರಿಗೆ ನೌಕರರು ತಮ್ಮ ಹೋರಾಟದ ಮೂಲಕ ಹೈಕೋರ್ಟ್ ಮಧ್ಯಪ್ರವೇಶಿಸಿ ರಾಜ್ಯ ಸರಕರ ಕಾರ್ಮಿಕರೊಂದಿಗೆ ಮಾತುಕತೆ ನಡೆಸುವಂತೆ ಮಾಡಿದ್ದಕ್ಕಾಗಿ ಅವರನ್ನು ಕಾರ್ಯಕಾರಿ ಸಮಿತಿ ಅಭಿನಂದಿಸಿತು.

ಇತ್ತೀಚೆಗೆ ಗಂಭೀರ ಪ್ರವಾಹವನ್ನು ಎದುರಿಸಬೇಕಾಗಿ ಬಂದಿರುವ ಕೇರಳದ ಜನತೆಯೊಂದಿಗೆ ಸಭೆ ಸೌಹಾರ್ದ ವ್ಯಕ್ತಪಡಿಸಿತು ಹಾಗೂ ತಕ್ಷಣ, ಪರಿಣಾಮಕಾರಿ ಪರಿಹಾರ ಕ್ರಮಗಳನ್ನು ಕೈಗೊಂಡ ಎಲ್‌ಡಿಎಫ್ ಸರಕಾರ ಮತ್ತು ಅದರಲ್ಲಿ ನೆರವಾದ ರಾಜ್ಯದ ಕಾರ್ಮಿಕ ವರ್ಗವನ್ನು, ನಿರ್ದಿಷ್ಟವಾಗಿ ಮೀನುಗಾರರು, ವಿದ್ಯುತ್‌ಕಾರ್ಮಿಕರು, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಸ್ಕೀಮ್ ಕಾರ್ಮಿಕರು, ರಾಜ್ಯ ಸರಕಾರೀ ನೌಕರರು ಮುಂತಾದ ಎಲ್ಲರನ್ನೂ ಕಾರ್ಯಕಾರಿ ಸಮಿತಿ ಅಭಿನಂದಿಸಿತು, ರಾಜ್ಯವನ್ನು ಸಾಮಾನ್ಯ ಸ್ಥಿತಿಗೆ ತರುವಲ್ಲಿ ಅವರು ಪ್ರದರ್ಶಿಸಿರುವ ಬದ್ಧತೆ ಮತ್ತು ಸಮರ್ಪಣಾ ಭಾವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿತು.

ಸಿಐಟಿಯು ಕಾರ್ಯಕಾರಿ ಸಮಿತಿ ಅಂಗೀಕರಿಸಿದ ಮುಂದಿನ ಕಾರ್ಯಭಾರಗಳು

* ಪ್ರಚಾರಾಂದೋಲನ ಮತ್ತು ಪ್ರಚಾರ ಸಾಮಗ್ರಿಗಳ ಯೋಜನೆ ತಯಾರಿಸಲು ಸಿಐಟಿಯು ರಾಜ್ಯಸಮಿತಿಗಳ ಎರಡು ದಿನಗಳ ಸಭೆ, ನವಂಬರ್ ತಿಂಗಳಲ್ಲಿ ಪೂರ್ಣಗೊಳ್ಳಬೇಕು.
* ಸಿಐಟಿಯು ಜಿಲ್ಲಾ ಸಮಿತಿಗಳ ಮತ್ತು ರಾಜ್ಯಮಟ್ಟದ ಯೂನಿಯನ್‌ಗಳ ರಾಜ್ಯಸಮಿತಿಗಳ ಸಭೆಗಳು, ಸಂಬಂಧಪಟ್ಟ ಪ್ರದೇಶ ಮತ್ತು ವಲಯದಲ್ಲಿ ಯೋಜನೆಯನ್ನು ಮೂರ್ತಗೊಳಿಸಲು- ನವಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಬೇಕು.
* ಯೂನಿಯನ್‌ಗಳ ಅತಿ ಕೇಳಮಟ್ಟದ ಸಮಿತಿಗಳ ಮತ್ತು ಸರ್ವ ಸದಸ್ಯರ ಸಭೆಗಳು-ಡಿಸೆಂಬರ್ ಮೊದಲ ವಾರದಲ್ಲಿ ಪೂರ್ಣಗೊಳ್ಳಬೇಕು.
* ನವಂಬರ್ 30- ರೈತರ 'ಲಾಂಗ್ ಮಾರ್ಚ್'ಗೆ ಸೌಹಾರ್ದ ಕಾರ್ಯಾಚರಣೆಗಳು
* ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯ ಅಡಿಯಲ್ಲಿನ ಸೌಲಭ್ಯಗಳನನ್ನು ನೀಡುತ್ತಿರುವ ಬಗ್ಗೆ ಅಸಂಘಟಿತ ಕಾರ್ಮಿಕರ ನಡುವೆ ಸರ್ವೆ, ಮೂರ್ತ ಅಂಕಿ-ಅಂಶಗಳ ಮೂಲಕ ಬಿಜೆಪಿ ಸರಕಾರದ ಸುಳ್ಳು ದಾವೆಗಳನ್ನು ಬಯಲಿಗೆಳೆಯಲು- ನವಂಬರ್‌ನಲ್ಲಿ.
* ದುಡಿಯುವ ಮಹಿಳೆಯರ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಒಂದು ವಾರದ ಪ್ರಚಾರಾಂದೋಲನ-ಡಿಸೆಂಬರ್ 13-19.

'ಸೈಪ್ರಸ್' ನಲ್ಲಿ ಕಟ್ಟಡ ಕಾರ್ಮಿಕ ಸಂಘಗಳ.......

ಪುಟ 6 ರಿಂದ

ವೇತನವಿದೆ, ಅಂದರೆ ಭಾರತ ರೂಪಾಯಿ ಲೆಕ್ಕದಲ್ಲಿ ಸುಮಾರು 420 ರೂಪಾಯಿ. ದಿನಕ್ಕೆ 8 ಗಂಟೆ ಕೆಲಸ ಅಂದರೆ ತಿಂಗಳಿಗೆ 1000 ಯುರೋ (ಸುಮಾರು 84 ಸಾವಿರ ರೂಪಾಯಿಗಳು) ಅದಕ್ಕಿಂತ ಅಧಿಕ ದುಡಿದರೆ ಓ.ಟಿ. ಇದಲ್ಲದೆ ವಾರದ ರಜೆ ಭವಿಷ್ಯ ನಿಧಿ ಇತ್ಯಾದಿ ಕಾನೂನು-ಬದ್ಧ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆದರೆ ಇದೇ ಪರಿಸ್ಥಿತಿ ಎಲ್ಲ ಕಡೆ ಇಲ್ಲ. ನಮ್ಮ ಗೆಸ್ಟ್ ಹೌಸ್ ಪಕ್ಕದಲ್ಲೇ ಇದ್ದ ಹೊಲಗಳಲ್ಲಿ ಅಳವಡಿಸಿದ್ದ ವಾಟರ್ ಮೋಟರ್ ಪಂಪ್ ಗಳನ್ನು ನಿರ್ವಹಣೆ ಮಾಡುತ್ತಿದ್ದ ಪಂಜಾಬ್ ನಿಂದ ಬಂದಿರುವ ವಲಸೆ ಕಾರ್ಮಿಕನೊಬ್ಬನಿಗೆ ಅಲ್ಲಿನ ಮಾಲೀಕರು ನೀಡುತ್ತಿರುವ ತಿಂಗಳ ವೇತನ 450 ಯುರೋಗಳು ಮಾತ್ರ (ಅಂದರೆ ಸುಮಾರು 38,000 ಸಾವಿರ ರೂಪಾಯಿಗಳು). ಇದಲ್ಲದೆ ಇಲ್ಲಿ ವಲಸೆ ಬರುವ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಮತ್ತಿತರೆ ದೇಶದ ಜನರಿಗೆ ಈ ರೀತಿಯ ತಾರತಮ್ಯ ಸಾಮಾನ್ಯವಾಗಿದೆ. ಆದರೆ ಕಾರ್ಮಿಕರು ಯುರೋಪಿಯನ್ ರು ಅಥವಾ ಬಿಳಿಯರಾದರೆ ಅವರಿಗೆ ಸ್ವಲ್ಪ ಹೆಚ್ಚಿನ ಪ್ರಾಧಾನ್ಯತೆ ಮತ್ತು ಹೆಚ್ಚಿನ ವೇತನ ಕೂಡ ಸಿಗುತ್ತದೆ.

ನಾವು ಲಾರನೇಕಾ ದಿಂದ ಬಹ್ರೇನ್ ಗೆ ವಾಪಸ್ಸಾಗುವಾಗ ಹತ್ತಿದ ವಿಮಾನದಲ್ಲಿ ನನ್ನ ಪಕ್ಕದ ಸೀಟ್ ನಲ್ಲಿ ಸಾಧಾರಣ ಸುಮಾರು 30 ವರ್ಷ ವಯಸ್ಸಿನ ಯವತಿಯೊಬ್ಬರು ಎರಡೂವರೆ ವರ್ಷ ಮಗುವಿನೊಂದಿಗೆ ಪ್ರಯಾಣಿಸಿದರು. ಫಿಲಿಪೈನ್ಸ್ ನಿಂದ ಕೆಲಸಕ್ಕಾಗಿ ಏಳುವರೆ ವರ್ಷಗಳ ಹಿಂದೆ ಬಂದಿದ್ದ ಆ ಯುವತಿ ಅಲ್ಲಿಯೇ ಒಬ್ಬ ವ್ಯಾಪರಸ್ಥನನ್ನು ಮದುವೆ ಮಾಡಿಕೊಂಡು, ಒಂದು ಗಂಡು ಮಗುವಿನ ತಾಯಿಯಾದ ಬಳಿಕಾ ಇದೀಗ ತಾಯ್ನಾಡಿಗೆ ಮೂರು ವಾರ ಕೆಲಸಕ್ಕೆ ರಜೆ ಪಡೆದು ಮಗುವಿನೊಂದಿಗೆ ಹೊರಟಿದ್ದರು. ಆಕೆಯನ್ನು ಸಹ ಪ್ರಯಾಣಿಕನಾಗಿ ನಾನು ಮಾತಿಗೆಳೆದೆ. ಆಕೆ ಲಾರನೇಕಾದಿಂದ ಸ್ವಲ್ಪ ದೂರದಲ್ಲಿರೋ ಒಂದು ಜಿಮ್ ಅಂಗಡಿಯಲ್ಲಿ ಸ್ವೀಪರ್ ಆಗಿ ಕೆಲಸಮಾಡುತ್ತಿದ್ದಾಳೆ. ಪಡೆಯುವ ವೇತನ ತಿಂಗಳಿಗೆ 700 ಯುರೋಗಳು (ಸುಮಾರು 60 ಸಾವಿರ ರುಪಾಯಿ). ತಾನು ಸ್ವಲ್ಪ ಬಿಳಿಯಾಗಿ ಯುರೋಪಿಯನ್ ರೀತಿ ಕಾಣೋದ್ರಿಂದ ಇತರೆಯವರಿಗಿಂತ ಸ್ವಲ್ಪಜಾಸ್ತಿ ವೇತನ ಪಡೆದುಕೊಳ್ಳುತ್ತೇನೆ ಎಂದು ಆಕೆ ಹೆಮ್ಮೆಯಿಂದ ಕೊಚ್ಚಿಕೊಂಡಳು(!!!) ಅನಿಸಿತು. ಆಗ ನನಗೆ ಈಗಲೂ ನಮ್ಮ ನೆಲದಲ್ಲಿ ಸಾವಿರಾರು ವರ್ಷಗಳಿಂದ "ಅಸ್ಪೃಶ್ಯತೆ ಆಚರಣೆ" ಯ ರೂಪವಾಗಿ ನಡೆಸುತ್ತಿರುವ ಕೆಲಸದ ಮತ್ತು ವೇತನದ ತಾರತಮ್ಯ ನೆನಪಾಯಿತು.

ಇನ್ನೂ ಬಹ್ರೇನ್ ತಲುಪಿದ ಮೇಲಂತೂ ಅಲ್ಲಿಂದ ಬೆಂಗಳೂರಿಗೆ ಹೊರಡುವ "Gulf Air" ವಿಮಾನದಲ್ಲಂತೂ ಹತ್ತಾರು ವಲಸೆ ಯುವಜನರು ಭೇಟಿಯಾಗಿ ಅದೊಂದು ರೀತಿಯಲ್ಲಿ ಕನ್ನಡಿಗರ ಸಂಗಮವೆಂಬಂತೆ. ತೋರಿತು. ಮುಸ್ಲಿಂ ದೇಶಗಳಾದ ರಿಯಾದ್, ಕತಾರ್, ಮೆಕ್ಕಾ-ಮದೀನಾ ಮತ್ತು ಬಹ್ರೇನ್ ನ ವಿವಿಧ ಪ್ರದೇಶ ಗಳಲ್ಲಿ ಕೆಲಸಕ್ಕಾಗಿ ಬಂದ ಸಾವಿರಾರು ಭಾರತೀಯರು ಇಲ್ಲಿ ದುಡಿಯುತ್ತಿದ್ದಾರೆ. ಇಲ್ಲಿನ ಹಲವು ದೇಶಗಳು ಕೂಡ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿವೆ. ಅದರ ನೇರ ಪರಿಣಾಮ ವಲಸೆ ಕಾರ್ಮಿಕರನ್ನು ಗಾಢವಾಗೇ ತಟ್ಟಿದೆ. ಹೊರ ದೇಶಗಳ ವಲಸೆ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಬಾರದು ಎನ್ನುವ ಆದೇಶವನ್ನು ಮಧ್ಯ ಪ್ರಾಚ್ಯದ ಹಲವು ದೇಶಗಳು ಕಟ್ಟುನಿಟ್ಟಾಗಿ ಜಾರಿಮಾಡುತ್ತಿವೆ. ಅದನ್ನು ಉಲ್ಲಂಘಿಸಿದವರಿಗೆ ಭಾರೀ ಪ್ರಮಾಣದ ದಂಡ ಹಾಕಲಾಗುತ್ತೆ. ಅದರ ನಡುವೆಯೂ 2000 ದಷ್ಟು ರಿಯಾದ್ ಗಳನ್ನು(ಸುಮಾರು 40000) ಪಡೆದು ರಿಯಾದ್ ನಲ್ಲೇ ಕೆಲಸ ಮಾಡುತ್ತಿದ್ದೇನೆ. ಅದರಲ್ಲೇ ಕಷ್ಟಪಟ್ಟು ದುಡಿದು ಇದುದ್ದರಲ್ಲೇ ಅಷ್ಟು ಇಷ್ಟು ಉಳಿಸಿ ಹೆಂಡತಿ ಮತ್ತು ಮೂರು ಮಕ್ಕಳಿಗೆ ಹಣ ಕಳಿಸುತ್ತಿದ್ದೇನೆ ಎಂದು ಹೇಳಿದವರು ಮಡಿಕೇರಿಯಿಂದ ದುಡಿಯಲು ಬಂದು ನನ್ನೊಂದಿಗೆ ವಿಮಾನ ನಿಲ್ದಾಣದಲ್ಲಿ ಬೆಂಗಳೂರಿಗೆ ಹಿಂದಿರುಗುತ್ತಿದ್ದ ಶಫೀ ಮಹ್ಮದ್. ಅವರ ಜೊತೆಯಲ್ಲೇ ಮತ್ತೊಬ್ಬ ಅದೇ ಮಡಿಕೇರಿ ನಾಪೊಕ್ಲುನ ಮುಸ್ಲಿಂ ಯುವಕ, 'ಅಯ್ಯೋ ಇಲ್ಲಿ ತುಂಬಾ ಕಷ್ಟವಾಗುತ್ತಿದೆ ಸಾರ್.. ..ಅದಕ್ಕಾಗಿ ಬೆಂಗಳೂರಿನಲ್ಲೇ ಒಂದು ಅಂಗಡಿ ಮಾಡಿಕೊಂಡಿರೋಣ" ಅಂತಾ ಹೊರಟಿದ್ದೇನೆ ಎಂದು ಧ್ವನಿ ಗೂಡಿಸಿದರು.... ●

ಲೋಕಸಭಾ ಕ್ಷೇತ್ರಗಳು							
ಕ್ಷೇತ್ರ	ಗೆದ್ದ ಅಭ್ಯರ್ಥಿ	ಪಡೆದ ಮತಗಳು	ಸೋತ ಅಭ್ಯರ್ಥಿ	ಪಡೆದ ಮತಗಳು	ಮತಗಳ ಅಂತರ	2014 ರ ಚುನಾವಣೆ ಗೆದ್ದವರು	ಅಂತರ
ಬಳ್ಳಾರಿ (ಮೀಸಲು)	ವಿ.ಎಸ್.ಉಗ್ರಪ್ಪ(ಕಾಂಗ್ರೆಸ್)	6,28,365	ಜೆ.ಶಾಂತಾ(ಬಿಜೆಪಿ)	3,85,204	2,43,161	ಬಿ.ಶ್ರೀರಾಮುಲು	85,144
ಮಂಡ್ಯ	ಎಲ್.ಆರ್.ಶಿವರಾಮೇಗೌಡ(ಜೆಡಿಎಸ್)	5,69,347	ಡಾ.ಸಿದ್ಧರಾಮಯ್ಯ(ಬಿಜೆಪಿ)	2,44,404	3,24,943	ಸಿ.ಎಸ್.ಪುಟ್ಟರಾಜು	5,518
ಶಿವಮೊಗ್ಗ	ಬಿ.ವೈ.ರಾಘವೇಂದ್ರ(ಬಿಜೆಪಿ)	5,43,306	ಎಸ್.ಮಧುಬಂಗಾರಪ್ಪ(ಜೆಡಿಎಸ್)	4,91,158	52,148	ಬಿ.ಎಸ್. ಯಡಿಯೂರಪ್ಪ	3,60,000

ವಿಧಾನಸಭಾ ಕ್ಷೇತ್ರಗಳು							
ಕ್ಷೇತ್ರ	ಗೆದ್ದ ಅಭ್ಯರ್ಥಿ	ಪಡೆದ ಮತಗಳು	ಸೋತ ಅಭ್ಯರ್ಥಿ	ಪಡೆದ ಮತಗಳು	ಮತಗಳ ಅಂತರ	2018ರ ಚುನಾವಣೆ ಗೆದ್ದವರು	ಅಂತರ
ರಾಮನಗರ	ಅನಿತಾ ಕುಮಾರಸ್ವಾಮಿ(ಜೆಡಿಎಸ್)	1,25,043	ಎಲ್.ಚಂದ್ರಶೇಖರ್(ಬಿಜೆಪಿ/ನಿವೃತ್ತಿ)	15,096	1,09,137	ಎಚ್.ಡಿ. ಕುಮಾರಸ್ವಾಮಿ	22,636
ಜಮಖಂಡಿ	ಆನಂದ ಸಿದ್ದು ನ್ಯಾಮಗೌಡ(ಕಾಂಗ್ರೆಸ್)	97,017	ಶ್ರೀಕಾಂತ ಕುಲಕರ್ಣಿ(ಬಿಜೆಪಿ)	57,537	39,480	ಸಿದ್ದು ನ್ಯಾಮಗೌಡ	2,795

ಉಪ ಚುನಾವಣೆಗಳು: ಜನ ಏನು ಹೇಳುತ್ತಿದ್ದಾರೆ?

– ವಸಂತರಾಜ ಎನ್.ಕೆ. –

ಐದು ಕ್ಷೇತ್ರಗಳಲ್ಲಿ ಉಪ ಚುನಾವಣೆಗಳ ಸ್ಥೂಲ ರಾಜಕೀಯ ವಿಶ್ಲೇಷಣೆ ಪುಟ 3 ರಲ್ಲಿದೆ. ಆದರೆ ಕೆಲವು ಕ್ಷೇತ್ರವಾರು ಮತ್ತು ಇತರ ವಿವರವಾದ ವಿಶ್ಲೇಷಣೆ ಇಲ್ಲಿದೆ.

ಐದು ಕ್ಷೇತ್ರಗಳಲ್ಲಿ ಗೆದ್ದ ಮತ್ತು ಸೋತ ಸಮೀಪದ ಸ್ಪರ್ಧಿ ಪಡೆದ ಮತಗಳು, ಮತಗಳ ಅಂತರ; ಹಾಗೂ 2014ರ (ಲೋಕಸಭಾ ಕ್ಷೇತ್ರಗಳಲ್ಲಿ) ಮತ್ತು 2018ರ (ವಿಧಾನಸಭಾ ಕ್ಷೇತ್ರಗಳಲ್ಲಿ) ಗೆದ್ದವರು, ಮತಗಳ ಅಂತರಗಳ ವಿವರಗಳು ಕೋಷ್ಟಕ1 ರಲ್ಲಿದೆ.

ಈ ಕೋಷ್ಟಕದಿಂದ ಮತ್ತು ಇತರ ಮೂಲಗಳಿಂದ ಕೆಳಗಿನ ಅಂಶಗಳನ್ನು ಗಮನಿಸಬಹುದು:

* ಶಿವಮೊಗ್ಗದಲ್ಲಿ ಬಿಜೆಪಿಯ ಗೆಲುವಿನ ಅಂತರ 3.60 ಲಕ್ಷದಿಂದ 52 ಸಾವಿರಕ್ಕೆ ಕುಸಿದಿದೆ.
* ಶಿವಮೊಗ್ಗದಲ್ಲಿ ಬಿಜೆಪಿ ಸೊರಬ ಮತ್ತು ಸಾಗರ ವಿಧಾನಸಭಾ ಕ್ಷೇತ್ರಗಳನ್ನು ಕಳೆದುಕೊಂಡಿದೆ.
* ಬಳ್ಳಾರಿಯಲ್ಲಿ ಕಾಂಗ್ರೆಸ್ ಸೀಟು ಕಸಿದುಕೊಂಡಿರುವುದು ಮಾತ್ರವಲ್ಲ, ಮೂರು ಪಟ್ಟು (85 ಸಾವಿರಕ್ಕೆ ಹೋಲಿಸಿದರೆ 2.43 ಲಕ್ಷ) ಹೆಚ್ಚು ಅಂತರದಿಂದ ಗೆದ್ದಿದೆ
* ಬಳ್ಳಾರಿಯಲ್ಲಿ ಕಾಂಗ್ರೆಸ್ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದು, ಬಿಜೆಪಿ ಶಾಸಕರಿದ್ದ ಬಳ್ಳಾರಿ ನಗರ ಮತ್ತು ಕೂಡ್ಲಿಗಿಯಲ್ಲಿ ಸೋತಿದೆ.
* ಮಂಡ್ಯದಲ್ಲೂ ಮೈತ್ರಿಕೂಟದಿಂದಾಗಿ ಗೆಲುವಿನ ಅಂತರ ಭಾರಿ ಹೆಚ್ಚಾದರೂ, ಬಿಜೆಪಿಯ ಮತಗಳಿಕೆ (84 ಸಾವಿರದಿಂದ 2.44 ಲಕ್ಷ) 3 ಪಟ್ಟು ಹೆಚ್ಚಿದೆ. ಇದು ಬಿಜೆಪಿಯ ಈವರೆಗಿನ ಗಳಿಸಿದ ಗರಿಷ್ಠ ಮತ. ಶ್ರೀರಂಗಪಟ್ಟಣ ಮತ್ತು ಮೇಲುಕೋಟೆಯಲ್ಲಿ ರೈತಸಂಘದ ಮತ ಬಿಜೆಪಿಗೆ ವರ್ಗಾವಣೆಯಾಗಿದೆ ಎಂದು ಹೇಳಲಾಗಿದೆ.
* ಜಮಖಂಡಿಯಲ್ಲಿ ಅಂತರ 2.7 ಸಾವಿರದಿಂದ 39 ಸಾವಿರಕ್ಕೆ ಏರಿದೆ.
* ರಾಮನಗರದಲ್ಲೂ ಅಂತರ ಐದು ಪಟ್ಟು (22 ಸಾವಿರದಿಂದ 1.09 ಲಕ್ಷಕ್ಕೆ) ಹೆಚ್ಚಾಗಿದೆ. ಕಣದಿಂದ ಹಿಂದೆ ಸರಿದರೂ ಬಿಜೆಪಿಗೆ 15 ಸಾವಿರ ಮತ ಬಂದಿದೆ
* ಎಲ್ಲಾ ಕ್ಷೇತ್ರಗಳಲ್ಲೂ ಮತದಾನದ ಶೇಕಡಾ ಕಡಿಮೆಯಾಗಿತ್ತು ಎಂಬುದನ್ನು ಗಮನಿಸಬೇಕು

ಮೈತ್ರಿಕೂಟದಲ್ಲಿ ಮತ ವರ್ಗಾವಣೆ ಆಗಿದೆ

ಈ ಉಪಚುನಾವಣೆಗಳ ವಿಶ್ಲೇಷಣೆ ಮುಖ್ಯವಾಗಿ ಆಗಬೇಕಾದ್ದು ಮೈತ್ರಿಕೂಟದ ಸ್ಪರ್ಧೆಯಲ್ಲಿ ಇಲ್ಲದ ಪಕ್ಷದಿಂದ ಸ್ಪರ್ಧಿಸಿದ ಪಕ್ಷಕ್ಕೆ ಆಯಿತೆ ಎಂಬುದು. ಇದು 2019ರ ಲೋಕಸಭಾ ಚುನಾವಣೆ ಮೇಲೆ ಹೆಚ್ಚಿನ ಪ್ರಭಾವ ಬೀರುವಂತಹದ್ದು. ಮತದಾನದ ಪ್ರಮಾಣ ಉಪ ಚುನಾವಣೆಗಳಲ್ಲಿ ಕಡಿಮೆಯಾಗಿರುವುದರಿಂದ ಮತಗಳಿಕೆ ವರ್ಗಾವಣೆಯ ಪೂರ್ಣ ಚಿತ್ರಣವನ್ನು ಕೊಡಲಿಕ್ಕಿಲ್ಲ. ಅದಕ್ಕಾಗಿ ಶೇಕಡಾವಾರು ಮತಗಳಿಕೆಯನ್ನು ಸಹ ಹೋಲಿಸಲಾಗಿದೆ.

ಈ ದೃಷ್ಟಿಯಲ್ಲಿ ಮತಗಳಿಕೆಯ ಅಂಕೆಸಂಖ್ಯೆಗಳನ್ನು ನೋಡಿದರೆ ಐದು ಕ್ಷೇತ್ರಗಳಲ್ಲಿ ಬಳ್ಳಾರಿಯಲ್ಲಿ ಅತ್ಯಂತ ಹೆಚ್ಚಿನ ಮತವರ್ಗಾವಣೆ (ಜೆಡಿ-ಎಸ್ ನಿಂದ ಕಾಂಗ್ರೆಸಿಗೆ) ಆಗಿದೆ. ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ ಪ್ರಮಾಣ 2014ರಲ್ಲಿ ಶೇ. 44ರಿಂದ ಶೇ. 60ಕ್ಕೆ ಏರಿದೆ. ಬಿಜೆಪಿಯದ್ದು ಶೇ. 51ರಿಂದ ಶೇ. 37ಕ್ಕೆ ಕುಸಿದಿದೆ. 2014ರ ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ 4.61 ಲಕ್ಷದಲ್ಲಿ ಕಾಂಗ್ರೆಸ್ಸ್ಪೂರ್ಣ ಪಡೆದಿದ್ದು ಮಾತ್ರವಲ್ಲ, 6.28 ಲಕ್ಷಕ್ಕೆ ಏರಿದೆ.

ಶಿವಮೊಗ್ಗದಲ್ಲಿ ಸಹ ವರ್ಗಾವಣೆ ಆಗಿದೆ. 2014ರ ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ 4.83 ಲಕ್ಷದಲ್ಲಿ ಜೆಡಿ-ಎಸ್ ಪೂರ್ಣ ಪಡೆದಿದ್ದು ಮಾತ್ರವಲ್ಲ, 4.91 ಲಕ್ಷಕ್ಕೆ ಏರಿದೆ. ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ ಪ್ರಮಾಣ 2014ರಲ್ಲಿ ಶೇ. 43ರಿಂದ ಶೇ. 46ಕ್ಕೆ ಏರಿದೆ. ಬಿಜೆಪಿ ಯದ್ದು ಶೇ. 54 ರಿಂದ 51ಕ್ಕೆ ಇಳಿದಿದೆ.


ಮಂಡ್ಯದಲ್ಲಿ ಮಾತ್ರ ವರ್ಗಾವಣೆ ಅತಿ ಕಡಿಮೆ ಆಗಿದೆ. 2014ರ ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ 10.43 ಲಕ್ಷದಲ್ಲಿ ಜೆಡಿ-ಎಸ್ 5.69 ಲಕ್ಷ ಮಾತ್ರ ಪಡೆದಿದೆ. ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ ಪ್ರಮಾಣ 2014ರಲ್ಲಿ ಶೇ. 87ರಿಂದ ಶೇ. 63ಕ್ಕೆ ಇಳಿದಿದೆ.

ಜಮಖಂಡಿ ಕ್ಷೇತ್ರದಲ್ಲಿ ಸಹ ವರ್ಗಾವಣೆ ಆಗಿದೆ. 2018 ಎಪ್ರಿಲಿನ ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ 50 ಸಾವಿರದಲ್ಲಿ ಕಾಂಗ್ರೆಸ್ ಪೂರ್ಣ ಪಡೆದಿದ್ದು ಮಾತ್ರವಲ್ಲ, 97 ಸಾವಿರಕ್ಕೆ ಏರಿದೆ. ಕಾಂಗ್ರೆಸ್ ಜೆಡಿ-ಎಸ್ ಒಟ್ಟು ಮತಗಳಿಕೆ ಪ್ರಮಾಣ 2018ಎಪ್ರಿಲಿನ ಶೇ. 33ರಿಂದ ಶೇ. 61ಕ್ಕೆ ಏರಿದೆ. ಬಿಜೆಪಿ ಯದ್ದೂ ಶೇ. 30ರಿಂದ 37ಕ್ಕೆ ಏರಿದೆ. ಇತರ ಅಭ್ಯರ್ಥಿಗಳು ಇಲ್ಲದ್ದರಿಂದ ಹೀಗಾಗಿದೆ.

ರಾಮನಗರ ಕ್ಷೇತ್ರದಲ್ಲಿ ಅಭ್ಯರ್ಥಿ ವಾಪಸು ಪಡೆದಿದ್ದರಿಂದ ಈ ವಿಶ್ಲೇಷಣೆಗೆ ಅರ್ಥವಿರುವುದಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಮಂಡ್ಯ ಕ್ಷೇತ್ರ ಬಿಟ್ಟರೆ ಇತರ ಕ್ಷೇತ್ರಗಳಲ್ಲಿ ಮತ ವರ್ಗಾವಣೆ ನಡೆದಿದೆ ಎನ್ನಬಹುದು.

ಮಾತೆಂದರೆ ಇದು



ಕೇಳಿಸಿದ್ದು

ಎರವಲು ಪ್ರಭಾವಳಿಯಲ್ಲಿ ಮಿಂದ 'ಪರಿವಾರ'

ಮೈತುಂಬ ಅವಹೇಳನವನ್ನೇ ಹೊದ್ದು ಬದುಕುತ್ತಿರುವ ದಲಿತರಂತೆಯೇ ಭರತವರ್ಷದ ಆದಿವಾಸಿಗಳ ತಬ್ಬಲಿತನಕ್ಕೂ ಕೊನೆ ಇಲ್ಲ. ಕಳೆದ ವಾರ ಗುಜರಾತಿನ ನರ್ಮದಾ ಕಣಿವೆಯ ಸಾವಿರಾರು ಆದಿವಾಸಿ ಕುಟುಂಬಗಳು ಒಲೆ ಹಚ್ಚಲಿಲ್ಲ. ಉಪವಾಸವಿದ್ದು ಸೂತಕ ಆಚರಿಸಿದವು. ಯುವಕರು ತಲೆ ಬೋಳಿಸಿಕೊಂಡರು. ಪ್ರತಿಭಟನೆಯ ಕಪ್ಪು ಬಲೂನುಗಳು ಹಿಂಡು ಹಿಂಡಾಗಿ ಗಗನಕ್ಕೆ ಚಿಮ್ಮಿದವು.

ಈ ಅಡವಿ, ನದಿ, ಝರಿ, ಜಲಪಾತ, ಜಮೀನು, ಬೇಸಾಯಗಳು ತಲೆತಲಾಂತರದಿಂದ ನಮ್ಮನ್ನು ಕಾದಿವೆ. ಇವನ್ನೆಲ್ಲ ನಾಶ ಮಾಡುತ್ತಿರುವಾಗ ನಾವು ಸಂಭ್ರಮ ಆಚರಿಸುವುದಾದರೂ ಹೇಗೆ, ಸಾವನ್ನು ಸಂಭ್ರಮಿಸಲಾದೀತೇ ಎಂಬುದು ಅವರ ಅಳಲು. ನಮ್ಮ ದೈವವಾದ ವರತಾ ಬಾಬಾ ಮಂದಿರದ ಅಸ್ಮಿತೆ ಅಳಿಸಿ ಹಾಕಿ ಸಾಧು ಬೆಟ್ ಎಂದು ಕರೆದು ಅಲ್ಲಿ ಸರ್ದಾರ್ ಪಟೇಲ್ ಪ್ರತಿಮೆ ಸ್ಥಾಪಿಸಲಾಯಿತು ಎನ್ನುವ ಆದಿವಾಸಿಗಳ ಮಾತಿಗೆ ಗ್ರಾಮಪಂಚಾಯಿತಿ ದಸ್ತಾವೇಜುಗಳ ಪುರಾವೆ ಉಂಟು.

ಸ್ವತಂತ್ರ ಭಾರತದ ಒಬ್ಬನೇ ಒಬ್ಬ ನಾಗರಿಕನೂ ಹಸಿದು ಮಲಗಬಾರದು ಎಂಬ ತಾಯಿಮನಸಿನ ಸರ್ದಾರ್ ಪಟೇಲ್ ದೈತ್ಯಪ್ರತಿಮೆಯೂ ಈ ಆದಿವಾಸಿಗಳಿಗಾಗಿ ಮರುಗಿರಬೇಕು. ಚೆಂದದ ಅನಾವರಣ ಉತ್ಸವವನ್ನು ಕೆಡಿಸಿಯಾರು ಎಂದು ಆದಿವಾಸಿ ನಾಯಕರನ್ನು ಹಿಂಡು ಹಿಂಡಾಗಿ ಬಂಧಿಸಿ ಜೈಲಿಗೆ ತಳ್ಳಲಾಯಿತು. ಪ್ರತಿಮೆಗೆ ನಮ್ಮ ವಿರೋಧವಿಲ್ಲ, ಆದರೆ ನಮ್ಮ ಇರವನ್ನೇ ಅಳಿಸಿ ಹಾಕಿದರೆ ಸುಮ್ಮನಿರಲಾದೀತೇ, ವಿನಾಕಾರಣ ನಮಗೆ ನಕ್ಸಲರು ಮತ್ತು ದೇಶದ್ರೋಹಿಗಳ ಹಣೆಪಟ್ಟಿ ಹಚ್ಚಲಾಗುತ್ತಿದೆ ಎಂಬುದು ಆದಿವಾಸಿ ನಾಯಕರ ಆಕ್ರೋಶ.

ಜನಸಮೂಹಗಳ ನಡುವಣ ರಾಜಕೀಯ- ಆರ್ಥಿಕ- ಸಾಮಾಜಿಕ- ಕೋಮುವಾದಿ ಕಂದರಗಳು ಹಿಂದೆಂದಿಗಿಂತಲೂ ಹಿರಿದು ಬಾಯಿ ತೆರೆದಿರುವ ದ್ವೇಷದ ದಿನಗಳಲ್ಲಿ ಜಗತ್ತಿನ ಅತಿ ಎತ್ತರದ ಏಕತೆಯ ಪ್ರತಿಮೆಯನ್ನು ಪ್ರಧಾನಿ ಮೋದಿ ಅನಾವರಣಗೊಳಿಸಿದ್ದಾರೆ. ದೇಶದ ಸಾಮಾಜಿಕ ಏಕತೆಯನ್ನು ಗಂಡಾಂತರಕ್ಕೆ ಒಡ್ಡುವ ಈ ಕಂದರಗಳನ್ನು ಕಿರಿದು ಮಾಡಬೇಕಿತ್ತು. ಆದರೆ ಅವುಗಳನ್ನು ಹಿರಿದು ಮಾಡುವ ಕೆಲಸದಲ್ಲಿ ಬಿಡುವಿಲ್ಲದೆ ತೊಡಗಿದ್ದಾರೆ ಮೋದಿ. ಮಾತು ಮತ್ತು ಕೃತಿಯ ನಡುವಿನ ಈ ಆಡು- ಆನೆಯ ಈ ಪ್ರಜ್ಞಾಪೂರ್ವಕ ಅಂತರ ಬಹು ಕ್ರೂರ ವಿಡಂಬನೆ. ಒಡೆದು ಆಳುವ ನೀತಿ ವಿಜೃಂಭಿಸಿದೆ. ವಿವಿಧತೆಯಲ್ಲಿ ಏಕತೆಯನ್ನು, ಏಕತೆಯಲ್ಲಿ ವಿವಿಧತೆಯನ್ನು ಕಾಣುವ ನೋಟಕ್ಕೆ ಎಳ್ಳುನೀರು ಬಿಡಲಾಗಿದೆ. ಮತ-ಪಂಥ- ಸಿದ್ಧಾಂತ- ಸಂಸ್ಕೃತಿಗಳ ಬಹುತ್ವವನ್ನು ತುಳಿದು ಹಾಕಲು ಹೊರಟವರು ನಿಜದ ಏಕತೆಯನ್ನು ಎಲ್ಲಿಂದ ತಂದಾರು? ಅದು ಅವರ ನಿಜ ಉದ್ದೇಶವೂ ಅಲ್ಲ.

ನರ್ಮದಾ ನದಿ ಕಣಿವೆಯ ಆದಿವಾಸಿ ಜನರ ಬದುಕುಗಳನ್ನು ಬುಡಮೇಲು ಮಾಡಿರುವ ಸರ್ದಾರ್ ಸರೋವರ ಜಲಾಶಯದ ಕ್ರೂರ ಪರಂಪರೆ ನಿಲ್ಲಬೇಕಿತ್ತು. ಆದರೆ ಪಟೇಲರ ಪ್ರತಿಮೆಯ ನಿರ್ಮಾಣದಲ್ಲೂ ಅದು ಮುಂದುವರೆದಿದೆ. ಪ್ರತಿಮೆ ನಿಂತಿರುವ ನೆಲ ಆದಿವಾಸಿಗಳ ಆಸ್ಥೆಯ ಪವಿತ್ರ ಭೂಮಿ. ಅವರಿಂದ ಕಿತ್ತುಕೊಂಡು ಹೋಟೆಲುಗಳು, ಹೆದ್ದಾರಿಗಳು, ಉದ್ಯಾನಗಳು, ಆಮೋದ-ಪ್ರಮೋದ ಸೌಲಭ್ಯಗಳು ಈ ಜಾಗದಲ್ಲಿ ತಲೆಯೆತ್ತುತ್ತಿವೆ.

– ಡಿ.ಉಮಾಪತಿ, ಪ್ರಜಾವಾಣಿ ನವೆಂಬರ್ 5

ಆರೆಸ್ಸೆಸ್ ಫ್ಯಾಸಿಸಂನ್ನು ಬಹುವಾಗಿ ಮೆಚ್ಚಿಕೊಂಡಿರುವ ಸಂಘಟನೆಯಾಗಿದ್ದರೂ ಅದರ ಪ್ರಾಬಲ್ಯ ಹೆಚ್ಚಾಗಿರುವ ಪ್ರಸಕ್ತ ಸನ್ನಿವೇಶವನ್ನು ಪಕ್ಕಾ ಫ್ಯಾಸಿಸಂನ ಸನ್ನಿವೇಶ ಎಂದು ಕರೆಯಬಹುದೇ ಎಂಬ ಬಗ್ಗೆ ಎಡಪಂಥೀಯರಲ್ಲಿ ಜಿಜ್ಞಾಸೆ ಇದೆ. ಇಂದಿನ ಪರಿಸ್ಥಿತಿಯು 1930ರ ದಶಕದ ನಾಜೀ ಯಾತನಾ ಶಿಬಿರಗಳಂದ ಹಿಡಿದು ಆಗ ಕಾಣಿಸಿಕೊಂಡ ಎಲ್ಲ ಅಂಶಗಳಗೂ ಸಮಾನವಾಗಿರಬೇಕು ಎಂದು ನಾವು ಪಟ್ಟು ಹಿಡಿಯದಿದ್ದರೆ, ಫ್ಯಾಸಿಸಂ ಒಂದು ವಾಸ್ತವ ಆಗಿದೆಯೆಂದು ಗುರುತಿಸುವ ಕೆಲಸ ಕಷ್ಟವಲ್ಲ, ಫ್ಯಾಸಿಸಂನ ಬೇರೆ ಹಲವು ಗುಣ ಲಕ್ಷಣಗಳು ಇಂದಿನ ಭಾರತದಲ್ಲಿ ಕಾಣಿಸಿಕೊಂಡಿವೆ ಎನ್ನುತ್ತಾರೆ ಹಿರಿಯ ಎಡಪಂಥೀಯ ಚಿಂತಕ ಮತ್ತು ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಇದಕ್ಕೆ ಅವರು ಕೊಡುವ ಆಧಾರಗಳೇನು? ಅವರ ಈ ಲೇಖನದಲ್ಲಿ ನೋಡಿ.

ಈ ಫ್ಯಾಸಿಸಂನ್ನು 2019ರಲ್ಲಿ ಸೋಲಿಸಬಹುದು

ಎಂದೂ ಅವರು ಹೇಳುತ್ತಾರೆ. ಲೇಖನದ ಭಾವಾನುವಾದ: ಕೆ.ಎಂ.ನಾಗರಾಜ್

ಈಗ ನಮ್ಮೆದುರಿನ ಫ್ಯಾಸಿಸಂಅನ್ನು ಸರಿಯಾಗಿ ಅರ್ಥವಾಡಿಕೊಳ್ಳುವಲ್ಲಿ, ಗುರುತಿಸಲು ಕೂಡ ಒಂದು ತೊಡಕಿದೆ. ಅದನ್ನು ಅರ್ಥಮಾಡಿಕೊಳ್ಳಲು 1930ರ ದಶಕದ ದುರಂತಮಯ ಘಟನೆಗಳನ್ನು, ಅನಿವಾರ್ಯವಾಗಿ, ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಭಾರತದಂತಹ ಒಂದು ಉದಾರವಾದಿ ಬೂರ್ಷ್ವಾ ಪ್ರಭುತ್ವದ ಆಡಳಿತವು ಈಗ ಫ್ಯಾಸಿಸ್ಟ್ ಒಲವುಳ್ಳ ವ್ಯಕ್ತಿಗಳ ಕೈಯ್ಯಲ್ಲಿದೆ ಎಂಬುದನ್ನು ಸಂದೇಹಿಸುವಂತಿಲ್ಲ. ಏಕೆಂದರೆ, ಆಡಳಿತದ ಉನ್ನತ ಹುದ್ದೆಗಳಲ್ಲಿರುವ ವ್ಯಕ್ತಿಗಳು ತಾವು ಆರ್‌ಎಸ್‌ಎಸ್‌ನಲ್ಲಿ ನಿಷ್ಠೆಯುಳ್ಳವರೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತಾರೆ. ಅವರ ಮಾತೃ ಸಂಸ್ಥೆ ಆರ್‌ಎಸ್‌ಎಸ್, ಸಾಮಾನ್ಯವಾಗಿ ಗುರುತಿಸುವ ಫ್ಯಾಸಿಸಂ ಬಗ್ಗೆ ತನಗಿರುವ ಒಲವು, ಮೆಚ್ಚಿಗೆಯನ್ನು ವ್ಯಕ್ತಪಡಿಸಿದೆ.

ತಮ್ಮ ವಿರೋಧಿಗಳನ್ನು ನಿರ್ನಾಮ ಮಾಡಲು ನಾಜಿಗಳು ರೂಢಿಗೆ ತಂದ ಫ್ಯಾಸಿಸ್ಟ್ ಪ್ರಭುತ್ವದ ಮಟ್ಟವನ್ನು ನಮ್ಮ ಪ್ರಭುತ್ವವು ಇನ್ನೂ ಮುಟ್ಟಿಲ್ಲ ಮತ್ತು ಅಷ್ಟು ಅಪಾಯಕಾರಿ ವೇಗದಲ್ಲಿ ಹೋಗಲೂ ಸಾಧ್ಯವಾಗಿಲ್ಲ. ಈ ಪರಿಸ್ಥಿತಿಯಲ್ಲಿ, ನಾವು ಫ್ಯಾಸಿಸಂನ ಅಪಾಯಗಳಿಗೆ ಎದುರಾಗಿಲ್ಲವೇ ಎಂಬ ಪ್ರಶ್ನೆಯನ್ನು ಅನೇಕ ಮಂದಿ ಕೇಳುತ್ತಾರೆ. 1930ರ ದಶಕದ ದುರಂತಮಯ ಘಟನೆಗಳ ಆಧಾರದಲ್ಲಿ ನೋಡುವುದಾದರೆ, ಇನ್ನೂ ಇಲ್ಲ ಎಂದೇ ಹೇಳಬಹುದು.

ಆದರೆ, ನಮ್ಮ ಸಂದರ್ಭದಲ್ಲಿರುವ ಒಂದು ಮೂಲ ವ್ಯತ್ಯಾಸದಿಂದಾಗಿ, ಸಮಕಾಲೀನ ಫ್ಯಾಸಿಸಂ, 1930ರ ದಶಕದ ಫ್ಯಾಸಿಸಂಗಿಂತ ಭಿನ್ನವಾಗಿರುವುದು ಅಗತ್ಯವಾಗುತ್ತದೆ. 1930ರ ದಶಕದಲ್ಲಿ ಫ್ಯಾಸಿಸಂ ಉಗಮವಾದಾಗ, ರಾಷ್ಟ್ರ–ಮೂಲ ಹಣಕಾಸು ಬಂಡವಾಳವು ತನ್ನ ಉಳಿವಿಗಾಗಿ ಇನ್ನೊಂದು ರಾಷ್ಟ್ರ–ಮೂಲ ಹಣಕಾಸು ಬಂಡವಾಳದೊಂದಿದೆ ತೀವ್ರ ಪೈಪೋಟಿಯಲ್ಲಿತ್ತು. ಈ ಕಾರಣದಿಂದಾಗಿ ಯುದ್ಧಗಳು ನಡೆಯುತ್ತಿದ್ದವು. ಆದರೆ, ಬಂಡವಾಳವು ಇಂದು ಜಾಗತೀಕರಣಗೊಂಡಿದೆ. (ಅಂದರೆ, ರಾಷ್ಟ್ರ–ಮೂಲ ಬಂಡವಾಳದ ಸ್ಥಾನವನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಆಕ್ರಮಿಸಿದೆ–ಅನು). ಬಂಡವಾಳದ ಯಜಮಾನಿಕೆಯು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಕೈಯ್ಯಲ್ಲಿರುವುದರಿಂದ ಅಲ್ಲಿ ಪೈಪೋಟಿಗೆ ಅವಕಾಶವೇ ಇಲ್ಲ.

ಬಂಡವಾಳದ ಯಜಮಾನಿಕೆಯಲ್ಲಿ ಎರಡು ತೊಡಕಿನ ಅಂಶಗಳಿವೆ. ಮೊದಲನೆಯದು, ಯಾವುದೇ ಒಂದು ರಾಷ್ಟ್ರ ಪ್ರಭುತ್ವವು, ಒಂದು ವೇಳೆ ಅದು ಫ್ಯಾಸಿಸ್ಟ್ ಪ್ರಭುತ್ವವಾಗಿದ್ದರೂ ಸಹ, ತಾನು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುವ ಅದರ ಸಾಮರ್ಥ್ಯ ಸೀಮಿತವಾಗಿರುತ್ತದೆ. ಆರ್ಥಿಕ ಬಿಕ್ಕಟ್ಟಿನಿಂದಾಗಿಯೇ ಫ್ಯಾಸಿಸಂ ಹುಟ್ಟು ಪಡೆಯುತ್ತದೆ. 1930ರ ದಶಕದಲ್ಲಿ ಆರ್ಥಿಕ ಕುಸಿತಕ್ಕೆ ಒಳಗಾಗಿದ್ದ ಜಪಾನ್ ಮತ್ತು ಜರ್ಮನಿ ದೇಶಗಳಲ್ಲಿದ್ದ ಫ್ಯಾಸಿಸ್ಟ್ ಪ್ರಭುತ್ವಗಳು ಬೃಹತ್ ಸಾಲಗಳ ಹಣವನ್ನು ಮಿಲಿಟರಿ ಖರ್ಚುಗಳಿಗೆ ಬಳಸುವ ಮೂಲಕ ಆರ್ಥಿಕ ಬಿಕ್ಕಟ್ಟಿನಿಂದ ಹೊರಬಂದವು. ಆಗ ಇದು ಸಾಧ್ಯವಿತ್ತು. ಈಗ ಸಾಧ್ಯವಿಲ್ಲ. ಏಕೆಂದರೆ, ದೇಶದಿಂದ ದೇಶಕ್ಕೆ ಹರಿದಾಡುವ ಸ್ವಾತಂತ್ರ್ಯ ಈಗ ಬಂಡವಾಳಕ್ಕಿದೆ. ಅಲ್ಲದೆ, ಸಾಲಗಳ ಮೂಲಕ ಪಡೆದ ಹಣವನ್ನು ಸರ್ಕಾರಗಳು ತಮ್ಮ ಖರ್ಚುಗಳಿಗೆ ಬಳಸುವ ಕ್ರಮವನ್ನು ಹಣಕಾಸು ಬಂಡವಾಳವು ಇಷ್ಟಪಡುವುದಿಲ್ಲ. ಒಂದು ವೇಳೆ ಅದರ ಈ ಅಪೇಕ್ಷೆಯನ್ನು ಮೀರಿದರೆ, ದೇಶದಲ್ಲಿ ಹೂಡಿರುವ ಬಂಡವಾಳವು ಹಕ್ಕಿಯಂತೆ ಹಾರಿ ಹೋಗುತ್ತದೆ. ಈ ಕಾರಣದಿಂದಾಗಿ, ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುವ ಪ್ರಭುತ್ವದ ಸಾಮರ್ಥ್ಯವನ್ನು ಮೊಳಕೆಯಲ್ಲಿಯೇ ಚಿವುಟಿದಂತಾಗುತ್ತದೆ. (ಅಮೇರಿಕಾ ಮಾತ್ರ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುವ ಕ್ರಮ ಕೈಗೊಳ್ಳಬಲ್ಲದು, "ಡಾಲರ್ ಅಂದರೆ ಬಂಗಾರಕ್ಕೆ ಸಮ" ಎಂದು ವಿಶ್ವದ ಕುಬೇರರು ಪರಿಗಣಿಸಿರುವ ಕಾರಣದಿಂದ).

ಎರಡನೆಯದಾಗಿ, ಮೇಲುಗೈ ಸಾಧಿಸಲು ಬಯಸುತ್ತಿದ್ದ ಬಂಡವಾಳವಾದಿ ದೇಶಗಳ ನಡುವಿನ ತಿಕ್ಕಾಟವನ್ನು ಭೀಕರ ಯುದ್ಧಕ್ಕೆ ತಿರುಗಿಸಿದ ಫ್ಯಾಸಿಸ್ಟ್ ದೇಶಗಳೇ ಅವನತಿಗೀಡಾದ ಹಿನ್ನೆಲೆಯಲ್ಲಿ, ಮಹಾ ಯುದ್ಧಗಳ ಸಾಧ್ಯತೆ ಅವಾಸ್ತವಿಕ. ಮೇಲಾಗಿ, ವಿಶ್ವವು ಕಾದಾಡುವ ಬಣಗಳಾಗಿ ಹರಿದು ಹಂಚಿಹೋಗುವುದನ್ನು ಜಾಗತೀಕರಣಗೊಂಡಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಬಯಸುವುದಿಲ್ಲ.

ಸಮಕಾಲೀನ ಫ್ಯಾಸಿಸಂ ಬಹಳ ಕಾಲ ಸುಳಿದಾಡುತ್ತಲೇ ಬೆದರಿಕೆ ಒಡ್ಡುವ ವಿದ್ಯಮಾನ

ಆದ್ದರಿಂದ ಸಮಕಾಲೀನ ಫ್ಯಾಸಿಸಂ ನೇರವಾಗಿ ಒಂದು ಫ್ಯಾಸಿಸ್ಟ್ ಪ್ರಭುತ್ವವನ್ನು ಸ್ಥಾಪಿಸಲು ಮುನ್ನುಗ್ಗಲಾರದು(ಫ್ಯಾಸಿಸಂನ ಸಾಮಾಜಿಕ ಬುನಾದಿಯ ವ್ಯಾಪ್ತಿ ಇನ್ನೂ ಚಿಕ್ಕದು), ಅಥವಾ ಯುದ್ಧದಲ್ಲಿ ತೊಡಗಿ ಸುಸ್ತಾಗುವ ಪರಿಸ್ಥಿತಿ ಇಲ್ಲ. ಆದ್ದರಿಂದ, ಅದೊಂದು ಬಹಳ ಕಾಲ ಅಪಾಯಕಾರಿಯಾಗಿಯೇ ಸುಳಿದಾಡುವ ವಿದ್ಯಮಾನವಾಗಿ ಪರಿಣಮಿಸಿದೆ. "ಶಾಶ್ವತ ಫ್ಯಾಸಿಸಂ" ಎನ್ನಬಹುದಾದ ಈ ಪರಿಸ್ಥಿತಿಯಲ್ಲಿ, ಫ್ಯಾಸಿಸ್ಟರು ಪದೇ ಪದೇ ಅಧಿಕಾರ ಹಿಡಿಯುತ್ತಾರೆ ಮತ್ತು ಕಳೆದುಕೊಳ್ಳುತ್ತಾರೆ. ಅವರ ವಿರೋಧಿಗಳು ತಮ್ಮ ಹೇಡಿತನದಿಂದಾಗಿ ಅವರನ್ನೇ ಅನುಕರಿಸುತ್ತಾರೆ ("ಮೃದು ಹಿಂದುತ್ವ" ಅನುಸರಿಸುವ ಕಾಂಗ್ರೆಸ್‌ನಂತೆ). ಯಾವ ಕೆಲವು ಮಿಥ್ಯೆಗಳಿಂದ (ಆಧಾರವಿಲ್ಲದ ಕಲ್ಪನೆಗಳು) ಫ್ಯಾಸಿಸಂ ಸೃಷ್ಟಿಯಾಯಿತೋ ಅವುಗಳನ್ನು ಮೀರದ ಹೊರತು, ಸಮಾಜವು ಹಂತಹಂತವಾಗಿ ಫ್ಯಾಸೀಕರಣಗೊಳ್ಳುತ್ತದೆ. ಆದ್ದರಿಂದ, ಅಗತ್ಯವಾಗಿ ಮಾಡಬೇಕಾದ ಕೆಲಸವೆಂದರೆ, ಫ್ಯಾಸಿಸಂ ಒಂದು ವಾಸ್ತವವೆಂದು ಗುರುತಿಸುವುದು ಮತ್ತು ಅದನ್ನು ಒಂದು ಸೂಕ್ತವಾಗಿ ಮತ್ತು ನಾವಿನ್ಯಪೂರ್ಣವಾಗಿ ಎದುರಿಸುವುದು.

ಇಂದಿನ ಪರಿಸ್ಥಿತಿಯು ಅಂದಿನ ಯಾತನಾ ಶಿಬಿರಗಳಿಂದ ಹಿಡಿದು 1930ರಲ್ಲಿ ಕಾಣಿಸಿಕೊಂಡ ಎಲ್ಲ ಅಂಶಗಳಿಗೂ ಸಮಾನವಾಗಿರಬೇಕು ಎಂದು ನಾವು ಪಟ್ಟು ಹಿಡಿಯದಿದ್ದರೆ, ಫ್ಯಾಸಿಸಂ ಒಂದು ವಾಸ್ತವವೆಂದು ಗುರುತಿಸುವ ಕೆಲಸ ಕಷ್ಟವಲ್ಲ, ಫ್ಯಾಸಿಸಂನ ಬೇರೆ ಹಲವು ಗುಣ ಲಕ್ಷಣಗಳು ಇಂದಿನ ಭಾರತದಲ್ಲಿ ಕಾಣಿಸಿಕೊಂಡಿವೆ. "ರಾಷ್ಟ್ರ" ಎಂದರೆ ಜನತೆಗಿಂತ ಮೇಲಿನದು ಎಂಬ ದುಂಡಾವರ್ತಿಯ ಮತ್ತು ಅತಿರೇಕದ ರಾಷ್ಟ್ರೀಯತೆಯ ವೈಭವೀಕರಣ (ಇದು, ನಮ್ಮ ಸ್ವಾತಂತ್ರ್ಯ ಹೋರಾಟವು ಎಲ್ಲರನ್ನೂ ಒಳಗೊಂಡ, ಜನ–ಕೇಂದ್ರಿತ ಮತ್ತು ವಸಾಹತು–ವಿರೋಧಿ ಪರಿಕಲ್ಪನೆಗಳಿಗೆ ಪೂರ್ಣವಾಗಿ ವಿರುದ್ಧವಾಗಿದೆ); ಈ ರೀತಿಯಲ್ಲಿ ಗುರುತಿಸಿದ "ರಾಷ್ಟ್ರ"ವನ್ನು ಸರ್ಕಾರದೊಂದಿಗೆ ಮತ್ತು "ನಾಯಕ"ನೊಂದಿಗೆ ಸಮೀಕರಿಸಿ, ಭಿನ್ನಮತ ವ್ಯಕ್ತಪಡಿಸುವವರನ್ನು ರಾಷ್ಟ್ರ–ವಿರೋಧಿಗಳೆಂದೂ, ರಾಷ್ಟ್ರದ್ರೋಹಿಗಳೆಂದೂ ಮತ್ತು ಈ ಕೃತ್ಯವು ಭಯೋತ್ಪಾದನಾ ಸೂಚಕವೆಂದೂ ಪರಿಗಣಿಸಲಾಗುತ್ತಿದೆ; ಛೂಬಿಟ್ಟ ಕೊಲೆಗಡುಕ ಗುಂಪುಗಳು(ಲಿಂಚಿಂಗ್) ಮತ್ತು ಸಿಬಿಐ ಹಾಗೂ ಯುಎಪಿಎ ಕಾಯ್ದೆ ಬಳಸಿ ವಿರೋಧಿಗಳನ್ನು ನಿಗ್ರಹಿಸುವುದು; ಟ್ರಾಲಿಂಗ್ ಸೇನೆಯ ಮೂಲಕ ತಮ್ಮ ವಿರೋಧಿಗಳ ಚಾರಿತ್ರ್ಯವಧೆ, ಅವರನ್ನು ಹೀನಾಮಾನವಾಗಿ ಬಯ್ಯುವುದು, ಮಹಿಳೆಯರಿಗೆ ಮಾನಭಂಗಮಾಡುವುದಾಗಿ ಬೆದರಿಕೆಯೊಡ್ಡುವುದು; ಅದೃಷ್ಟಹೀನ ಲ್ಪಸಂಖ್ಯಾತರನ್ನು "ಒಳಗಿನ ಶತ್ರು"ಗಳೆಂದು ಗುರಿಯಾಗಿಸುವುದು; ಪುರಾಣ ಮತ್ತು ಚರಿತ್ರೆಯ ನಡುವೆ, ವಿಜ್ಞಾನ ಮತ್ತು ಪೂರ್ವಾಗ್ರಹಗಳ ನಡುವೆ, ವಾಸ್ತವಾಂಶ ಮತ್ತು ಕಟ್ಟುಕತೆಗಳ ನಡುವೆ ಇರುವ ವ್ಯತ್ಯಾಸಗಳನ್ನು ಅಳಿಸಿಹಾಕುವುದು ಮತ್ತು ಎಲ್ಲಾ ರೀತಿಯ ಬೌದ್ಧಿಕ ಚಟುವಟಿಕೆಗಳನ್ನು ನಿಂದಿಸುವುದು, ಇವೆಲ್ಲವೂ ಸ್ಪಷ್ಟವಾಗಿ ಗೋಚರಿಸುತ್ತಿವೆ. ಮೇಲಾಗಿ, ಪ್ರಭುತ್ವ ಮತ್ತು ಕಾರ್ಪೊರೇಟ್ ಕುಳಗಳ ಆಪ್ತ ಸಂಬಂಧವು ಈ ಕೃತ್ಯಗಳಿಗೆ ಪ್ರೇರಣೆಯಾಗಿದೆ. ಇಟಲಿಯ ಸರ್ವಾಧಿಕಾರಿ ಬೆನಿಟೊ ಮುಸಲೋನಿ, ಫ್ಯಾಸಿಸಂ ಎಂದರೆ, "ಕಾರ್ಪೊರೇಟ್ ಮತ್ತು ಪ್ರಭುತ್ವಗಳ ಶಕ್ತಿಯ ಸಂಗಮ" ಎಂಬುದಾಗಿ ವ್ಯಾಖ್ಯಾನಿಸಿದ್ದನ್ನು ನಾವು ಜ್ಞಾಪಿಸಿಕೊಳ್ಳಬೇಕು.

ಭಾರತದ ಸಂದರ್ಭದಲ್ಲಿ, ಫ್ಯಾಸಿಸಂ ಹರಿಯಬಿಡುವ ಪ್ರತಿ–ಕ್ರಾಂತಿಯು ಬೀರುವ ಪರಿಣಾಮಗಳು ಹೇಸಿಗೆ ಹುಟ್ಟಿಸುತ್ತವೆ. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳ ಕತ್ತು ಹಿಸುಕುವುದರ ಜೊತೆಗೆ, ಪಾರಂಪರಿಕವಾಗಿ ಆಚರಣೆಯಲ್ಲಿರುವ ಶ್ರೇಣೀಕೃತ ಜಾತಿ ಪದ್ಧತಿ ಮತ್ತು ಜಾತಿ–ದಬ್ಬಾಳಿಕೆಗಳಿಗೆ ಫ್ಯಾಸಿಸಂ ಹೊಸ ರೂಪ ಕೊಡುತ್ತದೆ. ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದ ಅವಧಿಯಲ್ಲಿ ನಡೆದ ಜಾತಿ ವಿಮೋಚನಾ ಚಳುವಳಿ ಮತ್ತು ಸ್ವಾತಂತ್ರ್ಯ ಚಳುವಳಿಗಳ ಸಂಯುಕ್ತ ಒತ್ತಡದಿಂದಾಗಿ ಈ ಅಮಾನವೀಯ ನಡವಳಿಕೆಗಳು ತಗ್ಗಿದ್ದವು. ಆದರೆ, ಫ್ಯಾಸಿಸಂ ನಮ್ಮನ್ನು ಶತಮಾನಗಳ ಹಿಂದಕ್ಕೆ ತಳ್ಳುತ್ತದೆ.

ಫ್ಯಾಸಿಸಂನ್ನು ಸೃಷ್ಟಿಸಿದ ಪರಿಸ್ಥಿತಿಗಳು

ಫ್ಯಾಸಿಸಂಅನ್ನು ಸೋಲಿಸಲು, ಯಾವುದೇ ರೀತಿಯಲ್ಲಿ ವೋಟುಗಳು ವಿಭಜನೆಯಾಗದಂತೆ ನೋಡಿಕೊಳ್ಳುವ ಐಕ್ಯತೆಯ ಅವಶ್ಯಕತೆ ವಿರೋಧ ಪಕ್ಷಗಳಿಗಿದೆ. ವಿರೋಧ ಪಕ್ಷಗಳ ಇಂತಹ ಐಕ್ಯತೆಯು, ಈಗ ಅಧಿಕಾರದಲ್ಲಿರುವ ಫ್ಯಾಸಿಸ್ಟರನ್ನು ಕೆಳಗಿಳಿಸಬಹುದು. ಆದರೆ, ಫ್ಯಾಸಿಸಂನ ಹುಟ್ಟಿಗೆ ಕಾರಣವಾದ ಆಧಾರಹೀನ ಕಲ್ಪನೆಗಳನ್ನು , ಸಂದರ್ಭಗಳನ್ನು ಅದು ಬದಲಾಯಿಸುವುದಿಲ್ಲ. ಮುಂದೆ ದಾರಿಗಾಣದ ನವ–ಉದಾರವಾದವೇ ಇಂತಹ ಒಂದು ಸಂದರ್ಭ.

"ರಾಷ್ಟ್ರ"ವನ್ನು ಜನತೆಗಿಂತ ಎತ್ತರದ ಸ್ಥಾನದಲ್ಲಿಡುವ ರಾಷ್ಟ್ರೀಯತೆಯ ವೈಭವೀಕರಣವು, ರಾಷ್ಟ್ರ ಹಿತಕ್ಕಾಗಿ ಜನತೆ ತ್ಯಾಗಮಾಡಬೇಕು ಎಂದು ಬಯಸುತ್ತದೆ. ಕಾರ್ಪೊರೇಟ್–ಹಣಕಾಸು ಕುಳಗಳನ್ನು ತೃಪ್ತಿಪಡಿಸುವ ಮೂಲಕ, ಉನ್ನತ ಮಟ್ಟದ ಜಿಡಿಪಿಯ ಬೆಳವಣಿಗೆ ಸಾಧಿಸುವುದನ್ನೇ ರಾಷ್ಟ್ರ ಹಿತವೆಂದು ಬಗೆಯುವ ಈ ರಾಷ್ಟ್ರೀಯತೆಯು ಜನತೆಯನ್ನು ಇವರ ಮುಂದೆ ಆತ್ಮಗೌರವವಿಲ್ಲದ ಹಲ್ಲುಗಿಂಜುವವರ ಮಟ್ಟಕ್ಕೆ ಇಳಿಸುತ್ತದೆ. ಇಂತಹ ರಾಷ್ಟ್ರೀಯತೆಯ ಲಕ್ಷಣಗಳು ಏಳೆಂಟು ದಶಕಗಳ ಹಿಂದೆಯೇ ನಗರ ಕೇಂದ್ರಿತ ಬಂಡವಾಳಶಾಹಿಯಲ್ಲಿ ಕಾಣಿಸಿಕೊಂಡಿದ್ದವು. ಹಾಗಾಗಿಯೇ, "ರಾಷ್ಟ್ರದ ವೈಭವೀಕರಣವೇ ಹಣಕಾಸು ಬಂಡವಾಳದ ಸಿದ್ಧಾಂತ" ಎಂಬುದಾಗಿ ಜರ್ಮನ್ ಅರ್ಥಶಾಸ್ತ್ರಜ್ಞ, ರುಡಾಲ್ಫ್ ಹಿಲ್ಫರ್ಡಿಂಗ್ ಉದ್ಗರಿಸಿದ್ದರು.

ಇಂದಿನ ನವ–ಉದಾರವಾದಿ ಕಾಲದಲ್ಲಿ, ಕಾರ್ಪೊರೇಟ್–ಹಣಕಾಸು ಬಂಡವಾಳಗಳ ಯಜಮಾನಿಕೆಯ ಭಾರತದಲ್ಲಿ, ಇಂತಹ ವೈಭವೀಕರಣ ನೆಡೆದಿದೆ. ನವ–ಉದಾರವಾದವು ಆರ್ಥಿಕ ಬಿಕ್ಕಟ್ಟಿನಲ್ಲಿರುವ ಪರಿಸ್ಥಿತಿಯಲ್ಲಿ, ಕಾರ್ಪೊರೇಟ್–ಹಣಕಾಸು ಯಜಮಾನಿಕೆಯನ್ನು ಆಪತ್ತಿನಿಂದ ಪಾರುಮಾಡುವ ಉದ್ದೇಶದಿಂದ ಹಿಂದುತ್ವ ಶಕ್ತಿಗಳು ಅಖಾಡಕ್ಕಿಳಿದಿವೆ. ನಂತರ, ರಾಷ್ಟ್ರ ವೈಭವೀಕರಣದ ಪ್ರವೃತ್ತಿ ವಿಷಮಯಗೊಂಡಿದೆ. ಈ ಬಗೆಯಲ್ಲಿ, ಕಾರ್ಪೊರೇಟ್–ಕೋಮುವಾದಿ ಮೈತ್ರಿ ಅಸ್ತಿತ್ವಕ್ಕೆ ಬಂದಿದೆ. ಈ ಅವಧಿಯಲ್ಲಿ, ದುಡಿಯುವ ಜನತೆಯ ಆರ್ಥಿಕ ಸಂಕಷ್ಟಗಳು ದಿನೇ ದಿನೇ ಉಲ್ಬಣಗೊಳ್ಳುತ್ತಿವೆ.

ಇಂತಹ ಮಿಥ್ಯಾ ವಾತಾವರಣ ಬದಲಾಗಬೇಕು ಎಂದಾದರೆ, ಅಧಿಕಾರದಲ್ಲಿರುವ ಹಿಂದುತ್ವ ಪಡೆಯನ್ನು ಕೆಳಗಿಳಿಸುವಲ್ಲಿ ಅದು ಪರಿಣಮಿಸಿದರೂ ಸಹ, ಇದೇ ಹಿಂದುತ್ವ ಪಡೆ ಮುಂದಿನ ಸುತ್ತಿನಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯಲಾಗದಂತೆ 2019 ಪರಿಣಮಿಸಬೇಕು ಎಂದಾದರೆ, ಆಗ ವಿರೋಧ ಪಕ್ಷಗಳ ಐಕ್ಯತೆಯು, ಆಡಿದ್ದನ್ನು ಮಾಡುವ ಒಂದು ಕನಿಷ್ಠ ಕಾರ್ಯಕ್ರಮವನ್ನು ಆಧರಿಸಿರಬೇಕಾಗುತ್ತದೆ. ಈ ಅಜೆಂಡಾದಲ್ಲಿ, ಅಮಾಯಕ ಮುಸ್ಲಿಂ ಯುವಕರನ್ನು ಬಂಧಿಸಿ ವರ್ಷಗಟ್ಟಲೇ ಸೆರೆಮನೆಯಲ್ಲಿ ಕೊಳೆಯುವಂತೆ ಮಾಡಿ ಅವರ ಜೀವನವನ್ನೇ ಹಾಳುಗೆಡಹುವ 'ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ'ಯ(ಯುಎಪಿಎ) ರದ್ದತಿ, ರಾಷ್ಟ್ರದ್ರೋಹ ಸಂಬಂಧಿಸಿದ ಓಬಿರಾಯನ ಕಾಲದ ಕಾಯ್ದೆಯ ರದ್ದತಿ, ಕೊಲೆಗಡುಕ ಗುಂಪುಗಳ ಮೇಲೆ ಬಿಗಿಯಾದ ಕ್ರಮ ಕೈಗೊಳ್ಳುವುದು, ಮಾಧ್ಯಮಗಳು ಕನಿಷ್ಠ ನೈತಿಕ ಮೌಲ್ಯಗಳನ್ನು ಪಾಲಿಸುವಂತೆ ನಿರ್ಬಂಧಿಸುವುದು, ಸರ್ಕಾರವು ಹಗೆ ತೀರಿಸಿಕೊಳ್ಳುವ ಒಂದು ಸಾಧನವಾಗಿ ಸಿಬಿಐ ಸಂಸ್ಥೆಯನ್ನು ಬಳಕೆಮಾಡಿಕೊಳ್ಳದಂತೆ ಆ ಸಂಸ್ಥೆಯ ಮೇಲೆ ಕಡಿವಾಣ ಹಾಕುವುದು, ಯೂನಿವರ್ಸಿಟಿಗಳು, ಇತರೆ ಅಧ್ಯಯನ–ಸಂಬಂಧಿ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ಹಿಂದುತ್ವ–ಫ್ಯಾಸಿಸಂನ ಸ್ವಪ್ನಪಿಶಾಚಿಯಿಂದ ಪಾರು ಮಾಡಿ ಹಿಮ್ಮೆಟ್ಟಿಸಿ, ಈ ಸಂಸ್ಥೆಗಳು ಪುನಹ ತಮ್ಮ ಪ್ರವಚನಗಳಲ್ಲಿ ಮುಕ್ತವಾಗಿ ತೊಡಗುವ ತಾಣಗಳಾಗಿ ಮಾಡುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

ಸರ್ವಸಮಾನ ನಾಗರಿಕತ್ವದ ಭಾವನೆ

ಈ ಕಾರ್ಯಕ್ರಮಗಳ ಜೊತೆಯಲ್ಲಿ, ಗಮನಹರಿಸಬೇಕಾದ ಎರಡು ಅಂಶಗಳಿವೆ. ದಿನೇ ದಿನೇ ಉಲ್ಬಣಗೊಳ್ಳುತ್ತಿರುವ ದುಡಿಯುವ ಜನತೆಯ ಆರ್ಥಿಕ ಸಂಕಷ್ಟಗಳಿಗೆ ಪರಿಹಾರ ಒದಗಿಸುವುದು ಮತ್ತು ಸರ್ವಸಮಾನ ನಾಗರಿಕತ್ವದ ಭಾವನೆಯನ್ನು ಬಲಪಡಿಸುವುದು. ಕೊನೆಯ ಪಕ್ಷ ಐದು ಮೂಲಭೂತ ಆರ್ಥಿಕ ಹಕ್ಕುಗಳನ್ನು ಮಾನ್ಯ ಮಾಡುವ ಮೂಲಕ ಈ ಎರಡೂ ಅಂಶಗಳನ್ನು ಕಾರ್ಯಗತಗೊಳಿಸಬಹುದು – (1) ಆಹಾರದ ಹಕ್ಕು (2) ಉದ್ಯೋಗದ ಹಕ್ಕು (3) ಸಾರ್ವಜನಿಕ ನಿಧಿಯಿಂದ ಎಲ್ಲರಿಗೂ ಗುಣಮಟ್ಟದ ಉಚಿತ ಆರೋಗ್ಯ ರಕ್ಷಣೆಯ ಹಕ್ಕು (4) ಸಾರ್ವಜನಿಕ ನಿಧಿಯಿಂದ ಎಲ್ಲರಿಗೂ ಗುಣಮಟ್ಟದ ಉಚಿತ ಶಿಕ್ಷಣದ ಹಕ್ಕು (5) ವೃದ್ಧಾಪ್ಯ ವೇತನದ ಹಕ್ಕು ಮತ್ತು ಅಂಗ ವೈಕಲ್ಯದ ಸೌಲಭ್ಯಗಳು. ಈ ಎಲ್ಲ ಕ್ರಮಗಳಿಗೆ ತಗಲುವ ವೆಚ್ಚವು ಜಿಡಿಪಿಯ 10% ಗಿಂತ ಹೆಚ್ಚಾಗುವುದಿಲ್ಲ. ಮೇಲ್ತುದಿಯಲ್ಲಿರುವ 1% ಶ್ರೀಮಂತ ಕುಟುಂಬಗಳ ಮೇಲೆ 4% ಸಂಪತ್ತು ತೆರಿಗೆ ವಿಧಿಸುವ ಮೂಲಕ ಇಷ್ಟೂ ಹಣವನ್ನು ಸಂಗ್ರಹಿಸಬಹುದು. (ಭಾರತದಲ್ಲಿ, ಸಂಪತ್ತು ತೆರಿಗೆ ಈಗ ಜಾರಿಯಲ್ಲಿಲ್ಲ).

ಈ ಕ್ರಮಗಳ ಜೊತೆಗೆ, ಬೇರೆ ಬೇರೆ ವರ್ಗಗಳಿಗೆ ಸಂಬಂಧಿಸಿದ ಕ್ರಮಗಳೂ ಇರುತ್ತವೆ: ಸರಕು ಮಂಡಳಿಗಳ ವ್ಯವಹಾರಗಳಲ್ಲಿ ಮಾರುಕಟ್ಟೆ ಮಧ್ಯಪ್ರವೇಶದ ನಿರ್ವಹಣೆಯನ್ನು ಪುನಹ ಆರಂಭಿಸಬೇಕಾಗುತ್ತದೆ. ಕೃಷಿಯಲ್ಲಿ ಲಾಭದಾಯಕತೆಯನ್ನು ಪೂರ್ವಸ್ಥಿತಿಗೆ ತರಬೇಕಾಗುತ್ತದೆ. ಜೀವನಾವಶ್ಯಕ ಕನಿಷ್ಠ ಕೂಲಿಯನ್ನು ಜಾರಿಮಾಡುವಂತೆ ನಿರ್ಬಂಧಿಸಬೇಕಾಗುತ್ತದೆ. ಟ್ರೇಡ್ ಯೂನಿಯನ್ ಹಕ್ಕುಗಳನ್ನು ಬಲಪಡಿಸಬೇಕಾಗುತ್ತದೆ. ಆದರೆ, ಜಾತಿ, ಮತ, ಲಿಂಗ ಮತ್ತು ಇತರ ಗುರುತುಗಳ ಭೇದವಿಲ್ಲದೆ ಎಲ್ಲರೂ ಅನುಭೋಗಿಸುವ ಆರ್ಥಿಕ ಹಕ್ಕುಗಳ ಮೂಲಕ "ನಾಗರಿಕತ್ವ"ವನ್ನು ಬಲಗೊಳಿಸುವ ಕ್ರಮವು ಒಂದು ಅಗಾಧವಾದ ಪರಿವರ್ತನೆ ಉಂಟುಮಾಡುತ್ತದೆ. ಈ ಎಲ್ಲ ಹಕ್ಕುಗಳನ್ನು ತಕ್ಷಣವೇ ಆಚರಣೆಗೆ ತರಲಾಗದಿದ್ದರೂ, ಕೆಲವನ್ನಾದರೂ ಜಾರಿಗೊಳಿಸಬಹುದು, ಉಳಿದವನ್ನು ಕಾಲಕ್ರಮದಲ್ಲಿ ತರಬಹುದು. ತಕ್ಷಣವೇ ಕೆಲವು ಹಕ್ಕುಗಳನ್ನು ಜಾರಿಗೊಳಿಸುವುದರಿಂದ, ಇನ್ನುಳಿದ ಉದ್ದೇಶಗಳ ಈಡೇರಿಕೆಗೆ ಸಹಾಯವಾಗುತ್ತದೆ. ಉದಾ: ರಾಷ್ಟ್ರೀಯ ಆರೋಗ್ಯ ಸೇವೆ ಜಾರಿಗೊಳಿಸಿದಾಗ ಅದು ಆರೈಕೆ ಮಾಡುವ ಮತ್ತು ನೋಡಿಕೊಳ್ಳುವ ಕೆಲಸಗಳನ್ನು ಸೃಷ್ಟಿಸುತ್ತದೆ.

ಫ್ಯಾಸಿಸಂನ್ನು ಸೋಲಿಸುವ ಸಲುವಾಗಿ ▷▷▷

ಅಚ್ಛೇ ದಿನ್ ಮುಗಿಯುವ ಮೊದಲೇ ಮರೆತುಬಿಟ್ಟ

5ನೇ ಜುಮ್ಲಾ ವಾರ್ಷಿಕ, 2ನೇ ನೋಟುರದ್ಧತಿ ವಾರ್ಷಿಕ



ಹೊಸ-ಹೊಸ ನಾಮಧೇಯಗಳಿಗೆ, ಹೊಸ-ಹೊಸ ಆಚರಣೆಗಳಲ್ಲಿ ಹೊಸ ದಾಖಲೆ ಸೃಷ್ಟಿಸುತ್ತಿರುವ ಅಚ್ಛೇದಿನ್‌ವಾಲಾಗಳು ಈ ವಾರ ಎರಡು ಆಚರಣೆಗಳನ್ನು ಮಾಡಬೇಕಿತ್ತು. ಅವೆರಡನ್ನೂ ಮಾಡಿಲ್ಲ.

ಇವುಗಳಲ್ಲಿ ಮೊದಲನೆಯದ್ದು ಪ್ರತಿ ಭಾರತೀಯರ ಬ್ಯಾಂಕ್ ಖಾತೆಗೆ 15ಲಕ್ಷ ರೂ. ಜಮಾದ ಭರ್ಜರಿ ಆಶ್ವಾಸನೆ.

ಸರಿಯಾಗಿ ಐದು ವರ್ಷಗಳ ಹಿಂದೆ, ನವಂಬರ್ 7, 2013ರಲ್ಲಿ, ಆಗ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಬಿಜೆಪಿ ಘೋಷಿಸಿದ್ದ ಅವರು, ಪ್ರಧಾನ ಮಂತ್ರಿಗಳಾದರೆ, ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ವಾಪಾಸು ತರಲಾಗುತ್ತದೆ, ಅದರ ಮೊತ್ತ ಎಷ್ಟಿರುತ್ತದೆ ಎಂದರೆ ಈ ದೇಶದ ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15ಲಕ್ಷರೂ. ಜಮಾ ಮಾಡಲಾಗುತ್ತದೆ ಎಂದು ಘಂಟಾಘೋಷವಾಗಿ ಸಾರಿದರು.

ಇದು 56ಅಂಗುಲ ಎದೆಗಾರಿಕೆಯ ಘೋಷಣೆ. 30% ದಷ್ಟು ಮತದಾರರು ಅದನ್ನು ಸಂಪೂರ್ಣ ನಂಬಿದರು, ಪ್ರಧಾನ ಮಂತ್ರಿ ಮಾಡಿದರು.


ಆದ್ದರಿಂದ ಇದರ ಐದನೇ ವಾರ್ಷಿಕೋತ್ಸವವನ್ನು ಆಚರಿಸಲೇ ಬೇಕಾಗಿತ್ತು. ಆದರೆ ಆಚರಿಸಲಿಲ್ಲ.

ಇದಾಗಿ ಸರಿಯಾಗಿ ಮೂರು ವರ್ಷಗಳ ನಂತರ, ನವಂಬರ್ 8, 2016ರಂದು ಮತ್ತೊಂದು 56 ಅಂಗುಲ ಎದೆಗಾರಿಕೆಯ ಕ್ರಮ ಹೊಮ್ಮಿ ಬಂತು. 500 ರೂ. ಮತ್ತು 1000 ರೂ. ನೋಟುಗಳ ರದ್ಧತಿಯ ಮಹಾಕ್ರಮ. ನವಂಬರ್ 8ರಂದು ಅದರ ಎರಡನೇ ವಾರ್ಷಿಕೋತ್ಸವವನ್ನು ಆಚರಿಸಬೇಕಾಗಿತ್ತು. ಇದನ್ನೂ ಆಚರಿಸಲಿಲ್ಲ.

ಈ ವರ್ಷ, ಮುಂದಿನ ಸಾರ್ವತ್ರಿಕ ಚುನಾವಣೆಗಳಿಗೆ ಸಿದ್ಧತೆ ಆರಂಭವಾಗಿರುವ ಸಮಯದಲ್ಲಿ ದೀಪಾವಳಿಯ ಸಂದರ್ಭದಲ್ಲೇ ಬಂದಿರುವ ಈ ಎರಡು ಆಚರಣೆಗಳು ನಡೆಯಲೇ ಬೇಕಿತ್ತು. ಆದರೆ ನಡೆದಿಲ್ಲ.

ಕಾರಣ ಈಗ ಸ್ಪಷ್ಟ. ಬಹುಶಃ ಹಣಕಾಸು ಮಂತ್ರಿಗಳು ಮತ್ತು ಆಳುವ ಪಕ್ಷದ ವಕ್ತಾರರು ಬಿಟ್ಟು ಇತರ ಎಲ್ಲ ಬಿಜೆಪಿ ಮಂದಿಗಳಿಗೆ ಇದು ಸ್ಪಷ್ಟವಾಗಿ ಗೊತ್ತು.

ಮೊದಲನೆಯದ್ದು ಕೇವಲ ಚುನಾವಣಾ ಜುಮ್ಲಾ ಎಂದು ಅಚ್ಛೇ ದಿನ್‌ಗಳ ಒಬ್ಬ ಪ್ರಮುಖ ಮಂತ್ರಿಗಳಾಗಿರುವ ಆಳುವ ಪಕ್ಷದ ಹಿಂದಿನ ಅಧ್ಯಕ್ಷರು ಈ ಮೊದಲೇ 'ಸ್ಪಷ್ಟೀಕರಣ' ನೀಡಿದ್ದರು. ಆದ್ದರಿಂದ ಇದನ್ನು 'ಜುಮ್ಲಾ' ಯುಗಾರಂಭದ ಐದನೇ ವಾರ್ಷಿಕೋತ್ಸವವಾಗಿಯಾದರೂ ಆಚರಿಸಬೇಕಾಗಿತ್ತು.



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ಮೂರು ವರ್ಷಗಳ ನಂತರ ತಂದ ನೋಟುರದ್ದತಿಯಲ್ಲಿ ಕೂಡ ಕಪ್ಪುಹಣ ನಿರ್ಮೂಲನ ಒಂದು ಪ್ರಮುಖ ಗುರಿ ಎಂದು ಆರಂಭದಲ್ಲಿ ಸ್ವತಃ ಪ್ರಧಾನ ಮಂತ್ರಿಗಳು ಹೇಳಿದ್ದರು. ಮುಂದೆ ದಿನಕ್ಕೊಂದರಂತೆ ಹೊಸ-ಹೊಸ ಗುರಿಗಳನ್ನು ಪಡೆದುಕೊಂಡು ವ್ಯಂಗ್ಯಚಿತ್ರಕಾರರಿಗೆ ಹಬ್ಬದೂಟವಾಗಿ ಬಿಟ್ಟ ಈ ವಿಷಯದಲ್ಲಿ ಒಬ್ಬರು "ಜನಸಾಮಾನ್ಯ 15 ಲಕ್ಷ ಮರೆತೇ ಬಿಟ್ಟಿದ್ದಾನೆ, ಈಗ ಆತ 500ರ ಆಚೆ ಯೋಚಿಸಲಾರ" ಎಂದು ವ್ಯಂಗ್ಯಚಿತ್ರದಲ್ಲಿ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಒಬ್ಬ ವಿಶ್ಲೇಷಕರು ನಮ್ಮದೇ ರಾಜ್ಯದ ಹಾಸನ ಜಿಲ್ಲೆಯ 41 ವರ್ಷದ ಮಹಿಳೆ ಮೀನಾಕ್ಷಿ ಹೇಗೆ 15 ಲಕ್ಷ ಪಡೆಯಲಿಲ್ಲ ಮಾತ್ರವಲ್ಲ, ಆಕೆಯ 1.5 ಲಕ್ಷವನ್ನೂ ಕಳಕೊಂಡಳು ಎಂಬುದನ್ನು ಕೂಡ ಈ ಸಂದರ್ಭದಲ್ಲಿ ನೆನಪಿಸಿದ್ದಾರೆ(ಮಿತಾಲಿ ಅಗರ್‌ವಾಲ್, ನ್ಯೂಸ್ ಸೆಂಟ್ರಲ್, ನವಂಬರ್ 7).

ವಾಕ್‌ಶ್ರವಣ ವಿಕಲತೆಯಿರುವ ಈ ಮಹಿಳೆ ಮನೆಗೆಲಸ ಮಾಡಿ ತನ್ನ 1500ರೂ. ಆದಾಯದಲ್ಲೇ ಹಣ ಉಳಿಸಿಟ್ಟಿದ್ದಳು, ಒಂದು ಸಣ್ಣ ಸ್ವಂತ ಮನೆ ಕಟ್ಟಿಕೊಳ್ಳೋಣ ಎಂದು. 15 ವರ್ಷಗಳಲ್ಲಿ 1.39ಲಕ್ಷ ಸಂಗ್ರಹವಾಗಿತ್ತು, ಆಕೆಯ ಬ್ಯಾಂಕ್ ಖಾತೆಯಿರಲಿಲ್ಲ, ಆದ್ದರಿಂದ ನಗದು ರೂಪದಲ್ಲೇ ಮನೆಯಲ್ಲಿತ್ತು. ನೋಟು ರದ್ಧತಿಯ ಮಹಾಯಜ್ಞದ ಬಗ್ಗೆ ನಗದನ್ನು ಜಮಾ ಮಾಡುವ ಕೊನೆಯ ದಿನಾಂಕದ ನಂತರವೇ ತಿಳಿದ ಆಕೆ ಅದನ್ನು ಉಳಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಮನೆ ಕಟ್ಟಿಕೊಳ್ಳುವ ಕನಸಂತೂ ದೂರ, ನಿಷೇಧಿತ ನೋಟು ಮನೆಯಲ್ಲಿರುವುದೂ ಅಪಾಯಕಾರಿಯಾದ್ದರಿಂದ ಕೊನೆಗೆ ಅದನ್ನು ಹೇಮಾವತಿ ನದಿಗೆ ಅರ್ಪಿಸಿದಳು.

ಈಗ ನಮ್ಮ ಮಾನ್ಯ ಹಣಕಾಸು ಮಂತ್ರಿಗಳು ತಮ್ಮ ಮಾನ್ಯ ನೇತಾರರ ಕ್ರಮದ ಉದ್ದೇಶ ನೋಟುಗಳನ್ನು ಹೊರಹಾಕುವುದಾಗಿರಲಿಲ್ಲ ಎಂದು ಎಲ್ಲ ನೋಟುಗಳೂ ಒಳಬಂದ ಮೇಲೆ ಹೇಳಿದ್ದಾರೆ. ಆದರೆ ಮೀನಾಕ್ಷಿಯ 1.39ಲಕ್ಷ ರೂ, ಆಗಲೇ ಅಕ್ಷರಶಃ ನೀರು ಪಾಲಾಗಿದೆ.

ಮಿತಾಲಿ ಅಗರ್‌ವಾಲ್ ಅವರು ಈ ಮೀನಾಕ್ಷಿಯೊಂದಿಗೆ ನೋಟುರದ್ದತಿಯಿಂದಾಗಿ 15ಲಕ್ಷ ರೂ. ಅಂತೂ ಬರಲಿಲ್ಲ, ಬದಲಿಗೆ ಪ್ರಾಣವೇ ಹೋದ ಇನ್ನೂ 100ಕ್ಕೂ ಹೆಚ್ಚು ಭಾರತೀಯರನ್ನು' ಐದನೇ ಜುಮ್ಲಾ ವಾರ್ಷಿಕದಂದು ಮತ್ತು ನೋಟುರದ್ದತಿಯ ಎರಡನೇ ವಾರ್ಷಿಕದಂದು ನಮಗೆ ನೆನಪಿಸಿದ್ದಾರೆ.

ಇವರೆಲ್ಲ ಕಪ್ಪು ಹಣದ ನಿರ್ಮೂಲನೆ ಮಾಡುವ, ಭ್ರಷ್ಟಾಚಾರ ಕೊನೆಗೊಳಿಸುವ, ಭಯೋತ್ಪಾದನೆ ತೊಡೆದು ಹಾಕುವ, ಆರ್ಥಿಕವನ್ನು ಔಪಚಾರಿಕಗೊಳಿಸುವ, ತೆರಿಗೆ ಪ್ರಮಾಣವನ್ನು ಹೆಚ್ಚಿಸುವ ಮುಂತಾದ ಮಹಾಗುರಿಗಳನ್ನು ಸಾಧಿಸುವ ಮಹಾಯಜ್ಞಕ್ಕೆ ಪವಿತ್ರ ಬಲಿಗಳೆಂದೂ ' ಸಮಾಧಾನ ಪಡುವಂತಿಲ್ಲ ಎಂದು ನೋಟುರದ್ದತಿಯ ಮೊದಲ ವಾರ್ಷಿಕದ ವೇಳೆಗೇ ಸ್ಪಷ್ಟವಾಗಲಾರಂಭಿಸಿತು. ಈಗಂತೂ ಯಾರಿಗೂ ಸಂದೇಹವುಳಿದಿಲ್ಲ.

ಬದಲಾಗಿ ಈ ಅಮಾಯಕರ ಬಲಿಯೊಂದಿಗೆ ಕೃಷಿ ಮತ್ತು ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳೂ ಮತ್ತು ಅದರಿಂದ ಕೋಟ್ಯಂತರ ಬಡ ರೈತರು ಮತ್ತು ಕಾರ್ಮಿಕರ ಜೀವನಾಧಾರಗಳೂ ಬಲಿಯಾಗಿವೆ ಎಂದು ಪರಿಣಿತರು ಹೇಳುತ್ತಿದ್ದಾರೆ.

ಈ ಎರಡೂ ವಾರ್ಷಿಕಾಚರಣೆಗಳು ನಡೆಯದಿರುವುದೇ ಇದನ್ನು ಸಾಬೀತು ಮಾಡಿದೆ ಎಂದರೆ ತಪ್ಪಾದೀತೇ?

ಸಾರ್ವಜನಿಕ ವಲಯವನ್ನು ಹಿಂಡಿ ಹಿಪ್ಪೆ ಮಾಡುವ ಈ ಪರಿ!

ಸಾರ್ವಜನಿಕ ವಲಯದ ತೈಲ ಮತ್ತು ಅನಿಲ ವಲಯದ ಉದ್ದಿಮೆಗಳ 'ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ'(ಸಿಎಸ್‌ಆರ್) ಹಣದ ಬಳಕೆಯಲ್ಲಿ ಅನಿಯಮಿತತೆ ಇದೆ ಎಂದು ಆಗಸ್ಟ್ ತಿಂಗಳಲ್ಲಿ ಸಂಸತ್ತಿನಲ್ಲಿ ಮಂಡಿಸಿದ ಸಿಎಜಿ ವರದಿ ಹೇಳಿತ್ತು. ಈ ವರದಿಯ ಪ್ರಕಾರ ಒಎನ್‌ಜಿಸಿ, ಹಿಂದುಸ್ತಾನ್ ಪೆಟ್ರೋಲಿಯಂ, ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಆಯಿಲ್ ಇಂಡಿಯಾ ಅಚ್ಛೇ ದಿನ್ ಸರಕಾರದ ಹೆಮ್ಮೆಯ 'ಐಕ್ಯತೆಯ ಪ್ರತಿಮೆ'ಗೆ ಒಟ್ಟು 146.83 ಕೋಟಿ ರೂ. ಕೊಟ್ಟಿವೆ. ವಾಸತವವಾಗಿ ಅದನ್ನು ಅವುಗಳಿಂದ ಕಿತ್ತುಕೊಳ್ಳಲಾಗಿದೆಯಂತೆ. ಗುಜರಾತಿನ 14 ಸಾರ್ವಜನಿಕ ವಲಯದ ಉದ್ದಿಮೆಗಳಿಂದಲೂ 104.88 ಕೋಟಿ ರೂ. ಪಡೆಯಲಾಗಿದೆ.

ಇವೆಲ್ಲ ಬಂದಿರುವುದು ಈ ಕಂಪನಿಗಳ ಸಿಎಸ್‌ಆರ್‌ನಿಂದಲೇ. ಆದರೆ ಅನಿಯಮಿತತೆ ಇರುವುದು ಇಲ್ಲೇ. ಏಕೆಂದರೆ ಸಿಎಸ್‌ಆರ್ ಹಣದ ಬಳಕೆಗೆ ಕೆಲವು ನಿಯಮಗಳಿವೆ. ಸಾಮಾಜಿಕ ಹೊಣೆಗಾರಿಕೆಯ ಚಟುವಟಿಕೆಗಳು ಎಂಬ ಪಟ್ಟಿಯಲ್ಲಿರುವ ಚಟುವಟಿಕೆಗಳಿಗೇ ಅವನ್ನು ಬಳಸಬೇಕು. ಇದರಲ್ಲಿ ಹಸಿವು, ಬಡತನ, ಅಪೌಷ್ಟಿಕತೆ ನಿವಾರಣೆ, ಶಿಕ್ಷಣ, ಲಿಂಗ ಸಮಾನತೆಗೆ ಉತ್ತೇಜನೆ, ಗ್ರಾಮೀಣ ಅಭಿವೃದ್ಧಿಗೆ ಉತ್ತೇಜನೆ ಇತ್ಯಾದಿಗಳು ಇವೆ.

ಪ್ರತಿಮೆ ನಿರ್ಮಿಸುವುದು ಈ ಪಟ್ಟಿಯಲ್ಲಿ ಬರುವುದಿಲ್ಲ, ಅದೂ ವಿಶ್ವ ದಾಖಲೆ ನಿರ್ಮಿಸುವ ಗೀಳಿಗಾಗಿ ಪ್ರತಿಮೆ ನಿರ್ಮಿಸುವುದಂತೂ ಬರುವುದೇ ಇಲ್ಲ. ನಿಜ, ಆ ಪ್ರತಿಮೆಯ ಉದ್ಘಾಟನೆ ಮಾಡುವಾಗ ಬುಡಕಟ್ಟು ಜನಗಳು ಪ್ರತಿಭಟಿಸುತ್ತ ಕೇಳಿರುವ ಶಾಲೆ, ಆಸ್ಪತ್ರೆ ಇತ್ಯಾದಿಗಳು ಆ ಪಟ್ಟಿಯಲ್ಲಿವೆ. ಆದರೆ ಅದನ್ನು ಕೇಳಿದವರನ್ನು ಉದ್ಘಾಟನೆಯ ದಿನ ಬಂಧಿಸಿ ಜೈಲಿಗಟ್ಟಲಾಯಿತು.

ಸಿಎಜಿ ಇಂತಹ ವೆಚ್ಚಗಳನ್ನು ಸಿಎಸ್‌ಆರ್ ಎಂದು ಮಾಡುವುದು ಕಂಪನಿ ಕಾಯ್ದೆಯ ಸೆಕ್ಷನ್ 135 ಪ್ರಕಾರ ಅನಿಯಮಿತತೆಯಾಗುತ್ತದೆ ಎಂದಿದೆ. ಇದು ಈ ಕಂಪನಿಗಳ ಆಡಳಿತಕ್ಕೆ ಗೊತ್ತಿಲ್ಲವೆಂದಲ್ಲ. ಆದರೆ ಸರಕಾರವೇ ಅವುಗಳ ಕೈ ತಿರುಚುತ್ತಿದ್ದರೆ ಏನು ಮಾಡಲು ಸಾಧ್ಯ?ಸರ್ದಾರ್ ಪಟೇಲರು ಖಂಡಿತಾ ಇಂತಹ ಅಪವ್ಯಯ ಮತ್ತು ಕೈ ತಿರುಚುವುದನ್ನು ಒಪ್ಪುತ್ತಿರಲಿಲ್ಲ ಎಂದು ಭಾರತ ಸರಕಾರದ ನಿವೃತ್ತ ಕಾರ್ಯದರ್ಶಿ ಇ ಎಎಸ್ ಶರ್ಮ ಹೇಳಿದ್ದಾರೆ.

ಸಿಎಸ್‌ಆರ್ ನಿಧಿಯ ಬಳಕೆಯಲ್ಲಿ ಮಾತ್ರವಲ್ಲ, ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರೀತ್ಯರ್ಥ ಬಜೆಟ್ ಕೊರತೆಯನ್ನು ತಾನೇ ವಿಧಿಸಿಕೊಂಡ ಮಿತಿಯ ಒಳಗೇ ಇರಿಸಿಕೊಂಡು ಬೆನ್ನು ತಟ್ಟಿಕೊಳ್ಳಲು ಮತ್ತು ತನ್ನ ಬಂಡವಾಳ ಹಿಂಪಡೆತ ಗುರಿಯನ್ನು ಸಾಧಿಸಲು ಕೂಡ ಸರಕಾರ'ಇದೇ ಕೈತಿರುಚುವ ಕೆಲಸ ಮಾಡುತ್ತಿದೆ ಎಂದೂ ಹೇಳಲಾಗಿದೆ. ಈ ಉದ್ದಿಮೆಗಳು ಕಷ್ಟಪಟ್ಟು ಗಳಿಸುವ ಲಾಭಗಳಲ್ಲಿ ವಿಶೇಷ ಡಿವಿಡೆಂಡ್ ಎಂದು ಕಿತ್ತುಕೊಳ್ಳಲಾಗುತ್ತಿದೆ.

ಇದರ ಪರಿಣಾಮವೆಂದರೆ, ಈಗಾಗಲೇ ಈ ಅಂಕಣದಲ್ಲಿ ವರದಿಯಾಗಿರುವಂತೆ ಭಾರೀ ಲಾಭ ಗಳಿಸುತ್ತಿದ್ದ ಒಎನ್‌ಜಿಸಿ ಇತ್ತೀಚೆಗೆ ತನ್ನ ಕಾರ್ಮಿಕರಿಗೆ ಸಂಬಳ ಕೊಡಲೂ ಓವರ್‌ಡ್ರಾಫ್ಟ್ ಪಡೆಯಬೇಕಾಗಿ ಬಂದಿದೆ. ಈ ಪರಿಸ್ಥಿತಿ ಒಂದೊಂದಾಗಿ ಲಾಭ ಮಾಡುತ್ತಿದ್ದ ಎಲ್ಲ ಸಾರ್ವಜನಿಕ ವಲಯದ ಉದ್ದಿಮೆಗಳನ್ನೂ ವ್ಯಾಪಿಸುತ್ತಿದೆ ಎಂಬುದು 2017–18ರಲ್ಲಿ ರಾಷ್ಟ್ರೀಯ ಖಜಾನೆಗೆ ಸಿಗುವ ಡಿವಿಡೆಂಡ್ ಪ್ರಮಾಣವೇ 2014–15ರ ನಂತರ ಮೊದಲ ಬಾರಿಗೆ 10%ದಷ್ಟು ಇಳಿದಿದೆಯೆಂಬ ವರದಿಯಿಂದ ತಿಳಿದು ಬರುತ್ತಿದೆ.

ಆದರೆ ಇದರಿಂದ ಅಚ್ಛೇದಿನ್ ಮಂದಿಗೆ ಬೇಸರವಿಲ್ಲ. ಏಕೆಂದರೆ ಈ ಮೂಲಕ ಸಾರ್ವಜನಿಕ ವಲಯವನ್ನು ಧ್ವಂಸಗೊಳಿಸುವ ಗುರಿಯೂ ಈಡೇರುತ್ತಿದೆ. ಆದರೆ ಇಡೀ ವಲಯವನ್ನು ಧ್ವಂಸಮಾಡಿದ ಮೇಲೆ ಯಾರನ್ನು ಹಿಂಡುವುದು ಎಂಬ ಬಗ್ಗೆ ಅದು ಯೋಚಿಸಿದಂತಿಲ್ಲ.

▷▷▷ ವಿರೋಧ ಪಕ್ಷಗಳ ಐಕ್ಯತೆ ಸಾಧಿಸುವ ಕಾರ್ಯವು ಸೀಟು-ಹಂಚಿಕೆಗೆಗಿಂತಲೂ ಹೆಚ್ಚು ಸಂಕೀರ್ಣವಾದದ್ದು. ಮೂರು ಕಾರಣಗಳಿಂದಾಗಿ, ಈ ಕಾರ್ಯ ಸಾಧನೆಗೆ ಎಡ ಪಕ್ಷಗಳು ಮಾತ್ರ ಮುಂದಾಳತ್ವ ವಹಿಸಬಲ್ಲವು: ಮೊಲನೆಯದು, ದೇಶದ ಎಲ್ಲ ರಾಜಕೀಯ ಪಕ್ಷಗಳ ಪೈಕಿ, ಫ್ಯಾಸಿಸಂ ವಿರುದ್ಧ ಕಠೋರ ನಿಲುವು ತಳೆದು ಅದನ್ನು ದಯೆ ದಾಕ್ಷಿಣ್ಯವಿಲ್ಲದೆ ವಿರೋಧಿಸಿದ ದಾಖಲೆ ಎಡ ಪಕ್ಷಗಳಿಗೆ ಮಾತ್ರ ಇದೆ. (ಎಡ ಪಕ್ಷಗಳೇ ತಮ್ಮ ಬದ್ಧ ವೈರಿಗಳೆಂಬ ಅಂಶವನ್ನು, ತಮ್ಮನ್ನು ವಿರೋಧಿಸುವ ಎಲ್ಲರನ್ನು "ಎಡ ಪಂಥೀಯ" ಎಂದು ಅಡ್ಡ ಹೆಸರಿಡುವ ಮೂಲಕ, ಫ್ಯಾಸಿಸ್ಟರೇ ಸೂಚ್ಯವಾಗಿ ಒಪ್ಪಿಕೊಂಡಿದ್ದಾರೆ). ಎರಡನೆಯದು, ಎಡ ಪಕ್ಷಗಳು ಮಾತ್ರ ನವ-ಉದಾರವಾದ ಮತ್ತು ಫ್ಯಾಸಿಸಂ ನಡುವಿನ ಒಳ ಸಂಬಂಧಗಳನ್ನು ಗ್ರಹಿಸಿವೆ. ಅಥವಾ ತುಂಬಾ ಸಾಧಾರಣವಾಗಿ ಹೇಳುವುದಾದರೆ, ಫ್ಯಾಸಿಸಂನ ಉದಯ, ಅದರ ರಾಜಕೀಯ-ಆರ್ಥಿಕ ಆಯಾಮವನ್ನು ಅರ್ಥಮಾಡಿಕೊಂಡಿರುವುದರಿಂದ ಅವರು ಈ ಸಮಸ್ಯೆಯ ಆಳ-ಅಗಲಗಳನ್ನು ಸೀಟು-ಹಂಚಿಕೆ (ಸೀಟು-ಹಂಚಿಕೆ ಬಹಳ ಮುಖ್ಯವಾದದ್ದೇ, ಅದಲ್ಲೇನೂ ಅನುಮಾನವಿಲ್ಲ) ಆಧಾರಿತ ವಿರೋಧ ಪಕ್ಷಗಳ ಐಕ್ಯತೆಗಿಂತಲೂ ಆಚೆ ನೋಡಬಲ್ಲರು. ಮೂರನೆಯದಾಗಿ, ಏನೇ ಆಗಲಿ, ಕೊನೆಯಲ್ಲಿ, ತಾತ್ವಿಕವಾಗಿ, "ಪಕ್ಷದ ಹಿತ"ಕ್ಕಿಂತಲೂ "ಜನತೆಯ ಹಿತ"ವೇ ಎಡ ಪಕ್ಷಗಳಿಗೆ ಮುಖ್ಯವಾಗುತ್ತದೆ. ಅದಕ್ಕಾಗಿ, ತಕ್ಷಣದಲ್ಲಿ ಒದಗುವ ಲಾಭವನ್ನು ಎಡ ಪಕ್ಷಗಳು ತ್ಯಾಗಮಾಡಬಲ್ಲವು.

ನೆಲೆಗೊಂಡಿದ್ದ ಫ್ಯಾಸಿಸಂಅನ್ನು ಸೋಲಿಸುವಲ್ಲಿ ಕಮ್ಯೂನಿಸಂ ಪ್ರಧಾನ ಪಾತ್ರ ವಹಿಸಿತ್ತು. ಅದೊಂದು ಚಾರಿತ್ರಿಕ ಕೊಡುಗೆ. ಸಮಕಾಲೀನ ಫ್ಯಾಸಿಸಂಅನ್ನು ಸೋಲಿಸಲು ಮತ್ತೊಮ್ಮೆ ಕಮ್ಯೂನಿಸಂ ತನ್ನ ಚಾರಿತ್ರಿಕ ಹೊಣೆಗಾರಿಕೆಯನ್ನು ನಿರ್ವಹಿಸಬೇಕಿದೆ. ಈ ಉದ್ದೇಶಕ್ಕಾಗಿ, ಎಲ್ಲ ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ಕಮ್ಯೂನಿಸ್ಟ್ ಪಕ್ಷಗಳು ಮುಂದಾಳುತನ ವಹಿಸಬೇಕು. ಅದನ್ನು ಅವರು ಮಾಡುತ್ತಾರೆಂದು ನಾನು ನಂಬುತ್ತೇನೆ. ಈ ಚಾರಿತ್ರಿಕ ಕಾರ್ಯಬಾರವನ್ನು ನಿರ್ವಹಿಸಲು ನಿರ್ವಹಿಸುವಲ್ಲಿ ಹಿಂದೊಮ್ಮೆ ಹಿಂಜರಿದಿದ್ದರು. ಆದ್ದರಿಂದ, ಅವರು ತಮ್ಮ ಚಾರಿತ್ರಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ವಿಳಂಬ ಮಾಡುತ್ತಾರೆ ಎಂದು ಭಾವಿಸಬಾರದು. ಅಕಸ್ಮಾತ್, ಹಾಗೇನಾದರೂ ಆದರೆ, ಅದು ತನಗೆ ತಾನೇ ಮಾಡಿಕೊಂಡ ಸರಿಪಡಿಸಲಾಗದ ಹಾನಿಯಾಗುತ್ತದೆ. ಹಾಗಾಗಲಾರದು ಎಂದು ನಾನು ಭಾವಿಸುತ್ತೇನೆ. ●

ಉತ್ತರಪ್ರದೇಶದಲ್ಲಿ ಅಲಹಾಬಾದ್‌ಗೆ ಪ್ರಯಾಗರಾಜ್ ಎಂದು ಮರುನಾಮಕರಣದ ನಂತರ ಈಗ ಫೈಝಾಬಾದ್ ಅಯೋಧ್ಯಾ ಆಗಿದೆ. ಅಹಮದಾಬಾದ್ ಕರ್ಣಾವತಿ ಆಗಲಿದೆ – ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಕೇರಳದಲ್ಲಿ ಬಿಜೆಪಿ ಪಿತೂರಿಯನ್ನು ಸ್ವತಃ ಬಯಲಿಗೆ ತಂದ ರಾಜ್ಯ ಅಧ್ಯಕ್ಷರು !



"ಶಬರಿಮಲೆ ಒಂದು ಸುವರ್ಣಾವಕಾಶ. ಅದೊಂದು ಸಮಸ್ಯೆ. ಅದನ್ನು ಒಂದು ಸರಳ ರೇಖೆಯಲ್ಲಿ ಪರಿಹರಿಸುವುದು ಸಾಧ್ಯವಿಲ್ಲ. ನಾವೊಂದು ಅಜೆಂಡಾ ಮುಂದಿಡುತ್ತೇವೆ. ಬೇರೆಲ್ಲರೂ ಅದಕ್ಕೆ ತಲೆಬಾಗುತ್ತಾರೆ. ಉಳಿಯುವುದು ನಾವು, ಮತ್ತು ನಮ್ಮ ಶತ್ರುಗಳು, ಅವರ ಸರಕಾರ, ಅವರ ಶತ್ರುಗಳು" – ಇದು ಕೇರಳದ ಬಿಜೆಪಿ ಅಧ್ಯಕ್ಷ ಪಿ.ಎಸ್.ಶ್ರೀಧರನ್ ಪಿಳ್ಳೈ ಉವಾಚ. ಅಲ್ಲಿನ ಟಿವಿ ವಾಹಿನಿಗಳು ಇದರ ವೀಡಿಯೋವನ್ನು ಬಯಲು ಮಾಡಿವೆ (ದಿ ವೈರ್, ನವಂಬರ್ 5). ಕಳೆದ ತಿಂಗಳು ಐದು ದಿನಗಳ ಕಾಲ ಅಲ್ಲಿ ನಡೆದದ್ದು ಅಯ್ಯಪ್ಪ ಭಕ್ತರ ಪ್ರತಿಭಟನೆಗಳಲ್ಲ, ಬದಲಾಗಿ ಕೇಸರಿ ಪಡೆಗಳ ಧಾಂಧಲೆಗಳು ಎಂಬುದು ರಾಜಕೀಯ ವೀಕ್ಷಕರಿಗೆಲ್ಲ ಅಂದಾಜಾಗಿತ್ತು. ಈ ವೀಡಿಯೋ ಅದನ್ನು ಇನ್ನೂ ಒಪ್ಪಲು ಸಿದ್ಧವಿಲ್ಲದವರಿಗೆ ಸಾಬೀತು ಮಾಡಿದೆ.

"ನಮ್ಮ ಬಿಜೆಪಿ ಕಾರ್ಯದರ್ಶಿಗಳು ಒಂದು ಸ್ಥಳಕ್ಕೆ ಹೋಗಿದ್ದರು ಮತ್ತು ನಾವು ಮಾಡಬೇಕಾಗಿದ್ದುದನ್ನು ಯಶಸ್ವಿಯಾಗಿ ಮಾಡಿದರು. ಶ್ರೀಜಿತ್, ಐಪಿಎಸ್ ಇಬ್ಬರು ಮಹಿಳೆಯರೊಂದಿಗೆ ಹೋದಾಗ ಅವರನ್ನು ತಡೆದವರು ನಮ್ಮ ಒಬ್ಬ ಯುವಮೋರ್ಚಾ ಮುಖಂಡ. ಅವನು ಭಕ್ತರನ್ನು ಒಟ್ಟುಗೂಡಿಸಿ ಅವರನ್ನು ತಡೆದು ನಿಲ್ಲಿಸಿದ. ಇವೆಲ್ಲ ಹೊರಗಿನ ಜಗತ್ತಿಗೆ ಗೊತ್ತಿಲ್ಲ" ಎಂದು ಆತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆ ಮೂಲಕ ಇದು ಎರಡನೇ ಅಯೋಧ್ಯೆ ಸೃಷ್ಟಿಸುವ ಹುನ್ನಾರ ಎಂಬುದನ್ನು ತಾನೇ ಸಾಬೀತು ಮಾಡಿದ್ದಾರೆ.

ಅವರ ಹೆಮ್ಮೆಯ ಮಾತುಗಳು ಇಲ್ಲಿಗೇ ನಿಲ್ಲುವುದಿಲ್ಲ.

"ಮಹಿಳೆಯರನ್ನು ದೇವಸ್ಥಾನದ ಹತ್ತಿರ ಕರೆ ತಂದಾಗ ದೇವಸ್ಥಾನದ ತಂತ್ರಿ ನನಗೆ ಕರೆ ಮಾಡಿದರು. ಆತ ಆತಂಕದಲ್ಲಿದ್ದರು. ದೇವಸ್ತಾನ ಮುಚ್ಚಿ ಬಿಟ್ಟರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆಯೇ ಎಂದು ಕೇಳಿದರು. ನೀವೊಬ್ಬರೇ ಇಲ್ಲ ಮತ್ತು ಇದು ನ್ಯಾಯಾಂಗ ನಿಂದನೆಯಾಗುವುದಿಲ್ಲ ಎಂದೆ. ಒಂದು ವೇಳೆ ಕೇಸ್ ಹಾಕಿದರೂ ಅದು ನಮ್ಮ ವಿರುದ್ಧವಾಗುತ್ತದೆ, ಸಾವಿರಾರು ಜನ ಬೆಂಬಲಿಸುತ್ತಾರೆ, ಹೆದರಬೇಡಿ ಎಂದಾಗ ಅವರಿಗೆ ನಿರಾಳವಾಯಿತು."

ಆದರೆ ದೇವಸ್ಥಾನದ ತಂತ್ರಿ ತಾನು ಈ ವಿಷಯದಲ್ಲಿ ಹಿರಿಯ ತಂತ್ರಿಯನ್ನು ಮಾತ್ರ ಕೇಳಿದ್ದು ಎಂದಿದ್ದಾರೆ ಶ್ರೀಧರನ್ ಪಿಳ್ಳೈ, ತಾನೊಬ್ಬ ಅಡ್ವೊಕೇಟ್, ಕಾನೂನು ಸಲಹೆ ಕೇಳಿದವರಿಗೆ ಸಲಹೆ ಕೊಡುವ ಅಧಿಕಾರ ತನಗಿದೆ ಎಂದು ನುಣುಚಿಕೊಳ್ಳಲು ಪ್ರಯತ್ನಿಸಿದರು ಎಂದು ವರದಿಯಾಗಿದೆ.

ಈ ವೀಡಿಯೋ ಬಗ್ಗೆ ಪ್ರತಿಕ್ರಿಯಿಸುತ್ತ ರಾಜ್ಯ ದೇವಸ್ವೊಂ ಮಂತ್ರಿ ಕೆ. ಸುರೇಂದ್ರನ್ ರಾಜ್ಯ ಬಿಜೆಪಿ ಅಧ್ಯಕ್ಷರ ಹೇಳಿಕೆ ಸಮಾಜಕ್ಕೆ ಮತ್ತು ಸುಪ್ರಿಂ ಕೋರ್ಟಿಗೆ 'ಬಹಿರಂಗ ಸವಾಲು' ಹಾಕಿದೆ ಎಂದರೆ, ಕೈಗಾರಿಕಾ ಮಂತ್ರಿ ಇ.ಪಿ. ಜಯರಾಜನ್, ಈ ಪವಿತ್ರಕ್ಷೇತ್ರದಲ್ಲಿ ಗಲಭೆ ಸೃಷ್ಟಿಸಲು ಬಿಜೆಪಿ ತಂತ್ರಗಳನ್ನು ಮತ್ತು ದೇವಸ್ಥಾನದ ಇತರ ಪೂಜಾರಿಗಳನ್ನು ಬಳಸಿಕೊಂಡಿದ್ದಾರೆ ಎಂದು ಆಪಾದಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಇದೊಂದು ಗಂಭೀರ ಸಂಗತಿ, ಈ ಬಗ್ಗೆ ಮತ್ತು ಶಬರಿಮಲೆಯಲ್ಲಿ ನಡೆದಿರುವ ಎಲ್ಲ ಪಿತೂರಿಗಳ ಬಗ್ಗೆ, ಇದರಲ್ಲಿ ಬಿಜೆಪಿಯ ಪಾತ್ರದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಎಲ್‌ಡಿಎಫ್ ರಾಜ್ಯಾದ್ಯಂತ ಈ ಧಾಂದಲೆಗಳಲ್ಲಿ ಕೋಮುವಾದಿಗಳ ಪಾತ್ರವನ್ನು ಬಯಲು ಮಾಡುವ ವ್ಯಾಪಕ ಪ್ರಚಾರಾಂದೋಲನವನ್ನು ನಡೆಸುತ್ತಿದ್ದು ಕಣ್ಣೂರಿನಲ್ಲಿ ನಡೆದ ಇಂತಹ ಒಂದು ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ , ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೈಜ ಅಯ್ಯಪ್ಪ ಭಕ್ತರು ಕೇಸರಿ ಪಾರ್ಟಿಯ ಆಟವನ್ನು ಅರ್ಥಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಎಲ್ ಡಿ ಎಫ್ ಸರಕಾರ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿ ಮಾಡಬಾರದಿತ್ತು, ಅದರ ವಿರುದ್ಧ ಮರು ಪರಿಶೀಲನೆ ಅರ್ಜಿ ಹಾಕಬೇಕಿತ್ತು ಎಂಬ ವಿಚಿತ್ರ ನಿಲುವು ತಳೆದಿರುವ ಕಾಂಗ್ರೆಸ್‌ನ ಪ್ರತಿಪಕ್ಷ ಮುಖಂಡ ರಮೇಶ್ ಚೆನ್ನಿತಾಲರವರಿಗೆ ಕೂಡ ಈ ವೀಡಿಯೋ ಬಿಜೆಪಿಯ ನಿಜವಾದ ಅಜೆಂಡಾವನ್ನು ಬಯಲು ಮಾಡಿದೆ ಅನಿಸಿದೆ! ರಾಜ್ಯ ಕಾಂಗ್ರೆಸ್ ಅಧ್ಯಕ್ಷರಿಗೂ ಬಿಜೆಪಿ ಕೇರಳದಲ್ಲಿ ಇನ್ನೊಂದು ಅಯೋಧ್ಯೆಯನ್ನು ಸೃಷ್ಟಿಸುತ್ತಿದೆ ಎಂಬ ಬಗ್ಗೆ ಈ ವೀಡಿಯೋದಿಂದ ಜ್ಞಾನೋದಯವಾಗಿದೆ! ಆದರೆ "ನಾವೊಂದು ಅಜೆಂಡಾ ಮುಂದಿಡುತ್ತೇವೆ. ಬೇರೆಲ್ಲರೂ ಅದಕ್ಕೆ ತಲೆಬಾಗುತ್ತಾರೆ" ಎಂಬ ಬಿಜೆಪಿ ರಾಜ್ಯ ಅಧ್ಯಕ್ಷರ ಹೆಗ್ಗಳಿಕೆಯ ಬಗ್ಗೆ ಏನೂ ಹೇಳಿಲ್ಲ.

ಇದೀಗ ಬಿಜೆಪಿ ರಾಜ್ಯ ಅಧ್ಯಕ್ಷರ ವಿರುದ್ಧ ಕೇರಳ ಪೋಲೀಸರು ಅವರ ಭಾಷಣದ ಮೇಲೆ ಕೇಸ್ ದಾಖಲಿಸಿದ್ದಾರೆ ಎಂದು ವರದಿಯಾಗಿದೆ.

ಅಲ್ಲದೆ ಕೇರಳ ಹೈಕೋರ್ಟ್ ಶಬರಿಮಲೆಯಲ್ಲಿ ಗಲಭೆ ನಡೆಸಿದರೆಂದು ಬಂಧಿಸಲ್ಪಟ್ಟಿರುವ ಹೈಕೋರ್ಟ್ ಅಡ್ವೊಕೇಟ್ ಗೋವಿಂದ ಮಧುಸೂಧನನ್ ಎಂಬಾತನ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ, ಮೇಲ್ನೋಟಕ್ಕೆ ಆತನ ವಿರುದ್ಧ ದಾಖಲೆಗಳಿವೆ ಎಂದು ಅದು ಹೇಳಿದೆ. ಅಲ್ಲದೆ ಸುಪ್ರಿಂ ಕೋರ್ಟ್ ತೀರ್ಪಿನ ವಿರುದ್ಧ ವಿವಿಧ ಗುಂಪುಗಳ ಚಳುವಳಿಗಳು 'ನ್ಯಾಯಯುತವಾಗಿಲ್ಲ' ಎಂದು ಹೈಕೋರ್ಟ್ ಹೇಳಿರುವುದಾಗಿಯೂ ಪಿಟಿಐ ವರದಿ ಮಾಡಿದೆ.

ತಿರುವಾಂಕೂರು ದೇವಸ್ಥಾನ ಮಂಡಳಿ ಸುಪ್ರಿಂ ಕೋರ್ಟ್ ತೀರ್ಪಿನ ವಿರುದ್ಧ ಮರು ಪರಿಶೀಲನಾ ಅರ್ಜಿ ಹಾಕುವಂತೆ ನಿರ್ದೇಶಿಸಬೇಕು ಎಂಬ ಅರ್ಜಿಯನ್ನು ಕೂಡ ಕೇರಳ ಹೈಕೋರ್ಟಿನ ಪೀಠವೊಂದು ತಿರಸ್ಕರಿಸಿದೆ. ಸುಪ್ರಿಂ ಕೋರ್ಟ್ ತೀರ್ಪು ಬಂದ ನಂತರದ ಘಟನೆಗಳ ಬಗ್ಗೆ ಸರಿಯಾದ ಅಫಿಡವಿಟ್‌ನ್ನು ಸುಪ್ರಿಂ ಕೋರ್ಟ್ ಮುಂದೆ ಸಲ್ಲಿಸುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಬೇಕೆಂಬ ಅರ್ಜಿಯನ್ನು ಕೂಡ ಕೇರಳ ಹೈಕೋರ್ಟ್ ತಿರಸ್ಕರಿಸಿದೆ ಎಂದು ವರದಿಯಾಗಿದೆ.



ಲಾತೆಹಾರ್ ಲಿಂಚಿಂಗ್ ಕೇಸನ್ನು ಮುಚ್ಚಿರುವುದು ಸರಿಯಲ್ಲ ಮಾನವ ಹಕ್ಕು ಆಯೋಗಕ್ಕೆ ಬೃಂದಾ ಕಾರಟ್ ಪತ್ರ

ಮಾರ್ಚ್ 2016ರಲ್ಲಿ ಝಾರ್ಖಂಡ್‌ನ ಲಾತೆಹಾರ್‌ನಲ್ಲಿ 'ಗೋರಕ್ಷಕರು' ಎಂದೆನಿಸಿಕೊಂಡ ಕಾವಲುಕೋರರ ಪಡೆಗಳು 12ವರ್ಷದ ಬಾಲಕ ಇಮ್ತೆಯಾಜ್ ಖಾನ್ ಮತ್ತು ಆತನ ಸಂಬಂಧಿ ಎಂ. ಅನ್ಸಾರಿಯವರನ್ನು ಬಡಿದು ಸಾಯಿಸಿದ್ದರು. ಈ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಇದನ್ನು, ಮತ್ತು ಈ ಪ್ರಕರಣದಲ್ಲಿ ಪ್ರಕಟಿಸಿರುವ ಅಲ್ಪ ಪರಿಹಾರದ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಪತ್ರ ಬರೆದಿದ್ದರು. ಎರಡು ವರ್ಷಗಳ ನಂತರ ಆಯೋಗ ಈ ಕೇಸನ್ನು ಈಗ ಮುಚ್ಚಿರುವುದಾಗಿ ಕಳೆದ ವಾರ ಬೃಂದಾ ಕಾರಟ್ ಅವರಿಗೆ ಪತ್ರಮುಖೇನ ತಿಳಿಸಿದೆ. ಇದು ನ್ಯಾಯಯುತವಲ್ಲ, ಆಯೋಗ ಇವರಿಬ್ಬರ ಕುಟುಂಬಗಳಿಗೆ ನ್ಯಾಯ ನೀಡಿಲ್ಲ ಎಂದು ಬೃಂದಾ ಕಾರಟ್ ಅಸಮಾಧಾನ ವ್ಯಕ್ತಪಡಿಸಿ ಮರುಪತ್ರ ಬರೆದಿದ್ದಾರೆ.

ಈ ರೀತಿ ಕೇಸನ್ನು ಮುಚ್ಚಿರುವುದು ಅತ್ಯಂತ ನಿರಾಸೆ ಉಂಟು ಮಾಡಿರುವ ಕೆಲಸ. ಜನಜಂಗುಳಿ ಬಡಿದು ಸಾಯಿಸಿದ್ದರಿಂದ ಹತಾಶಗೊಂಡಿರುವ ಕುಟುಂಬಗಳಿಗೆ ನ್ಯಾಯಯುತ ಪರಿಹಾರ ಒದಗಿಸಿ ಕೊಡುವುದು ಖಂಡಿತವಾಗಿಯೂ ಆಯೋಗದ ಕೆಲಸ. ಈ ಕುಟುಂಬದವರು ನಾಲ್ಕು ವಾರದೊಳಗೆ ತಮ್ಮ ವರದಿಗೆ ಪ್ರತಿಕ್ರಿಯಿಸಿಲ್ಲವಾದ್ದರಿಂದ ಈ ಕೇಸನ್ನು ಮುಚ್ಚಲಾಗಿದೆ ಎಂದು ಆಯೋಗ ಹೇಳಿದೆ. ಇದು ಸರಿಯಲ್ಲ. ಸಂಬಂಧಪಟ್ಟ ಕುಟುಂಬದವರು ಪ್ರತಿಕ್ರಿಯಿಸದಿರಲು ಹಲವು ಕಾರಣಗಳಿರಬಹದು, ಅ ಕುಟುಂಬಗಳವರು ಉದ್ಯೋಗ ಅರಸಿಕೊಂಡು ಬೇರೆಡೆಗೆ ಹೋಗಿರಬಹುದು. ಇವನ್ನೆಲ್ಲ ಪರಿಗಣನೆಗೆ ತಗೊಳ್ಳದೆ, ಕೇವಲ ಇದೊಂದೇ ಕಾರಣಕ್ಕೆ ಕೇಸನ್ನು ಮುಚ್ಚಿರುವುದು ಸರಿಯಲ್ಲ ಎಂದಿರುವ ಬೃಂದಾ ಕಾರಟ್ ಅವರು ಆಯೋಗವೇ ಈ ಕುರಿತ ವರದಿಯನ್ನು ಸಂಬಂಧಪಟ್ಟ ಕುಟುಂಬಗಳಿಗೆ ತಲುಪಿಸಲು ಎರಡು ವರ್ಷಗಳನ್ನು ತಗೊಂಡಿರುವಾಗ ನಾಲ್ಕು ವಾರಗಳಲ್ಲಿ ಉತ್ತರಿಸಬೇಕೆಂದು ನಿರೀಕ್ಷಿಸುವುದು ನ್ಯಾಯವಲ್ಲ, ಅಲ್ಲದೆ ಝಾರ್ಖಂಡ್ ಸರಕಾರ ಕೊಡುತ್ತೇನೆಂದಿರುವ ಜುಜುಬಿ 1 ಲಕ್ಷ ರೂ. ಪರಿಹಾರವನ್ನು ಹೆಚ್ಚಿಸಬೇಕು ಎಂದೂ ಮಾನವ ಹಕ್ಕುಗಳ ಆಯೋಗ ಹೇಳದಿರುವುದು ಆಘಾತಕಾರಿ ಎಂದು ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ಬೃಂದಾ ಅವರು ಹೇಳಿದ್ದಾರೆ.

ಆದ್ದರಿಂದ ಈ ವಿಷಯವನ್ನು ಮರುಪರಿಶೀಲಿಸಿ ಸಂತ್ರಸ್ತ ಕುಟುಂಬಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ಮತ್ತು ನ್ಯಾಯ ಒದಗಿಸಬೇಕು ಎಂದು ಬೃಂದಾ ಕಾರಟ್ ಮಾನವ ಹಕ್ಕು ಆಯೋಗವನ್ನು ಈ ಪತ್ರದಲ್ಲಿ ವಿನಂತಿಸಿದ್ದಾರೆ.

"ಶಬರಿಮಲೆ : ಬಿಜೆಪಿ ಅಧ್ಯಕ್ಷರ 'ಸಾಂವಿಧಾನಿಕ ದುರ್ವರ್ತನೆ' ವಿರುದ್ಧ ಕ್ರಮ ಕೈಗೊಳ್ಳಿ"

ಸಂಬಂಧಿತ ಸಾಂವಿಧಾನಿಕ ಸಂಸ್ಥೆಗಳಿಗೆ ನಿವೃತ್ತ ಐಎಎಸ್, ಐಎಫ್‌ಎಸ್ ಅಧಿಕಾರಿಗಳ ಆಗ್ರಹ

49 ನಿವೃತ್ತ ಪ್ರತಿಷ್ಠಿತ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಕಣ್ಣೂರಿನಲ್ಲಿ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಭಾಷಣದಲ್ಲಿ ಸುಪ್ರಿಂ ಕೋರ್ಟಿನ ಅಧಿಕಾರವನ್ನು ಪ್ರಶ್ನಿಸಿರುವುದು ಮತ್ತು ಒಂದು ಚುನಾಯಿತ ಸರಕಾರವನ್ನು ಉರುಳಿಸುವ ಪರೋಕ್ಷ ಬೆದರಿಕೆ ಹಾಕಿರುವುದು "ಆತಂಕ ಉಂಟು ಮಾಡುವಂತದ್ದು" ಎಂದು ಒಂದು ಸಾರ್ವಜನಿಕ ಅಪೀಲಿನಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಸುಪ್ರಿಂ ಕೋರ್ಟ್ ಜಾರಿಗೆ ತರಬಲ್ಲ ತೀರ್ಪುಗಳನ್ನಷ್ಟೇ ನೀಡಬೇಕು ಮತ್ತು ಅದನ್ನು ಜಾರಿಗೆ ತರುತ್ತಿರುವುದಕ್ಕಾಗಿ ರಾಜ್ಯಸರಕಾರವನ್ನು ಬೆದರಿಸುವ ಹೇಳಿಕೆಗಳನ್ನು ಕೇಂದ್ರದಲ್ಲಿನ ಪ್ರಧಾನ ಆಳುವ ಪಕ್ಷದ ಅಧ್ಯಕ್ಷರು ಕೊಡುತ್ತಿರುವುದು ಭೀತಿಯುಂಟು ಮಾಡುವ ಸಂಗತಿ ಎಂದು ಅವರು ಹೇಳಿದ್ದಾರೆ. ರಾಜಕೀಯ ಕಥನಗಳ ಮಟ್ಟ ಪ್ರತಿದಿನ ಕೇಳಕ್ಕೆ ಹೋಗುತ್ತಿರುವ ಪ್ರಸಕ್ತ ಸಮಯದಲ್ಲಿಯೂ ಇಂತಹ ಮಾತುಗಳೇಕೆ ಎಂದು ಅರ್ಥವಾಗುತ್ತಿಲ್ಲ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ನ್ಯಾಯಾಂಗ ತೀರ್ಪಿನ ಬಗ್ಗೆ ಕಟು ವಿಮರ್ಶಾತ್ಮಕ ಅಭಿಪ್ರಾಯ ತಿಳಿಸುವುದು ಒಬ್ಬ ವ್ಯಕ್ತಿಯ ಹಕ್ಕಿನ ವ್ಯಾಪ್ತಿಗೆ ಬರುತ್ತದೆ. ಇಂತಹ ಸಂದರ್ಭದಲ್ಲಿ ದೂರು ದಾಖಲಿಸಲು, ಅದಕ್ಕೆ ಪರಿಹಾರ ಪಡೆಯಲು ಸೂಕ್ತ ಪ್ರಕ್ರಿಯೆಗಳಿವೆ. ಆದರೆ ಅದಕ್ಕಾಗಿ ಬೀದಿ ಕಾರ್ಯಾಚರಣೆಯ ಅಥವ ಕೇಂದ್ರದ ಕಾರ್ಯಾಂಗದ ಪ್ರತಿಕೂಲ ಕಾರ್ಯಾಚರಣೆಯ ಬೆದರಿಕೆ ಹಾಕುವ ಹಕ್ಕು ಯಾವುದೇ ವ್ಯಕ್ತಿ, ಗುಂಪು ಅಥವ ರಾಜಕೀಯ ಪಕ್ಷಕ್ಕೆ ಇಲ್ಲ ಎಂದು ಅವರು ಈ ಸಾರ್ವಜನಿಕ ಮನವಿಯಲ್ಲಿ ಹೇಳಿದ್ದಾರೆ.

ಆಳುವ ಪಕ್ಷ ಅಧ್ಯಕ್ಷರ ಈ ಸಾರ್ವಜನಿಕ ಭಾಷಣ ಒಂದು ಸಾಂವಿಧಾನಿಕ ದುರ್ವರ್ತನೆಯಾಗುತ್ತದೆ, ಅದನ್ನು ಗಮನಿಸದೇ ಹೋದರೆ ರಾಷ್ಟ್ರೀಯ ರಾಜಕಾರಣದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ ಎಂದಿರುವ ಈ ಹಿರಿಯ ಪ್ರತಿಷ್ಠಿತ ಅಧಿಕಾರಿಗಳು ಈ ಮನವಿ ಮಾಡಿಕೊಂಡಿದ್ದಾರೆ:

1. ಭಾರತದ ಚುನಾವಣಾ ಆಯೋಗ ಕೇಂದ್ರದ ಪ್ರಧಾನ ಆಳುವ ಪಕ್ಷದಿಂದ ಅಗತ್ಯ ವಿವರಣೆಗಳನ್ನು ಕೇಳಬೇಕು, ಆನಂತರ ಸಂವಿಧಾನದ ಪಾವಿತ್ರ್ಯತೆಯನ್ನು ರಕ್ಷಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು;
2. ಸರಕಾರದ ಮುಖ್ಯಸ್ಥರಾಗಿರುವ ಪ್ರಧಾನ ಮಂತ್ರಿಗಳು ಪಕ್ಷದ ಅಧ್ಯಕ್ಷರಿಗೆ ಸೂಕ್ತ ಸಲಹೆಯನ್ನು ನೀಡಬೇಕು, ಮತ್ತು ಈ ಭಾಷಣಕ್ಕೆ ಕಾರ್ಯಾಂಗದ ಬೆಂಬಲ ಇಲ್ಲ ಎಂದು ದೃಢವಾಗಿ ಪ್ರತ್ಯೇಕಿಸಿಕೊಳ್ಳಬೇಕು;
3. ಸುಪ್ರಿಂ ಕೋರ್ಟ್, ಸಾರ್ವಜನಿಕ ವೇದಿಕೆಯಲ್ಲಿ ಇಂತಹ ದಾರ್ಷ್ಟ್ಯದ ಮಾತುಗಳನ್ನು ತಾನೇ ಗಮನಕ್ಕೆ ತಗೊಂಡು ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು, ಮತ್ತು
4. ರಾಷ್ಟ್ರಪತಿಗಳು ಸಾಂವಿಧಾನಿಕ ಘನತೆ ಇಟ್ಟುಕೊಳ್ಳುವಂತೆ ಸಂಬಂಧಪಟ್ಟ ಎಲ್ಲರಿಗೆ ಗಂಭೀರ ಸಲಹೆ ನೀಡಬೇಕು ಮತ್ತು ಅದರ ಉಲ್ಲಂಘನೆಗೆ ಸರಿಪಡಿಕೆ ಕ್ರಮವನ್ನು ಜಾರಿಗೆ ತರಬೇಕು.

‘ಗೆಲ್ಲಬಹುದಾದ ಪರಮಾಣು ಯುದ್ಧ”ದ ನಂಬಿಕೆಗೆ ಮರಳಿ ಜೀವ ತುಂಬಲು ಟ್ರಂಪ್ ಮತ್ತು ಬೋಲ್ಟನ್ ರಿಂದ ಪ್ರಯತ್ನ

ಜಗದ ಸುತ್ತ
ನಾಗರಾಜ ನಂಜುಂಡಯ್ಯ

ಐ.ಎನ್.ಎಫ್ (ಅಂದರೆ ಇಂಟರ್ ಮೀಡಿಯೆಟ್–ನ್ಯೂಕ್ಲಿಯರ್ ಪೋರ್ಸ್ಸ್ – ಅಂದರೆ ಮಧ್ಯಂತರ–ಶ್ರೇಣಿಯ ಪರಮಾಣು ಪಡೆ) ಒಪ್ಪಂದದಿಂದ ಅಮೆರಿಕವು ಹಿಂದೆ ಸರಿಯುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಕಟಿಸಿದ್ದಾರೆ. ಇದರಿಂದ ಜಗತ್ತಿನ ಅನೇಕ ರಾಷ್ಟ್ರಗಳು ಆತಂಕಕ್ಕೆ ಒಳಗಾಗಿದ್ದಾರೆ. ಮಾತ್ರವಲ್ಲದೆ, 80ರ ದಶಕದಲ್ಲಿ ಸೋವಿಯತ್ ಯೂನಿಯನ್ ಮತ್ತು ಯು.ಎಸ್ ಮಧ್ಯೆ ಏರ್ಪಟಿದ್ದ "ಪರಮಾಣು ನಿರಸ್ತ್ರೀಕರಣ" ಒಪ್ಪಂದದ ರೂಪುರೇಷೆಯ ವಿನ್ಯಾಸವನ್ನೇ ಇದೀಗ ಟ್ರಂಪ್ ಉಲಂಘನೆ ಮಾಡುತ್ತಿದ್ದಾರೆ. ಐ.ಎನ್.ಎಫ್ ಒಪ್ಪಂದವನ್ನೇ ಸಂಪೂರ್ಣ ವಿನಾಶಗೊಳಿಸಲು ಹೊರಟಿದೆ ಎನ್ನುತ್ತಾರೆ ಡಾ.ರಘುನಂದನ್ ರವರು.

ಐ.ಎನ್.ಎಫ್ ಒಪ್ಪಂದವು 1987 ರಲ್ಲಿ ಅಂದಿನ ಅಧ್ಯಕ್ಷರಾಗಿದ್ದ ರೊನಾಲ್ಡ್ ರೇಗನ್ ಮತ್ತು ಸೋವಿಯೆಟ್ ಒಕ್ಕೂಟದ ಅಧ್ಯಕ್ಷರಾಗಿದ್ದ ಮಿಖಾಯಿಲ್ ಗೋರ್ಬಚೇವ್ ನಡುವೆ ಆಗಿತ್ತು. ಈ ಐತಿಹಾಸಿಕ ಒಪ್ಪಂದದ ಪರಿಣಾಮವಾಗಿ ಇಲ್ಲಿಯವರೆಗೂ ಸುಮಾರು 2700 ಕ್ಕೂ ಹೆಚ್ಚು ಪರಮಾಣು ಕ್ಷಿಪಣಿಗಳನ್ನು ನಾಶಪಡಿಸಲಾಗಿದೆ. ಇದು ಶಾಂತಿಯ ಪ್ರಕ್ರಿಯೆಯಲ್ಲಿ ಪ್ರಮುಖವಾದ ಆಶಾದಾಯಕ ಬೆಳವಣಿಗೆಯಾಗಿತ್ತು.

ಇದರೊಂದಿಗೆ, ಟ್ರಂಪ್ ಆಡಳಿತವು 2010 ರ ಹೊಸ ವ್ಯೂಹಾತ್ಮಕ ಶಸ್ತ್ರಾಸ್ತ್ರಗಳ ಕಡಿತದ ಒಪ್ಪಂದ (ನ್ಯೂ ಸ್ಟ್ರಾಟೆಜಿಕ್ ಆರ್ಮ್ಸ್ ರಿಡಕ್ಷನ್ ಟ್ರೀಟಿ – ನ್ಯೂ ಸ್ಟಾರ್ಟ್) ಒಪ್ಪಂದದಿಂದಲೂ ಹೊರಬರುವ ಸೂಚನೆಯನ್ನು ರವಾನಿಸಿದೆ. ಈ ಒಪ್ಪಂದವು "ಪರಮಾಣು ಸಿಡಿತಲೆ"ಗಳ ಸಂಖ್ಯೆಯನ್ನು ಮಿತಗೊಳಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿತ್ತಾ ಬಂದಿದೆ. ಪರಮಾಣು ಶಸ್ತ್ರಾಸ್ತ್ರಗಳ ಹತೋಟಿಯನ್ನು ನಿಯಂತ್ರಿಸಲು ಪ್ರಸ್ತುತವಿದ್ದ ಒಂದೇ ಒಂದು ಒಪ್ಪಂದ ಈ ನ್ಯೂ ಸ್ಟಾರ್ಟ್ ಆಗಿತ್ತು. ಈ ಒಪ್ಪಂದವನ್ನು ವಿಸ್ತರಿಸದಿದ್ದರೆ, ಇದು 2021 ಕ್ಕೆ ತಾನಾಗಿಯೇ ಕೊನೆಗೊಳ್ಳುತ್ತದೆ.

ಟ್ರಂಪ್ ಅಧ್ಯಕ್ಷರಾದ ನಂತರ, ಹಲವಾರು ಒಪ್ಪಂದಗಳಿಂದ ಹೊರ ಬರುತ್ತಿರುವುದು, ಅವರಿಗೆ ಚೆಲ್ಲಾಟವಾಗಿ ಬಿಟ್ಟಿದೆ. ಉದಾಹರಣೆಗೆ, ಹವಾಮಾನ ಬದಲಾವಣೆಯ ಪ್ಯಾರಿಸ್ ಒಪ್ಪಂದದಿಂದ ಆಚೆ ಬಂದ್ದಿದ್ದು, ಹಾಗೆಯೇ, ಇರಾನ್ ನೊಂದಿಗಿನ ನ್ಯೂಕ್ಲಿಯರ್ ಒಪ್ಪಂದದಿಂದ ಏಕ ಪಕ್ಷೀಯವಾಗಿ ಹೊರ ಬಂದಿದ್ದಾರೆ. ಹೊಸ ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಎನ್ ಬೋಲ್ಟನ್ ಬಂದ ನಂತರ ವಂತೂ ವಿಪರೀತವಾಗಿ ವಿಶ್ವಸಂಸ್ಥೆಯ ಎಲ್ಲಾ ನೀತಿ–ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎನ್ನಲಾಗಿದೆ. 90ರ ದಶಕದಲ್ಲಿನ ವಿಶ್ವದ ಏಕಮಾತ್ರ ಸೂಪರ್ ಪವರ್ ಗಿರಿಯನ್ನು ಮರಳಿ ಪ್ರತಿಷ್ಠಾಪನೆ ಮಾಡುವ ಬಯಕೆಯನ್ನು ಯು.ಎಸ್. ಹೊಂದಿದೆ ಎನ್ನಲಾಗಿದೆ. 2002 ರಲ್ಲಿ ಜಾರ್ಜ್ ಬುಷ್ ಅಧ್ಯಕ್ಷ ರಾಗಿದ್ದಾಗ ಅಮೆರಿಕಾ ವು ಕ್ಷಿಪಣಿ ವಿರೋಧಿ (ಎ.ಬಿ.ಎಂ. – ಆಂಟೀ ಬ್ಯಾಲಿಸ್ಟಿಕ್ ಮಿಸ್ಸೈಲ್) ಒಪ್ಪಂದದಿಂದ ನಿರ್ಗಮಿಸಿತ್ತು ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳ ಬೇಕಾಗುತ್ತದೆ.

ಬೋಲ್ಟನ್ ರ ಮೆಚ್ಚಿನ ಕಾಲಕ್ಷೇಪ

ಪ್ರಸ್ತುತ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್.ಎಸ್.ಎ.). ಜಾನ್ ಎನ್.ಬೋಲ್ಟನ್ ರವರ ಸಲಹೆ ಮೇರೆಗೆ ಟ್ರಂಪ್ ಆಡಳಿತವು, ನಿರಸ್ತ್ರೀಕರಣ ಕ್ರಮಗಳನ್ನೆಲ್ಲಾ ಎಸೆಯುವ ಕೆಲಸಕ್ಕೆ ಕೈ ಹಾಕಿದೆ. ಇದು ಬೋಲ್ಟನ್ ರ ಮೆಚ್ಚಿನ ಕಾಲಕ್ಷೇಪವಾಗಿದೆ. ಇದು ಎ.ಬಿ.ಎಂ ಒಪ್ಪಂದದಿಂದ ಮೊದಲು ಗೊಂಡು, ಹಿಂದಿನ ಉತ್ತರ ಕೊರಿಯಾದ ಪರಮಾಣು ಒಪ್ಪಂದ ವರೆಗೆ ಹಲವು ಒಪ್ಪಂದಗಳಿಂದ ಹೊರ ಬಂದಿದ್ದು, ಇರಾನ್ ನೊಂದಿಗಿನ ಪರಮಾಣು ಒಪ್ಪಂದದಿಂದ

ಅಮೆರಿಕ ಒಪ್ಪಂದಗಳಿಂದ ಹೊರ ಬರಲು ನೀಡಿರುವ ಕಾರಣಗಳು ತುಂಬಾ ದುರ್ಬಲವಾಗಿವೆ. ಅದು ಎ.ಬಿ.ಎಂ ಅಥವಾ ಐ.ಎನ್.ಎಫ್ ಅಥವಾ ಇರಾನ್ ಯೊಂದಿಗಿನ ನ್ಯೂಕ್ಲಿಯರ್ ಒಪ್ಪಂದ – ಎಲ್ಲವುಗಳ ಬಗೆಗೂ ನಿಜ. ಒಟ್ಟಾರೆಯಾಗಿ ಈ ಎಲ್ಲಾ ಕಾರಣಗಳನ್ನು ಗಂಭೀರವಾಗಿ ಪರಿಶೀಲಿಸಿ ನೋಡಿದಾಗ, ಏಕಪಕ್ಷೀಯ ನಿಲುವುಗಳನ್ನು ಅಮೆರಿಕ ತೆಗೆದು ಕೊಳ್ಳುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಅಮೆರಿಕ ವಿಶ್ವದಲ್ಲಿ ಒಂದು ಸರ್ವೋಚ್ಚ ಶಕ್ತಿ ಮತ್ತು ಇತರರು ತನ್ನ ಅಧೀನದಲ್ಲಿ ಇರಬೇಕೆಂಬುದು ಮಾಡುತ್ತಿರುವ ಪ್ರಯತ್ನವಾಗಿದೆ. ಆದ್ದರಿಂದ ಪರಮಾಣು ಶಸ್ತ್ರಸಜ್ಜಿತ ಶಕ್ತಿಗಳ ರಾಷ್ಟಗಳ ನಡುವಿನ ಯುದ್ಧಗಳಲ್ಲಿ ಯಾರೂ ಗೆಲ್ಲುವುದು ಅಸಾಧ್ಯವೆಂಬ ಧೋರಣೆ ಮೇಲೆ ಆಧಾರಿತವಾಗಿದ್ದ, ಎಲ್ಲಾ ಪರಮಾಣು ಶಸ್ತ್ರಾಸ್ತ್ರ ನಿಯಂತ್ರಣಾ ಒಪ್ಪಂದಗಳನ್ನು ನಾಶಪಡಿಸಲು ಪ್ರಯತ್ನಿಸುತ್ತಿದೆ.



ಏಕ ಪಕ್ಷೀಯವಾದ ಹೊರ ನಡೆ, ಐ.ಎನ್.ಎಫ್. ಟ್ರೀಟಿ ಯಿಂದ ವಾಪಸ್ಸಾತಿ – ಇವೆಲ್ಲಾ ಬೋಲ್ಟನ್ ರ ಮಾತು ಯು.ಎಸ್. ಆಡಳಿತದಲ್ಲಿ ನಡೆಯುತ್ತದೆ ಎಂಬುದಕ್ಕೆ ಸಾಕ್ಷಿಯಾಗಿವೆ.

ಅಮೆರಿಕದ ಪರಮಾಣು ಪಡೆಗಳ ಮೇಲೆ ಯಾವುದೇ ನಿರ್ಬಂಧ ಇರಬಾರದು ಎಂದು ಬೋಲ್ಟನ್ ವಾದಿಸುತ್ತಾರೆ. ಅಮೆರಿಕ ಅಸಾಧಾರಣವಾದ ಸಾಮ್ರಾಜ್ಯಶಾಹಿ ದೇಶ. ಇಡೀ ವಿಶ್ವದ ಮೇಲೆ ಅದರ ಯಜಮಾನಿಕೆಯ ಪ್ರತಿಷ್ಠಾಪನೆ ಅದರ ಏಕೈಕ ಗುರಿ. ಅದರಂತೆಯೇ ತನ್ನ ಪರಮಾಣು ಪ್ರಾಬಲ್ಯವನ್ನು ಜಗತ್ತಿನಾದ್ಯಂತ ಅದು ಹೊಂದಿದೆ. ಇದು ಟ್ರಂಪ್ ನ ವ್ಯೂಹಾತ್ಮಕ ಭಾಗದ ಮೊದಲ ನೀತಿಯಾಗಿದೆ. ಇದು ಬೋಲ್ಟನ್ ಬರ ಕೂಗಾಗಿದ್ದು, ಇದಕ್ಕೆ ಟ್ರಂಪ್ ರ ಸಂಪೂರ್ಣ ಬೆಂಬಲವಿದೆ. ಇವರಿಬ್ಬರೂ ಅಮೆರಿಕವು ತನ್ನ ಸೈನ್ಯದ ನೆಲೆ ಹೊಂದಿರುವ ಎಲ್ಲಾ ವಲಯಗಳಲ್ಲಿ ಪರಮಾಣು ಯುದ್ಧವನ್ನು ಗೆಲ್ಲಬಹುದೆಂಬ ತಮ್ಮ ದೃಷ್ಟಿ ಕೋನವನ್ನು ಯು.ಎಸ್., ಕಾಂಗ್ರೆಸ್ ನಲ್ಲಿ ಪ್ರತಿಪಾದಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಯುಎಸ್ ತನ್ನ ಶಕ್ತಿ– ಸಾಮರ್ಥ್ಯವನ್ನು ಮತ್ತಷ್ಟು ವೃದ್ಧಿಸಿ ಕೊಳ್ಳಲು ಪ್ರಯತ್ನಿಸುತ್ತಿದೆ. ಆಗ ರಷ್ಯಾ ಮತ್ತು ಚೀನಾ ದೇಶಗಳಲ್ಲಿ ತನ್ನ ಪ್ರಾಬಲ್ಯ ಸಾಧಿಸಬಹುದು ಎಂಬ ಅಂದಾಜನ್ನು ಟ್ರಂಪ್–ಬೋಲ್ಟನ್ ಇಬ್ಬರು ಮಾಡಿದ್ದಾರೆ. ಆದ್ದರಿಂದ ಎಲ್ಲಾ ಬಗೆಯ ಪರಮಾಣು ಒಪ್ಪಂದಗಳನ್ನು ಕಳಚಿ ಹಾಕಲಾಗುತ್ತಿದೆ.

ಮೇಲೆ ಪ್ರಸ್ತಾಪಿಸಿದ ಎಲ್ಲಾ ಪ್ರಕರಣಗಳಲ್ಲಿಯೂ, ಅಮೆರಿಕ ಒಪ್ಪಂದಗಳಿಂದ ಹೊರ ಬರಲು ನೀಡಿರುವ ಕಾರಣಗಳು ತುಂಬಾ ದುರ್ಬಲವಾಗಿವೆ. ಅದು ಎ.ಬಿ.ಎಂ. ಅಥವಾ ಐ.ಎನ್.ಎಫ್ ಅಥವಾ ಇರಾನ್ ಯೊಂದಿಗಿನ ನ್ಯೂಕ್ಲಿಯರ್ ಒಪ್ಪಂದ – ಎಲ್ಲವುಗಳ ಬಗೆಗೂ ನಿಜ. "ಇವೆಲ್ಲಾ ನಮ್ಮ ಹಿಂದಿನ ಆಡಳಿತದ ಕೆಟ್ಟದಾದ ಒಪ್ಪಂದಗಳು, ಆದ್ದರಿಂದ ಈ ಒಪ್ಪಂದಗಳನ್ನು ಪ್ರಸ್ತುತ ನಮ್ಮ ಆಡಳಿತ ಪಾಲಿಸಲು ಸಾಧ್ಯವಿಲ್ಲ.” ಎಂಬ ಸಬೂಬು ನೀಡಲಾಗಿದೆ. ಒಟ್ಟಾರೆಯಾಗಿ ಈ ಎಲ್ಲಾ ಕಾರಣಗಳನ್ನು ಗಂಭೀರವಾಗಿ ಪರಿಶೀಲಿಸಿ ನೋಡಿದಾಗ, ಏಕಪಕ್ಷೀಯ ನಿಲುವುಗಳನ್ನು ಅಮೆರಿಕ ತೆಗೆದು ಕೊಳ್ಳುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಅಮೆರಿಕ ವಿಶ್ವದಲ್ಲಿ ಒಂದು ಸರ್ವೋಚ್ಚ ಶಕ್ತಿ ಮತ್ತು ಇತರರು ತನ್ನ ಅಧೀನದಲ್ಲಿ ಇರಬೇಕೆಂಬುದು ಮಾಡುತ್ತಿರುವ ಪ್ರಯತ್ನವಾಗಿದೆ. ಪರಮಾಣು ಶಸ್ತ್ರಸಜ್ಜಿತ ಶಕ್ತಿಗಳ ರಾಷ್ಟಗಳ ನಡುವಿನ ಯುದ್ಧಗಳಲ್ಲಿ ಯಾರೂ ಗೆಲ್ಲುವುದು ಅಸಾದ್ಯವೆಂಬ ಧೋರಣೆ ಮೇಲೆ ಆಧಾರಿತವಾಗಿದ್ದ, ಎಲ್ಲಾ ಪರಮಾಣು ಶಸ್ತ್ರಾಸ್ತ್ರ ನಿಯಂತ್ರಣಾ ಒಪ್ಪಂದಗಳನ್ನು ನಾಶಪಡಿಸಲು ಪ್ರಯತ್ನಿಸುತ್ತಿದೆ.

ಐ.ಎನ್.ಎಫ್ ಒಪ್ಪಂದದ ಸಾಧನೆಗಳು

ಐ.ಎನ್.ಎಫ್. ಒಪ್ಪಂದವು ಭೂಮಿ ಆಧಾರಿತ ಕ್ಷಿಪಣಿ ವ್ಯವಸ್ಥೆ ಗಳಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು, ವಾಯು ಅಥವಾ ಸಮುದ್ರ ದಲ್ಲಿ ಇದಕ್ಕೆ ಸಮನಾದ ಕ್ಷಿಪಣಿ ಗಳಿಗೆ ಅನ್ವಯವಾಗುವುದಿಲ್ಲ. ಇದು ಸುಮಾರು 500–5,500 ಕಿ.ಮೀ ವ್ಯಾಪ್ತಿಯ ಸಾಮರ್ಥ್ಯ ಹೊಂದಿರುವ ಕ್ಷಿಪಣಿಗಳಿಗೆ ಅನ್ವಯವಾಗುತ್ತದೆ. 70 ಮತ್ತು 80ರ ದಶಕ ಗಳಲ್ಲಿ, ಭೂ–ಆಧಾರಿತ ಪರಮಾಣು ಕ್ಷಿಪಣಿ ಗಳ ಪೈಪೋಟಿಯ ಕ್ಷೇತ್ರವಾಗಿ ಯೂರೋಪ್ ಗೆ ಮಾತ್ರ ಐ.ಎನ್.ಎಫ್. ಒಪ್ಪಂದ ಕೇಂದ್ರೀಕೃತವಾಗಿತ್ತು. ಯು.ಕೆ., ಪ್ರಾನ್ಸ್ ಮತ್ತು ಚೀನಾ ದಂತಹ ದೇಶಗಳು ಈ ಐ.ಎನ್.ಎಫ್ ಒಪ್ಪಂದದಲ್ಲಿ ಒಳಗೊಂಡಿರಲಿಲ್ಲ. ಮೊದಲೆ ಪ್ರಸ್ತಾಪಿಸಿರುವಂತೆ 2700 ಕ್ಷಿಪಣಿ ಗಳ ನಾಶಗೊಳಿಸುವಿಕೆ ಈ ಒಪ್ಪಂದದ ಹಿಂದಿರುವ ಸಾಧನೆಯಾಗಿದೆ. ಅದೇ ರೀತಿ, ಯುಎಸ್ ಮತ್ತು ರಷ್ಯಾಗಳ ನಡುವಿನ ಯುದ್ಧ ತಂತ್ರದ ಪರಮಾಣು ಶಸ್ತ್ರಾಸ್ತ್ರಗಳನ್ನು ಅಥವಾ ಅಲ್ಪ ವ್ಯಾಪ್ತಿಯ ಪರಮಾಣು ಶಸ್ತ್ರಾಸ್ತ್ರಗಳನ್ನು ಕಡಿಮೆ ಅಥವಾ ಸೀಮಿತಗೊಳಿಸುವಲ್ಲಿಯೂ ಐ ಎನ್ ಎಫ್ ಒಪ್ಪಂದದ ಸಾಧನೆಯನ್ನು ಮರೆಮಾಚಲಾಗದು.

ರಷ್ಯಾ ಮತ್ತು ಚೀನಾ ಮೇಲಿನ ಸುಳ್ಳು ಆರೋಪ

ರಷ್ಯಾವು 1987 ರ ಐ.ಎನ್.ಎಫ್. ಒಪ್ಪಂದವನ್ನು ಉಲಂಘಿಸಿದೆ ಎಂಬ ಸುಳ್ಳು ಆರೋಪಗಳನ್ನು ಹಾಕಿ, ತನ್ನ ಹೊರ ಬರುವಿಕೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದೆ. ಮಾತ್ರವಲ್ಲದೆ ಚೀನಾವು ಪರಮಾಣು ಶಸ್ತ್ರಾಸ್ತ್ರಗಳ ಸಾಮಾರ್ಥ್ಯವನ್ನು ವೃದ್ದಿಸಿಕೊಳ್ಳುತ್ತಿದೆ. ಇದು ಅಮೆರಿಕಾಕ್ಕೆ ಬೆದರಿಕೆ ಒಡ್ಡುತ್ತಿದೆ ಎಂಬ ಆರೋಪಗಳನ್ನು ಚೀನಾದ ಮೇಲೆ ಹೊರಿಸಿದೆ. ಈ ಎರಡೂ ದೇಶಗಳು ಈ ಆರೋಪಗಳನ್ನು ಸಾರಾಸಗಟಾಗಿ ತಿರಸ್ಕರಿಸಿವೆ.

ಈ ಆರೋಪಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಮಾಹಿತಿಯನ್ನು ಒದಗಿಸಲು ಅಮೆರಿಕ ವನ್ನು ಕೇಳಿ 4 ವರ್ಷಗಳು ಕಳೆದರೂ, ಯಾವುದೇ ಮಾಹಿತಿಯನ್ನು ನೀಡಲು ಇದುವರೆವಿಗೂ ಅದಕ್ಕೆ ಸಾಧ್ಯವಾಗಿಲ್ಲ. ಇದು ತುಂಬಾ ಸೂಕ್ಷ್ಮ ಮತ್ತು ಮೂಲ ಮಾಹಿತಿ ಯಾದ್ದರಿಂದ ಸಾರ್ವಜನಿಕವಾಗಿ ಹಂಚಿಕೊಳ್ಳಲು ಅಸಾಧ್ಯವೆಂದಿರುವ ಅಮೆರಿಕವು, ತನ್ನ ನ್ಯಾಟೋ ಮಿತ್ರರೊಂದಿಗೆ ಹಂಚಿಕೊಂಡಿರುವುದಾಗಿ ಹೇಳಿದೆ,

ಅಮೆರಿಕಾವು ಈಗಾಗಲೇ ರೊಮೇನಿಯಾ ದಲ್ಲಿ "ಏಜೀಸ್ ಸಿಸ್ಟಮ್" ಅನ್ನು ಸ್ಥಾಪಿಸಿದೆ, ಇದೀಗ ಪೋಲೆಂಡ್ ನಲ್ಲಿಯೂ ಏಜೀಸ್ ಸಿಸ್ಟಮ್ ಅನ್ನು ವಿಸ್ತರಿಸಲು ಮುಂದಾಗಿದೆ. ಐ.ಎನ್.ಎಫ್. ಒಪ್ಪಂದದಲ್ಲಿ ನಿಷೇಧಿಸಿರುವ ಈ ಸಿಸ್ಟಮ್ ನಲ್ಲಿರುವ "ಎಮ್. ಕೆ 41" ಕ್ಷಿಪಣಿ ಉಡಾವಣಾ ವ್ಯವಸ್ಥೆ ಜತೆಗೆ, ಭೂ–ಆಧಾರಿತ ಟೊಮಾಹಾಕ್ ಕ್ರೂಸ್ 1250–2500 ಕಿ.ಮಿ. ವ್ಯಾಪ್ತಿ ಕ್ಷಿಪಣಿ ಗಳ ಏಜೀಸ್ ಸಿಸ್ಟಮ್‌ನ್ನು ಅಮೆರಿಕ ಸ್ಥಾಪಿಸಿರುವುದು ಒಪ್ಪಂದದ ವಾಸ್ತವಿಕ ಉಲಂಘನೆ ಎಂದು ರಷ್ಯಾ ತಿರುಗಿಸಿ ಅಮೆರಿಕ ದ ಮೇಲೆನೇ ಪ್ರತ್ಯಾರೋಪ ಮಾಡಿದೆ. ಹೀಗೆ ಎರಡೂ ದೇಶಗಳ ನಡುವೆ ಐ.ಎನ್.ಎಫ್. ಒಪ್ಪಂದದ ಉಲಂಘನೆಗಳ ಕುರಿತಾದ ಆರೋಪ–ಪ್ರತ್ಯಾರೋಪಗಳು ಮುಂದುವರಿದಿವೆ. ಯುಎಸ್ ನ ಯಾವುದೇ ಯುರೋಪಿಯನ್ ಪಾಲುದಾರರು ರಷ್ಯಾದ ಉಲಂಘನೆಯ ಬಗ್ಗೆ ದೂರುಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿಲ್ಲವಾದ್ದರಿಂದ, ರಷ್ಯಾದ ಮೇಲಿನ ಅಮೆರಿಕದ ಆರೋಪದಲ್ಲಿ ಹುರುಳಿಲ್ಲದಂತಾಗಿದೆ.

ಚೀನಾದ ಮೇಲಿನ ಅಮೆರಿಕದ ಆರೋಪ ದಲ್ಲಿ ಸತ್ಯವಿಲ್ಲ. ಏಕೆಂದರೆ, ಚೀನಾವು ಐ.ಎನ್. ಎಫ್. ಒಪ್ಪಂದದ ಅಡಿಯಲ್ಲಿ ಬರುವುದೇ ಇಲ್ಲ. ಐ.ಎನ್.ಎಫ್. ನಿಂದ ಹೊರ ಬರುತ್ತಿರುವ ಅಮೆರಿಕಾಕ್ಕೆ ಇದು ಹೊಸದಾದ ಮತ್ತೊಂದು ಸುಳ್ಳು ಕಾರಣವಾಗಿದೆ. ಚೀನಾದ ವಿಜ್ಞಾನಿಗಳ ಪ್ರಕಾರ, ಐ.ಎನ್.ಎಫ್. ಕ್ಷಿಪಣಿ ಗಳು ಸೇರಿದಂತೆ, ಒಟ್ಟು 280 ಪರಮಾಣು ಸಿಡಿತಲೆಗಳ ಶಸ್ತ್ರಾಸ್ತ್ರಗಳನ್ನು ಮಾತ್ರ ಚೀನಾವು ದಾಸ್ತಾನು ಹೊಂದಿದೆ. ಇದರಲ್ಲಿ ವಾಯು, ಸಮುದ್ರ ಮತ್ತು ಭೂ–ಆಧಾರಿತ ಕ್ಷಿಪಣಿ ಗಳು ಒಳಗೊಂಡಿವೆ. ಚೀನಿಯರು ಕ್ರೂಸ್ ಕ್ಷಿಪಣಿ ಗಳನ್ನು ಹೊಂದಿದ್ದಾರೆ ಎಂದು ಅಮೆರಿಕದ ವಿಜ್ಞಾನಿಗಳು ಹೇಳಿದ್ದಾರೆಯಾದರೂ, ಚೀನಾವು ಇವುಗಳು ವಾಯು–ಆಧಾರಿತ ಆವೃತ್ತಿಗೆ ಸೀಮಿತವಾಗಿವೆ ಎಂದು ಸಮರ್ಥಿಸಿಕೊಂಡಿದೆ. ಆದರೆ ಲಭ್ಯವಿರುವ ಮಾಹಿತಿಗಳ ಪ್ರಕಾರ, ಅಮೆರಿಕ–6,450, ರಷ್ಯಾ–6,850 ಪ್ರಸ್ತುತ ಕ್ಷಿಪಣಿ ಶಸ್ತ್ರಾಸ್ತ್ರಗಳ ದಾಸ್ತಾನು ಹೊಂದಿವೆ. ಇವುಗಳ ಮುಂದೆ ಚೀನಾದಲ್ಲಿನ ಕ್ಷಿಪಣಿ–ಶಸ್ತ್ರಾಸ್ತ್ರಗಳ ಸಂಖ್ಯೆ ತೀರಾ ಕಡಿಮೆ. ಇದರಿಂದ ಅಮೆರಿಕಾಕ್ಕೆ ಚೀನಾದಿಂದ ಬೆದರಿಕೆ ಇದೆ ಎಂಬ ಆರೋಪ ದಲ್ಲಿಯೂ ಹುರುಳಿಲ್ಲ ಎಂಬುದು ಗೊತ್ತಾಗುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಅಮೆರಿಕವು ಎಲ್ಲಾ ಅಣ್ವಸ್ತ್ರ ನಿರ್ಬಂಧ ಒಪ್ಪಂದಗಳಿಂದ ಹೊರ ಬಂದು, ತನ್ನಲ್ಲಿ ದಾಸ್ತಾನು ಇರುವ 6,450 ಕ್ಷಿಪಣಿ ಗಳ ಸಂಖ್ಯಾ ಬಲವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ದಾಪುಗಾಲು ಹಾಕಲು ಮುಂದಾಗಿದೆ. ಹಾಗೆಯೇ, ವಿಶ್ವದ ಏಕಮಾತ್ರ ಸೂಪರ್ ಪವರ್ ಆಗಿರುವ 90 ರ ದಶಕದ ಸ್ಥಾನ ಕ್ಕೆ ಮರಳಲು ಅಮೆರಿಕ ಬಯಕೆ ಹೊಂದಿದೆ. ಈ ಉದ್ದೇಶಗಳನ್ನು ಸಾಧಿಸಲು, ಪ್ರಸ್ತುತ ವ್ಯಾಪಾರ ಮತ್ತು ಭೂ ಯುದ್ಧಗಳು ವಿಫಲವಾದಾಗ, "ಗೆಲುವು ಸಾಧಿಸುವ" ಪರಮಾಣು ಯುದ್ಧದಲ್ಲಿ ನಂಬಿಕೆಗೆ ಅಮೆರಿಕ ಮತ್ತೆ ಮರಳಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.



JANASHAKTHI KANNADA VARA PATRIKE NOVEMBER 12-18, 2018 Price: Rs. 10/- Date of Publication: 9 NOVEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆಯಬೇಕು: ಯೆಚುರಿ

ಇಂದು ಬಂಡವಾಳಶಾಹಿ ತಾನೇ ಸೃಷ್ಟಿಸಿರುವ ಬಿಕ್ಕಟ್ಟಿನಿಂದ ಹೊರಬರಲಾರದೇ ಸಮಸ್ಯೆ ಅನುಭವಿಸುತ್ತಿದೆ. ತನ್ನ ಬಿಕ್ಕಟ್ಟನ್ನು ಪರಿಹರಿಸಲು ದುಡಿಯುವ ಜನರ ಮೇಲೆ ಇನ್ನಷ್ಟು ತೀವ್ರ ಶೋಷಣೆಯನ್ನು ಹೇರುತ್ತಿದೆ. ಇದರ ವಿರುದ್ಧ ಜಗತ್ತಿನಾದ್ಯಂತ ದುಡಿಯುವ ಜನರ ಹೋರಾಟಗಳು ಪ್ರತಿರೋಧಗಳು ಹೆಚ್ಚುತ್ತಿವೆ. ಭಾರತದಲ್ಲಿ ಕೂಡಾ ಕಾರ್ಮಿಕರ, ರೈತರ ಮತ್ತು ರೈತ-ಕಾರ್ಮಿಕರ ಜಂಟಿಯಾದ ಬೃಹತ್ ಆಂದೋಲನಗಳು ಎದ್ದು ಬರುತ್ತಿವೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆಯದೆ ದುಡಿಯುವ ಜನರ ಬವಣೆಗಳನ್ನು ನಿವಾರಿಸಲು ಸಾಧ್ಯವಿಲ್ಲ. ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಅವರು ಹೇಳಿದರು. ಅವರು ಕೊಪ್ಪಳದಲ್ಲಿ ಏರ್ಪಡಿಸಿದ್ದ ಮಹಾನ್ ಕ್ರಾಂತಿಕಾರಿ ಯುಗಪುರುಷ ಕಾರ್ಲ್ ಮಾರ್ಕ್ಸ್ ಅವರ ದ್ವಿಶತಮಾನೋತ್ಸವ ಮತ್ತು ಅವರ ಮೇರುಕೃತಿ 'ಬಂಡವಾಳ'ದ ಮೊದಲ ಸಂಪುಟದ ಪ್ರಕಟಣೆಯ 150 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಏರ್ಪಡಿಸಿದ್ದ ಬೃಹತ್ ಸಮಾವೇಶದಲ್ಲಿ ಮಾತನಾಡುತ್ತಿದ್ದರು. ಇದನ್ನು ಸಿಪಿಐ(ಎಂ) ಕೊಪ್ಪಳ ಜಿಲ್ಲಾ ಸಮಿತಿ ಏರ್ಪಡಿಸಿತ್ತು.

ಇದಕ್ಕಿಂತ ಮೊದಲು ಯೆಚುರಿಯವರು ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮಾರ್ಕ್ಸ್ ಸ್ವತಃ ಸದಸ್ಯನಾಗಿದ್ದ ಯುವ ಹೆಗೆಲಿಯನ್ನರ ವಾಗ್ವಾದಗಳಿಂದ ಹೇಗೆ ಬೆಳೆಯಿತು ಎಂದು ವಿವರಿಸಿದರು. ಇರವು (ಅಸ್ತಿತ್ವ) ಮತ್ತು ಅರಿವು(ಪ್ರಜ್ಞೆ)ಗಳ ನಡುವಿನ ಸಂಬಂಧವನ್ನು ಅರ್ಥೈಸುವಲ್ಲಿ ಪ್ರಮುಖ ಕೊಡುಗೆ ನೀಡಿದ ಅರಿವು ಇರವಿನಿಂದ ಹುಟ್ಟುತ್ತದೆ ಎಂಬ ಮಾರ್ಕ್ಸ್‌ವಾದದ ಪ್ರತಿಪಾದನೆಯ ಮಹತ್ವವವನ್ನು ಅವರು ವಿವರಿಸಿದರು.

ಮುಂದೆ ಮಾನವ ತನ್ನ ಜೀವನಾಧಾರ ಸಾಧನಗಳನ್ನು ಉತ್ಪಾದಿಸುವಲ್ಲಿ ಇತರ ಮಾನವರೊಡನೆ ಏರ್ಪಡಿಸಿಕೊಳ್ಳುವ ಉತ್ಪಾದನಾ ವಿಧಾನ ಮತ್ತು ಸಂಬಂಧಗಳು ಹೇಗೆ ವಿಕಾಸಗೊಳ್ಳುತ್ತವೆ, ಈ ವಿಕಾಸದಲ್ಲಿ ಉತ್ಪಾದನಾ ಸಾಧನಗಳ ಒಡೆತನ ಒಂದು ಪ್ರಮುಖ ಅಂಶವಾಗುತ್ತದೆ ಎಂದು ವಿವರಿಸಿದರು. ಈ ವಿಕಾಸವನ್ನು ತನ್ನದೇ ಆದ ರೀತಿಯಲ್ಲಿ ಹಿಡಿದಿಡುವ ಅವರ ಮೆಚ್ಚಿನ 'ದಶಾವತಾರ'ದ ಪರಿಕಲ್ಪನೆಯ ಉದಾಹರಣೆಯೊಂದಿಗೆ ವಿವರಿಸಿದರು. ಬಂಡವಾಳಶಾಹಿ ವ್ಯವಸ್ಥೆಯನ್ನು ವಿವರಿಸುತ್ತಾ, ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲೇ ಶೋಷಣೆ ಅಡಗಿದೆ. ಒಂದು ಪ್ರಾಮಾಣಿಕ ಬಂಡವಾಳಶಾಹಿ ಎಂದುಕೊಳ್ಳುವವರೂ ದುಡಿಯುವವರ ವಿಚಾರದಲ್ಲಿ ಶೋಷಕರೇ ಆಗಿರುತ್ತಾರೆ. ಏಕೆಂದರೆ ಉತ್ಪಾದನಾ ಸಾಧನಗಳ ಒಡೆತನ ಇರುವವರು ಬಂಡವಾಳಶಾಹಿಯಾಗುತ್ತಾರೆ. ಇವರು ಸಂಚಯಿಸುವ ಮಿಗುತಾಯ ಮೌಲ್ಯದಲ್ಲಿಯೇ ಈ ಶೋಷಣೆ ಅಡಗಿದೆ. ಮಿಗುತಾಯ ಮೌಲ್ಯವು ಇಡೀ ಸಮಾಜದ ಅಭಿವೃದ್ಧಿಗೆ ವಿನಿಯೋಗವಾದರೆ ಅದು ಸಮಾಜವಾದವಾಗುತ್ತದೆ. ಒಂದುವೇಳೆ ಈ ಮಿಗುತಾಯ ಮೌಲ್ಯವು ಓರ್ವ ವ್ಯಕ್ತಿಯಲ್ಲಿ ಶೇಖರಣೆಯಾಗುವುದೇ ಬಂಡವಾಳಶಾಹಿ ವ್ಯವಸ್ಥೆಯಾಗಿರುತ್ತದೆ., ಎಂದರು.

ಹಾಗಾಗಿ ಒಂದು ಸಮಾಜದಲ್ಲಿ ಉತ್ಪಾದನೆ ಹೇಗೆ ಆಗುತ್ತದೆ ಮತ್ತು ಮಿಗುತಾಯ ಯಾರ ಪಾಲಾಗುತ್ತದೆ ಎಂಬುದರ ಆಧಾರದಲ್ಲಿ ಆ ಸಮಾಜದ ಸ್ವರೂಪವನ್ನು ನಿರ್ಧರಿಸಲಾಗುತ್ತದೆ. ಪ್ರಸ್ತುತ ನಾವಿರುವ ಶೋಷಣಾ

■ ವಸಂತರಾಜ ಎನ್.ಕೆ.

ಸಮಾಜವನ್ನು ಬದಲಿಸುವುದೇ ನಮ್ಮ ಆದ್ಯ ಕೆಲಸ, ಎಂದು ಪ್ರತಿಪಾದಿಸಿದರು. ಬಂಡವಾಳಗಾರರಲ್ಲಿಯ ಪೈಪೋಟಿಯೇ ಹೊಸ ತಂತ್ರಜ್ಞಾನವನ್ನು ಆವಿಷ್ಕರಿಸುವ, ಅಭಿವೃದ್ಧಿ ಪಡಿಸುವ ತುಡಿತದಲ್ಲಿ ಇರುತ್ತದೆ. ಏಕೆಂದರೆ ಈ ನವನವೀನ ತಂತ್ರಜ್ಞಾನ ಬಳಸದಿರುವವರು ಪೈಪೋಟಿಯಲ್ಲಿ ಹಿಂದೆ ಬೀಳುತ್ತಾರೆ. ಹಾಗಾಗಿ ಅದು ಅವರ ಅಗತ್ಯ. ಜಗತ್ತಿನಲ್ಲಿ ಅಭಿವೃದ್ಧಿ ಪ್ರಕ್ರಿಯೆ ಎಲ್ಲಾ ಜನರಿಗೆ ಸಿಗುವಂತಾಗಲು ವೈಜ್ಞಾನಿಕವಾಗಿ ಹಂಚಿಕೆಯಾಗಬೇಕೆಂದರೆ ಬಂಡವಾಳಶಾಹಿಯನ್ನು ಕಿತ್ತೆಸೆಯಲೇ ಬೇಕು. ಇದು ಮಾನವ ಸಮಾಜದ ಇಂದಿನ ಅಗತ್ಯವಾಗಿದೆ, ಎಂದರು.

ಮಾರ್ಕ್ಸ‌್‌ವಾದ ಕೇವಲ ತಾತ್ವಿಕ ವಿಚಾರವಲ್ಲ, ಶೋಷಣೆಗೊಳಗಾದವರ ಪರವಾಗಿ ನೇರವಾಗಿ ಕಾರ್ಯಾಚರಣೆಗಿಳಿಯುವ ವೈಜ್ಞಾನಿಕ ವಿಧಾನವಾಗಿದೆ. ಜಾಗತಿಕ ನೆಲೆಯಲ್ಲಿ ಸಮಾಜವಾದಿ ಕ್ರಾಂತಿಯಾಗದಿರುವುದರಿಂದ ಮತ್ತು ಸೋವಿಯೆಟ್ ಒಕ್ಕೂಟದಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯಿಂದ ಮಾರ್ಕ್ಸ‌್‌ವಾದ ವಿಫಲವಾಗಿದೆ, ಅಪ್ರಸ್ತುತವಾಗಿದೆ ಎನ್ನಲಾಗುತ್ತದೆ. ಆದರೆ ಮಾರ್ಕ್ಸ‌್‌ವಾದದಲ್ಲಿ ತಪ್ಪಿಲ್ಲ. ತಪ್ಪಿರುವುದು ಅದನ್ನು ಅನ್ವಯಿಸುವ ವಿಧಾನದಲ್ಲಿ, ಜಾರಿ ಮಾಡಲು ಹೋಗುವವರಲ್ಲಿ ಇರುವ ತಪ್ಪುಗಳಿರಬಹುದಷ್ಟೇ. ಏಕೆಂದರೆ ಮಾರ್ಕ್ಸ‌್‌ವಾದವು ನಿರ್ದಿಷ್ಟ ಪರಿಸ್ಥಿಯ ನಿರ್ದಿಷ್ಟ ಅವಲೋಕನ, ವಿಶ್ಲೇಷಣೆ ಆಧಾರದಲ್ಲಿ ಬದಲಾವಣೆಯನ್ನು ಬಯಸುತ್ತದೆ. ಪರಿಸ್ಥಿತಿ ಬದಲಾದಾಗ ನಮ್ಮ ವಿಶ್ಲೇಷಣೆ ಬದಲಾಯಿಸದೆ ಹೋದರೆ ತಪ್ಪುಗಳಾಗುತ್ತವೆ ಎಂದು ವಿವರಿಸಿದರು.

ಇದೇ ಎಳೆಯನ್ನು ಮುಂದುವರೆಸುತ್ತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ,ಶ್ರೀರಾಮರೆಡ್ಡಿ ಅವರು ಮಾರ್ಕ್ಸ‌್‌ವಾದ ನಡೆಯುತ್ತಿರುವ ದಾಳಿ ಮತ್ತು ಅದನ್ನು ಎದುರಿಸುವ ಬಗೆ ಕುರಿತು ಮಾತನಾಡಿದರು. ಮಾರ್ಕ್ಸ‌್‌ವಾದದ ಮೇಲೆ ದಾಳಿ ಹೊಸದಲ್ಲ. ಆದರೆ ಸೋವಿಯೆಟ್ ಪತನದ ನಂತರ ಈ ದಾಳಿ ಬಹಳ ತೀವ್ರವಾಗಿದೆ. ಮಾರ್ಕ್ಸ‌್‌ವಾದ ಅಪ್ರಸ್ತುತ, ಇಂದಿನ ಸಮಸ್ಯೆಗಳಿಗೆ ಪರ್ಯಾಯವಲ್ಲ ಎಂಬ ಪ್ರಚಾರದ ಅಬ್ಬರ ಕಳೆದ ಮೂರು ದಶಕಗಳಲ್ಲಿ ಜೋರಾಗಿದೆ. ಆದರೆ ಈ ಮೂರು ದಶಕಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ತನ್ನ ಬಿಕ್ಕಟ್ಟುಗಳಿಗೆ ಪರಿಹಾರ ಕಂಡುಹೋಗಿಲ್ಲ. ಆರ್ಥಿಕ ಮಾತ್ರವಲ್ಲ, ತೀವ್ರವಾದ್ರ ಸಾಮಾಜಿಕ ರಾಜಕೀಯ ಸಾಂಸ್ಕೃತಿಕ ಬಿಕ್ಕಟ್ಟನ್ನೂ ಎದುರಿಸುತ್ತಿದೆ. ಪರ್ಯಾಯ ಮತ್ತು ಪರಿಹಾರ ಸೂಚಿಸುವ ಇನ್ಯಾವುದೇ ಸಿದ್ಧಾಂತ ಮುಂದೆ ಬಂದಿಲ್ಲ.



ಮಾರ್ಕ್ಸ‌್‌ವಾದ ಸರಿಯಿಲ್ಲವೆನ್ನುವವರು ಸಮಾಜವನ್ನು ಪ್ರತಿಗಾಮಿ ವೈಚಾರಿಕತೆಯತ್ತ ಒಯ್ಯುತ್ತಿದ್ದಾರೆ. ಅಮಾನವೀಯ ವಿಭಜನಕಾರಿ ಆಡಳಿತದ ಮೂಲಕ ಜನತೆಯ ಮೇಲೆರಗುತ್ತಿದ್ದಾರೆ. ಬಲಪಂಥೀಯ ಶಕ್ತಿಗಳು ತಾವು ದೇಶದಲ್ಲಿ ಸೃಷ್ಟಿಸಿರುವ ಬಿಕ್ಕಟ್ಟಿನಿಂದ ಹೊರಬರಲು ಸಾಧ್ಯವಿಲ್ಲದವರು ವಿವಿಧ ತಂತ್ರವನ್ನು ರೂಪಿಸಿ ದೇಶದ ಜನತೆಗೆ ಸವಾಲಾಗಿ ಪರಿಣಮಿಸಿದ್ದಾರೆ. ಭಾವನಾತ್ಮಕ ಪ್ರಚೋದನೆಗಳು ಹೆಚ್ಚುತ್ತಿವೆ. ಮಹಿಳೆಯರಿಂದ ದೇವಸ್ಥಾನ ಪ್ರವೇಶದ ವಿಚಾರದಲ್ಲಿ ಶಬರಿಮಲೈಗೆ ಮಹಿಳೆಯರು ಹೋಗಬಾರದು ಎನ್ನುವಲ್ಲಿಯೂ ರಾಜಕೀಯ ಪ್ರೇರಿತವಾದ ಮತ್ತು ಪ್ರತಿಗಾಮಿ ಧೋರಣೆಯೇ ಅಡಗಿದೆ. ನಮ್ಮೆದುರು ಇಂದು ಈ ರಾಜಕೀಯ ಸವಾಲಿನ ಜೊತೆಗೆ ಸಂಘಪರಿವಾರದ ವೈಚಾರಿಕ ಸೈದ್ಧಾಂತಿಕ ಸವಾಲನ್ನು ಎದುರಿಸಬೇಕಾಗಿದ್ದು ಅದಕ್ಕಾಗಿ ಸನ್ನದ್ಧರಾಗಬೇಕಿದೆ. ಇಂಥ ಗಂಡಾಂತರ ಪರಿಸ್ಥಿತಿಯಿಂದ ದೇಶವನ್ನು ರಕ್ಷಿಸಲು ಮಾರ್ಕ್ಸ‌್‌ವಾದವೊಂದೇ ಪರ್ಯಾಯ ದಾರಿಯಾಗಿದೆ. ಎಂದು ಜಿ.ವಿ.ಎಸ್ ಘೋಷಿಸಿದರು.

ಸಿಪಿಐ(ಎಂ) ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ಜಿ. ನಾಗರಾಜ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರುಗಳಾದ ನಿರುಪಾದಿ ಸಾಗ್ವತ ಕೋರಿದರು, ಖಾಸಿಂ ಸರ್ದಾರ್ ನಿರೂಪಣೆಯನ್ನೂ, ಸುಂಕಪ್ಪ ಗದಗ ವಂದನಾರ್ಪಣೆಯನ್ನೂ ನೆರವೇರಿಸಿದರು.

ಜ.ಹೋ. ನಾರಾಯಣಸ್ವಾಮಿ ಇನ್ನಿಲ್ಲ !



ಹಿರಿಯ ಸಾಹಿತಿ ಹಾಗೂ ಚಿಂತಕರಾದ ಶ್ರೀಯುತ ಜ.ಹೋ. ನಾರಾಯಣಸ್ವಾಮಿಯವರ ನಿದನ ತೀವ್ರ ಅಘಾತವನ್ನುಂಟುಮಾಡಿದೆ. ಜಿಲ್ಲೆಯ ಹಾಗೂ ರಾಜ್ಯದ ಜನಪರ ಚಳುವಳಿಗಳೊಟ್ಟಿಗೆ ನಿರಂತರವಾದ ಸಂಪರ್ಕವನ್ನಿಟ್ಟುಕೊಂಡು ಮಾರ್ಗದರ್ಶನ ನೀಡುತ್ತಿದ್ದ ಜ.ಹೊ.ನಾ.ರವರ ಅಕಾಲಿಕ ಅಗಲಿಕೆ ಜನಪರ ಚಳುವಳಿಗಳಿಗೆ ತೀವ್ರ ನಷ್ಟ ಉಂಟುಮಾಡಿದೆ.

ಹಾಸನ ಜಿಲ್ಲೆಯಲ್ಲಿ ಜನ ವಿಜ್ಞಾನ ಚಳುವಳಿಯ ಸ್ಥಾಪಕರಲ್ಲೊಬ್ಬರಾಗಿದ್ದ ಜ.ಹೊ.ನಾ. ಅದರ ಮೊದಲ ಅಧ್ಯಕ್ಷರಾಗಿದ್ದರೂ ಸಹ. ಸ್ವಾಮಿ ವಿವೇಕಾನಂದ, ಕುವೆಂಪು ಮತ್ತು ಲೋಹಿಯಾರವರ ವಿಚಾರಗಳ ಅಧಿಕೃತ ಪ್ರಚಾರಕರಂತಿದ್ದ ಜ.ಹೊ.ನಾ. ರಾಜ್ಯದಾದ್ಯಂತ ಅವರ ವಿಚಾರಗಳನ್ನು ಪ್ರಚುರ ಪಡಿಸಲು ಹಲವಾರು ಉಪನ್ಯಾಸ ನೀಡಿದ್ದರಲ್ಲದೆ ಹಲವು ಪುಸ್ತಕಗಳನ್ನೂ ರಚಿಸಿದ್ದರು. ಹಾಗೂ ಸ್ವಾಮಿ ವಿವೇಕಾನಂದ ಮತ್ತು ಕುವೆಂಪುರವರ ಪ್ರಖರ ವೈಚಾರಿಕ ವಿಚಾರಗಳನ್ನು ಕನ್ನಡಿಗರಿಗೆ ಸಮರ್ಥವಾಗಿ ಮುಟ್ಟಿಸಿದೆ ಹೆಗ್ಗಳಿಕೆ ಜ.ಹೊ.ನಾ.ರವರದು.

ವೈದಿಕಶಾಹಿ, ಪುರೋಹಿತಶಾಹಿ, ಜಾತಿ-ಅಸ್ಪೃಷ್ಯತೆ, ಕೋಮುವಾದ ಮತ್ತು ಭ್ರಷ್ಟರಾಜಕೀಯ ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಜ.ಹೊ.ನಾ. ನಡೆಯಲ್ಲೂ ಸಹ ಹಾಗೆಯೇ ಬದುಕಿ ಎಲ್ಲರಿಗೂ ಮಾದರಿಯಾಗಿದ್ದರು.

ರೈತ ಮತ್ತು ಜನ ವಿಜ್ಞಾನ ಚಳುವಳಿಗಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಜ.ಹೊ.ನಾ. ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ ಮತ್ತು ಜನಪರ ಚಳುವಳಿಗಳೊಂದಿಗೂ ಸಂಪರ್ಕವಿಟ್ಟುಕೊಂಡಿದ್ದರು. ಎಡ ಚಳುವಳಿಯೊಂದಿಗೆ ನಿರಂತರ ಸಂವಾದಿಸುತ್ತಾ ಎಡ ಚಳುವಳಿಯ ಹಿತೈಷಿಯೂ ಆಗಿದ್ದರು. ಒಟ್ಟಿನಲ್ಲಿ ಜ.ಹೊ.ನಾ.ರವರ ಅಕಾಲಿಕ ನಿಧನ ರಾಜ್ಯದ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಜನಪರ ಹೋರಾಟಗಳಿಗೆ ದೊಡ್ಡ ನಷ್ಟ ಉಂಟುಮಾಡಿದೆ.

ಜ.ಹೊ.ನಾ.ರವರ ನಿಧನಕ್ಕೆ ಸಿಪಿಐ(ಎಂ) ತೀವ್ರ ಆಘಾತ ಹಾಗೂ ಸಂತಾಪ ವ್ಯಕ್ತಪಡಿಸಿದೆ. ಕೊಪ್ಪಳದಲ್ಲಿ ನಡೆಯುತ್ತಿರುವ ಸಿಪಿಐ(ಎಂ)ನ ರಾಜ್ಯ ಮಟ್ಟದ ಅಧ್ಯಯನ ಶಿಬಿರದಲ್ಲಿ ಜ.ಹೊ.ನಾ. ರವರ ನಿದನಕ್ಕೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಸಿಪಿಐಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮತ್ತು ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಹಾಸನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಇದ್ದರು.

ರಾಜ್ಯ ಮಟ್ಟದ ಅಧ್ಯಯನ ಶಿಬಿರ

ಕೊಪ್ಪಳದಲ್ಲಿ ಸಿಪಿಐ(ಎಂ)ನ ರಾಜ್ಯ ಮಟ್ಟದ ಅಧ್ಯಯನ ಶಿಬಿರ ನಡೆಯುತ್ತಿದ್ದು, ಈ ಕೆಳಗಿನ ವಿಷಯಗಳ ಬಗ್ಗೆ ಹಿರಿಯ ಸಂಗಾತಿಗಳು ಉಪನ್ಯಾಸ ಮಾಡಲಿದ್ದಾರೆ. ಪ್ರತಿ ಉಪನ್ಯಾಸದ ನಂತರ ಗುಂಪು ಚರ್ಚೆ, ಪ್ರಶ್ನೋತ್ತರಗಳು ಇರುತ್ತವೆ. ಶಿಬಿರ ನವೆಂಬರ್ 9 ರಿಂದ 13 ರವರೆಗೆ ನಡೆಯಲಿದೆ.

	ವಿಷಯ	ಉಪನ್ಯಾಸಕರು
1	ಸಿಪಿಐ(ಎಂ) ಕಾರ್ಯಕ್ರಮ ಮತು ಪ್ರಸ್ತುತ ರಾಜಕೀಯ ಕಾರ್ಯತಂತ್ರ	ಸೀತಾರಾಂ ಯೆಚುರಿ
2	ಸಿಪಿಐ(ಎಂ) ಸಂಘಟನಾ ತತ್ವಗಳು ಮತ್ತು ಕೊಲ್ಕತ್ತಾ ಪ್ಲೀನಂ ನಿರ್ಣಯಗಳು	ಎಸ್. ರಾಮಚಂದ್ರನ್ ಪಿಳ್ಳೆ
3	ಭಾರತದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸ	ಎಂ.ಎ.ಬೇಬಿ
4	ಮಾರ್ಕ್ಸ್‌ವಾದ ಎಂದರೇನು?	ಜಿ.ವಿ.ಶ್ರೀರಾಮರೆಡ್ಡಿ
5	ದ್ವಂದ್ವಮಾನ ಭೌತಿಕವಾದ	ಜಿ.ವಿ.ಶ್ರೀರಾಮರೆಡ್ಡಿ
6	ಚಾರಿತ್ರಿಕ ಭೌತವಾದ	ಜಿ.ವಿ.ಶ್ರೀರಾಮರೆಡ್ಡಿ
7	ರಾಜಕೀಯ ಅರ್ಥಶಾಸ್ತ್ರ	ವಿ.ಜೆ.ಕೆ. ನಾಯರ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**